
ರಂಜನೆ ಬೋಧನೆ ಪ್ರಬೋಧನೆ

ಲಂಕೇಶ್

23 ಸೆಪ್ಟೆಂಬರ್ 2015 ಪುಟ 20 ರೂ. 15/-



ಅಯ್ಲಾನ್ ದುರಂತ



ಕೆಕ್ಕಾರ ಮಠದಲ್ಲಿ ವಾಮಾಚಾರ?



ಬಿಬಿಎಂಪಿ

ಕೌನ್ಸಿಲರ್‌ಗಳ ಖರೀದಿ ಯತ್ನ ಪಂಕ್ಚರ್


ಚಿತ್ರದುರ್ಗ

ಬರಗೇರಮ್ಮನ ಹುಂಡಿಗೆ ...ರಗೆಟ್ಟ ಚೋರದ್ವಯರು

ಪರಿಷತ್ ಚುನಾವಣೆ:

ಕೊಂಡಯ್ಯನಿಗೆ ಬಳ್ಳಾರಿ 'ಸೂರ್ಯ'ನ ಝಳ

ಕೊಂದವರುಳಿವರೆ ಕೂಡಲಸಂಗಮ ದೇವಾ



ಉತ್ತರ ಭಾರತದಲ್ಲಿದ್ದ ಕೊಲ್ಲುವ ಕ್ರೂರ ಮೃಗೀಯ ಮನಸ್ಥಿತಿ ದಕ್ಷಿಣಕ್ಕೂ ವ್ಯಾಪಿಸುತ್ತಿದೆ. ನರೇಂದ್ರ ದಾಬೋಲ್ಕರ್ ನಂತರ ಈಗ ಕರ್ನಾಟಕದಲ್ಲಿ ಚಿಂತಕ ಎಂ.ಎಂ. ಕಲಬುರ್ಗಿ ದುಷ್ಟರ ಗುಂಡಿಗೆ ಬಲಿಯಾಗಿದ್ದಾರೆ. ವ್ಯಕ್ತಿಯನ್ನು ಕೊಲ್ಲುವ ಮೂಲಕ ವಿಚಾರಧಾರೆಯನ್ನು ಕೊಲ್ಲಲಾಗದು ಎಂಬುದನ್ನು ಇತಿಹಾಸದ ಉದ್ದಕ್ಕೂ ಕಂಡಿದ್ದರೂ ಈ ಮೂಢ ಮತಾಂಧರು ಇನ್ನೂ ಕೊಲ್ಲುವಂತಹ ಹೀನಕೃತ್ಯದಲ್ಲೆ ಸುಖಿಸುವುದು ಎಂತಹ ಧರ್ಮಕಾರ್ಯ? ಇದಕ್ಕಿಂತ ಹೇಡಿತನ ಇನ್ನೊಂದಿದೆಯಾ?

ಬುದ್ಧನನ್ನು ಕೊಂದರು... ಏಸು ಕ್ರಿಸ್ತನನ್ನು ಕೊಂದರು... ಬಸವಣ್ಣನವರನ್ನು ಕೊಂದರು... ಗಾಂಧಿಯನ್ನು ಕೊಂದರು... ಹೀಗೆ ಶತಮಾನಗಳಿಂದಲೂ ಸಮಾನತೆಯನ್ನು ಸಾರಿದ... ಮಾನವತಾವಾದವನ್ನು ಒತ್ತಿ ಹೇಳಿದ ದಾರ್ಶನಿಕರೆಲ್ಲರನ್ನೂ ಹೀಗೆ ಕೊಲ್ಲುತ್ತಲೇ ಬಂದಿದ್ದಾರೆ ಯಥಾಸ್ಥಿತಿವಾದಿ ಧರ್ಮಾಂಧರು. ಆದರೆ ದಾರ್ಶನಿಕರ ವಿಚಾರಧಾರೆಗಳನ್ನು ಕೊಲ್ಲಲಾಯಿತೆ? ಕೊಲ್ಲಲಾಗುವುದೇ? ವ್ಯಕ್ತಿಯನ್ನು ಭೌತಿಕವಾಗಿ ಕೊಲ್ಲುವುದರಿಂದ ಅವರು ಪ್ರತಿಪಾದಿಸಿದ ಸತ್ಯಗಳು ಸುಳ್ಳಾಗುವುದಿಲ್ಲ. ಮುಂದೆ ಉದ್ಭವಿಸುವ ವಿಚಾರವಂತರ ಧೈರ್ಯವನ್ನು ಕುಂದಿಸಲೂ ಆಗುವುದಿಲ್ಲ. ಹಾಗೆಯೇ ತಮ್ಮ ವಿಕೃತ ಮನಸ್ಥಿತಿಗಳನ್ನು ಹೇರಲೂ ಆಗುವುದಿಲ್ಲ. ಭೂಮಿ ಸ್ಥಿರವಾಗಿದೆ ಸೂರ್ಯ ಭೂಮಿಯ ಸುತ್ತಲೂ ಚಲಿಸುತ್ತದೆ ಎಂದು ನಂಬಿದ್ದ ಯಥಾಸ್ಥಿತಿವಾದಿಗಳ ಮೂಢನಂಬಿಕೆಗೆ ಕೊಪರ್ನಿಕಸ್‌ನ ಸಂಶೋಧನೆ; ಭೂಮಿಯೇ ಸುತ್ತುತ್ತಿದೆ ಸೂರ್ಯ ಸ್ಥಿರವಾಗಿದೆ ಎಂಬ ಕೊಪರ್ನಿಕಸ್‌ನ ಸತ್ಯವು ಹಿಡಿಸಲಿಲ್ಲ. ಅವನನ್ನು ಹಾಗೆ ಹೇಳಿದ್ದಕ್ಕಾಗಿ ಗಲ್ಲಿಗೇರಿಸಿ ಕೊಲ್ಲಲಾಯಿತು. ಆದರೆ ಅವನ ವಿಚಾರಧಾರೆಯನ್ನು ಕೊಲ್ಲಲಾಯಿತೆ? ಹತ್ತಿಕ್ಕಲಾಯಿತೆ? ಸುಳ್ಳುಮಾಡಲಾಯಿತೆ? ಇಷ್ಟು ಸಾಮಾನ್ಯ ತಿಳಿವಳಿಕೆ ಇಲ್ಲದ ದುಷ್ಟಕೂಟವೇ ಇಂತಹ ಕೃತ್ಯಗಳನ್ನು ಎಸಗಲು ಸಾಧ್ಯ.

ಕಲಬುರ್ಗಿಯಂತಹ ಶರಣ ತತ್ವದ ಆರಾಧಕ, ಮಾನವತಾವಾದಿ, ಸತ್ಯಶೋಧಕ, ವಿಚಾರಶೀಲ ಕವಿಹೃದಯದ ವ್ಯಕ್ತಿಯನ್ನು ಭೂಗತ ಲೋಕದ ಪಾತಕಿಯಂತೆ, ಉಗ್ರವಾದಿಯಂತೆ ರಿಯಲ್ ಎಸ್ಟೇಟ್ ದಂಧೆಕೋರರಂತೆ ಯಕಶ್ಚಿತ್ ಪುಡಿ ರೌಡಿಯಂತೆ ಗುಂಡಿಕ್ಕಿ ಕೊಲ್ಲುವ ಮಟ್ಟಕ್ಕೆ ಈ ದೇಶದಲ್ಲಿ ಧರ್ಮಾಂಧಶಕ್ತಿಗಳು ಮುಂದಾಗುತ್ತವೆ ಎಂದರೆ ಎಂತಹ ಅರಾಜಕತೆ ಇದು. ಎಲ್ಲಿದೆ ಪ್ರಜಾಪ್ರಭುತ್ವ? ಎಲ್ಲಿದೆ ಅಭಿವ್ಯಕ್ತಿ ಸ್ವಾತಂತ್ರ್ಯ? ಅದೂ ಕರ್ನಾಟಕದಂತಹ ಶಾಂತಿ ಸೌಹಾರ್ದಕ್ಕೆ ಹೆಸರಾದ ಮಣ್ಣಿನಲ್ಲೂ ಗುಂಡುಗಳು ಮೊರೆಯುತ್ತವೆ ಎಂದರೆ ಧರ್ಮಾಂಧರ ರಾಜ್ಯವಾಗುತ್ತಿದೆಯಾ ಕರ್ನಾಟಕ ಎಂಬ ಆತಂಕವಾಗುತ್ತಿದೆ.

ಅಷ್ಟಕ್ಕೂ ಕಲಬುರ್ಗಿಯವರು ಮಾಡಿದ್ದ ಘೋರ ಅಪರಾಧವಾದರೂ ಏನು? ಯಾರನ್ನಾದರು ವೈಯಕ್ತಿಕವಾಗಿ ಟೀಕಿಸಿದ್ದರೆ? ಯಾವುದಾದರೂ ಅಧಿಕಾರವನ್ನು ದುರುಪಯೋಗಪಡಿಸಿಕೊಂಡಿದ್ದರೆ? ಉಗ್ರವಾದವನ್ನು ಪ್ರತಿಪಾದಿಸಿದ್ದರೆ? ಅಥವಾ ದೇಶದ್ರೋಹದ ಹೇಳಿಕೆ ನೀಡಿದ್ದರೆ? ಏನೂ ಇಲ್ಲ. ಅವರು ಸತ್ಯದ ಪರ ಮಾತನಾಡುತ್ತಿದ್ದರು. ವೈಚಾರಿಕ ಸಂಶೋಧನೆಗಳನ್ನು ನಡೆಸುತ್ತಿದ್ದರು. ಮೂಢನಂಬಿಕೆಗಳಿಗೆ ಬಲಿಯಾಗದಿರಿ ಎಂದು ಜನರನ್ನು ಎಚ್ಚರಿಸುತ್ತಿದ್ದರು ಅಷ್ಟೆ! ಇದುವೇ ಧರ್ಮಾಂಧ ದುಷ್ಟರಿಗೆ ಅಪರಾಧವಾಗಿ ಕಂಡಿತೆಂದರೆ ಎಷ್ಟು ಕ್ರೂರವಾಗಿದೆ ಯಥಾಸ್ಥಿತಿವಾದಿಗಳ ಮನಸ್ಥಿತಿ ಎಂಬುದನ್ನು ಲೆಕ್ಕಹಾಕಿ.

ಮಹಾರಾಷ್ಟ್ರದ ನರೇಂದ್ರ ದಾಬೋಲ್ಕರ್ ಅವರು ಮಾಡಿದ್ದು ಇಷ್ಟೇ. ಇದರಿಂದ ನಮಗೆ ತಿಳಿದು ಬರುವುದೇನೆಂದರೆ, ಸಾಮಾಜಿಕ ಚಲನಶೀಲತೆಯನ್ನು ಯಥಾಸ್ಥಿತಿವಾದಿಗಳು ಎಂದಿಗೂ ಒಪ್ಪಿಕೊಳ್ಳುವುದಿಲ್ಲ ಎಂಬುದು. ಯಥಾಸ್ಥಿತಿಯನ್ನು ಉಳಿಸಿಕೊಳ್ಳುವುದರಲ್ಲೇ ಅವರ ಶ್ರೇಷ್ಠತೆಯಿದೆ... ಯಥಾಸ್ಥಿತಿ ಉಳಿಸಿಕೊಳ್ಳುವುದರಲ್ಲೇ ಅವರ ಅಧಿಕಾರವಿದೆ... ಬದುಕಿದೆ... ಅದು ಬದಲಾದರೆ ಇವರು ಬಯಲಾಗುತ್ತಾರೆ... ಬೆತ್ತಲಾಗುತ್ತಾರೆ. ಅದುವೇ ಈ ದುಷ್ಟ ಧರ್ಮಾಂಧರಿಗಿರುವ ಭಯ.

ಅರ್ಥವಾಯಿತಲ್ಲ ಭಯ ಅಭದ್ರತೆ ಇರುವುದು ಯಾರಿಗೆ ಎಂದು? ಇಂತಹ ಬೆನ್ನಹಿಂದಿನ, ಮುಸುಕಿನ ಹೊಡೆತಗಳಿಗೆ ವಿಚಾರವಂತರೆಲ್ಲರೂ ಭಯಭೀತರಾಗಿ ಬಿಡುತ್ತಾರೆಂಬ ಅಪ್ರಬುದ್ಧತೆಯನ್ನು ಯಥಾಸ್ಥಿತಿವಾದಿ ರೋಗಿಗಳು ತಾವಾಗಿಯೇ ಬಿಟ್ಟರೆ ಒಳ್ಳೆಯದು. ಯಾಕೆಂದರೆ ಸತ್ಯ ಹೇಳುವವರಿಗೆ, ವೈಚಾರಿಕತೆಯನ್ನು ಪ್ರತಿಪಾದಿಸುವವರಿಗೆ ಯಾವುದೇ ಅಂಜಿಕೆ ಆತಂಕಗಳು ಇರುವುದಿಲ್ಲ. ಸಾವಿಗೆ ಹೆದರುವುದಿಲ್ಲ ಎಂಬುದು ಗೊತ್ತಿರಲಿ. ನಾವು ಎಂದಿಗೂ ಹಿಂಜರಿಯುವುದಿಲ್ಲ. ಸತ್ಯವನ್ನು ಪ್ರತಿಪಾದಿಸುತ್ತಾ ಸಾಯುವುದರಲ್ಲಿ ವಿಚಾರಶೀಲರಿಗೆ ಸುಖವಿದೆ. ನಮ್ಮಂಥವರು ಕೋಟಿ ಕೋಟಿ ಜನರಿದ್ದೇವೆ. ಎಷ್ಟು ಜನರನ್ನು ಕೊಲ್ಲುವಿರಿ? ಕೊಲ್ಲುವ ಕೈಗಳಿಗಿಂತಲೂ ಸತ್ಯಕ್ಕೆ ಮುಖಾಮುಖಿಯಾಗುವ ಗುಂಡಿಗೆಗಳ ಸಂಖ್ಯೆಯೇ ದೊಡ್ಡದಿದೆ. ಎಷ್ಟು ಗುಂಡುಗಳಿವೆ ನಿಮ್ಮ ಬಳಿ ಹೇಳಿರೋ ಮತಾಂಧರೆ.

ಮನುಷ್ಯತ್ವವನ್ನೇ ಕೊಲ್ಲುತ್ತಾ ಅದೆಷ್ಟು ದಿನಗಳು ನೀವು ಸುಖವಾಗಿರಬಲ್ಲಿರಿ? ಮನುಷ್ಯರನ್ನೇ ಕೊಂದು ಅದ್ಯಾವ ಸಾಮ್ರಾಜ್ಯವನ್ನು ಕಟ್ಟಿ ಆಳುತ್ತೀರಿ? ಕೊಲ್ಲು... ನಿಮ್ಮೊಳಗಿರುವ ಸಣ್ಣತನ, ದುಷ್ಟತನ, ತಿ... ದಡ್ಡತನಗಳನ್ನು ಮೊದಲು ಕೊಂದುಕೊಳ್ಳಿ, ಸೌಹಾ... ವಿಶಾಲ ವಿಶ್ವವೇ ನಿಮ್ಮನ್ನು ಸ್ವಾಗತಿಸುತ್ತದೆ. ... ಮದ್ದುಗುಂಡು ಚಾಕುಚೂರಿಗಳಿಂದಲೂ ... ಕೊಲ್ಲಲಾಗುವುದೇ ಇಲ್ಲ ಎಂಬುದು ನಿಮಗೆ ... "ಧರ್ಮನಿಂದನೆಗಾಗಿ ಈ ಶಿಕ್ಷೆ ದೈವನಿಂದನೆ ... ಎಲ್ಲರನ್ನೂ ಕೊಲ್ಲುತ್ತೇವೆ..." ಎಂಬ ವಿಕೃತ ಹೇ... ಸುಳ್ಳು ಖಾತೆಗಳ ಹೆಸರಲ್ಲಿ ಸಾಮಾಜಿಕ ಜಾಲತಾ... ಹರಿದಾಡುತ್ತಿವೆ. ಮುಂದೆ ಯಾರ್ಯಾರು ಧ... ಕೊಲೆಪಾತಕರ ಪಟ್ಟಿಯಲ್ಲಿದ್ದಾರೆ ಎಂಬ... ಬರೆದುಕೊಳ್ಳುತ್ತಿದ್ದಾರೆ. ಅವರಿಗೆ ಕನಿಷ್ಠ ಭಯೋ... ಗಿರುವಷ್ಟೂ ಧೈರ್ಯವಿಲ್ಲದಿರುವುದೇ ನಾಚಿಕೆಗೇಡಿ... ಭಯೋತ್ಪಾದಕರು ತಮ್ಮ ಕೃತ್ಯಗಳನ್ನು ಮು... ಮಾಡುತ್ತಾರೆ ಮತ್ತು ಅದರ ಹೊಣೆ ಹೊತ್ತುಕೊ...

ವಿಚಾರವಾದವನ್ನು ಮಂಡಿಸುವವರು ಹೇಗೆ ... ಎಲ್ಲರೆದುರು ಪ್ರತಿಪಾದಿಸುವರೋ ಹ... ಕೊಲ್ಲುವವರೂ ನೇರಾನೇರ ಕೊಂದರೆ ಅದನ್ನು ... ಮುಖಾಮುಖಿ ಸಮರ ಎಂದಾದರೂ ಬಣ್ಣಿಸ... ಆದರೆ ಹೀಗೆ ಬೆನ್ನಹಿಂದೆ ಬರುವ ಸುಳ್ಳು ಹೆಸರಲ್ಲಿ... ಮುಖವಾಡ ಧರಿಸಿ ಬರುವವರನ್ನು ಧ... ಪ್ರತಿಪಾದಕರೆನ್ನಬೇಕೆ? ದೇವರನ್ನು ಕಾಪಾಡ... ಎನ್ನಲಾದೀತೆ? ಇದಕ್ಕಿಂತಲೂ ಹೇಡಿತನ ಯಾ... ಇಂತಹ ಹೇಡಿತನದಿಂದ ತಮ್ಮ ಯಥಾಸ್ಥಿತಿ ಸಿದ... ಉಳಿಸಿಕೊಳ್ಳಬಹುದೆ? ಇದಕ್ಕೆ ದೇವರ ಬೆಂಬಲ... ದೇವರು ಎಂಬುವವನು ಇದ್ದರೆ... ಅವನು ಇಂತ... ಪರವಾಗಿದ್ದಾನೆ ಎಂಬುದೇ ಆದರೆ ಆ ದೇವರಿಗೂ...

■ ಡಾ. ಕೃಷ್ಣಮೂರ್ತಿ ಚ...

ಮೌಢ್ಯಮೇವ ಜಯತೆ!?

ಸಂಪ್ರದಾಯವಾದಿಗಳಿಂದ ಹಿಂಸೆಗೊಳಪಟ್ಟು ನರಳಿದ ಆವತ್ತಿನ ಬಸವಣ್ಣನಿಂದ ಹಿಡಿದು ಇತ್ತೀಚೆಗೆ ಅನುಮಾನಾಸ್ಪದವಾಗಿ ಮರಣ ಹೊಂದಿದ ನಮ್ಮ ರಾಜ್ಯದ ಲಿಂಗಣ್ಣ ಸತ್ಯಂಪೇಟೆ ಆಗಲಿ, ಸಂಶೋಧಕ ಕಲ್ಬುರ್ಗಿಯವರಾಗಲಿ, ಯುವಕನೊಬ್ಬನಿಂದ ಹಲ್ಲೆಗೊಳಗಾದ ಮಂಗಳೂರಿನ ಹಿರಿಯ ಸದ್ಭಾವನಾವಾದಿ ಚಾಕ್ರಬೈಲ್ ಸುರೇಶ್ ಭಟ್ಟರಾಗಲೀ, ನೆರೆ ರಾಜ್ಯದ ಚಿಂತಕರಾದ ದಾಬೋಲ್ಕರ್, ಪನ್ಸಾರೆಯವರಾಗಲಿ, ಇವರೆಲ್ಲರ ಮೇಲಿನ ದಾಳಿಗಳನ್ನು ನೋಡಿದರೆ ಯಾವತ್ತಿದ್ದರೂ ಮೌಢ್ಯಕ್ಕೇ ಗೆಲುವು ಎಂಬುದು ಅಡಿಗಡಿಗೆ ಸಾಬೀತಾಗುತ್ತಲೇ ಇದೆ.



ಕಳೆದ ಸಂಚಿಕೆಯಲ್ಲಿ ಬಂದ ಪ್ರೊ ಶಿವರಾಮಯ್ಯನವರ 'ವಾಸ್ತು' ಕತೆಗಳನ್ನು ಓದಿದಾಗ ಜನರು ಮೌಢ್ಯಾಚರಣೆಗಳ ಬಗ್ಗೆ ಎಷ್ಟೊಂದು ಒಗ್ಗಿ ಹೋಗಿದ್ದಾರೆಂಬುದು ತಿಳಿಯುತ್ತದೆ. ಇದನ್ನು ತಪ್ಪೋ ಸರಿಯೋ ಎಂದು ಯೋಚಿಸುವ ವ್ಯವಧಾನ ಕೂಡಾ ಯಾರಿಗೂ ಇಲ್ಲ. ಮಾಟಮಂತ್ರದ ಹೆಸರಲ್ಲಿ ಯಾರೋ ಸತ್ತದ್ದಕ್ಕೆ ಇವರ ಮಾಟವೇ ಕಾರಣವೆಂದು ಅಮಾಯಕ ಹೆಂಗಸರನ್ನು ಬೆತ್ತಲೆಗೊಳಿಸಿ ಊರಲ್ಲಿ ಮೆರವಣಿಗೆ ಮಾಡಿ ಕೊಲ್ಲುವ ಘಟನೆಗಳಿಂದ ಹಿಡಿದು ವಾಸ್ತು ಜೋತಿಷ್ಯದ ಹುಚ್ಚಿಗೆ ಬಿದ್ದು ಬೀದಿಪಾಲಾಗುವ ಅಮಾಯಕರ ತನಕ ಮೌಢ್ಯಗಳ ವಿಜೃಂಭಣೆ ನಡೆಯುತ್ತಲೇ ಇದೆ. ಜನ ವಿದ್ಯಾವಂತರಾದಷ್ಟು ಇವು ಕಡಿಮೆಯಾಗುವ ಬದಲು ಮೌಢ್ಯಗಳಿಗೆ ಇವರು ವೈಜ್ಞಾನಿಕತೆಯ ಟಚ್ ಕೊಟ್ಟು ಅದನ್ನು ಮತ್ತಷ್ಟು ಗಟ್ಟಿಗೊಳಿಸುವ ಕಾರ್ಯ ಕಂಗೆಡಿಸುವಂತಹದು.

ಇವನ್ನೆಲ್ಲ ಓದಿದಾಗ ಎರಡು ತಿಂಗಳ ಹಿಂದೆ (ಜುಲೈ) ಕುಂದಾಪುರದ ವಂಡ್ಸೆ ಎಂಬಲ್ಲಿ ಮೌಢ್ಯಕ್ಕೆ ಓರ್ವ ಮನೆಯಾತ ಬಲಿಯಾಗಿ ವ್ಯರ್ಥ ಹಣ ಕಳಕೊಂಡ ತಮಾಷೆಯ ಘಟನೆ ನಡೆದದ್ದು ನೆನಪಾಗುತ್ತದೆ.

ವಂಡ್ಸೆ ಬಳಿಯ ತಂಗೊಜ್ಜೆ ಎಂಬಲ್ಲಿರುವ ಗೋವಿಂದ ಎನ್ನುವವರ ಮನೆಯ ತೆಂಗಿನಮರದಿಂದ ರಾತ್ರಿ ನೀರವ ಸಮಯದಲ್ಲಿ ಮಗುವಿನ ವಿಚಿತ್ರ ನಗುವೊಂದು ಕೇಳಲು ಆರಂಭಗೊಂಡಿತು. ಅದು ಭ್ರಮೆ ಎಂದು ಸುಮ್ಮನಾದರೆ ಪುನಃ ಪುನಃ ಕೇಳಲು ಶುರುವಾಯಿತು. ಮನೆಯವರಿಗೆಲ್ಲ ಆ ಹುಚ್ಚು ದೆವ್ವದ ಕಾಟದಿಂದ ಆ ರಾತ್ರಿ ನಿದ್ದೆಯೇ ಬರಲಿಲ್ಲ. ಹಗಲಿನ ಗೌಜುಗದ್ದಲದ ವಾತಾವರಣದಲ್ಲೂ ಕೆಲವೊಮ್ಮೆ ಇದು ಅಸ್ಪಷ್ಟವಾಗಿ ಕೇಳಿಸುತಿತ್ತು. ಅದಕ್ಕವರು ತಡಮಾಡದೇ ಜ್ಯೋತಿಷಿಯೊಬ್ಬನ ಬಳಿ ಹೋಗಿ ಪ್ರಶ್ನೆ ಕೇಳಿದಾಗ ಆತ ಕವಡೆ ಎಸೆದು ಕಣ್ಮುಚ್ಚಿ ಬಳಿಕ ಆಪ್ತಮಿತ್ರದ ನಟ ಅವಿನಾಶ್ ಸ್ಟೈಲಿನಲ್ಲಿ "ಹೌದು ಇಲ್ಲೊಂದು ಸಮಸ್ಯೆ ಇದೆ ಹೂಂ?" ಅಂದು ಬಂದವರನ್ನು ಮತ್ತಷ್ಟು ಬೆದರಿಸಿ ಅವರಿಂದ ಕೆಲ ಪೂಜೆಹೋಮಗಳನ್ನು ಮಾಡಿಸಿ, ಸರಿಯಾಗಿ ದುಡ್ಡು ಪೀಕಿ ಕಳುಹಿಸಿಕೊಟ್ಟ. ಬಳಿಕ ಮಗುವಿನ ಅತೃಪ್ತ ಆತ್ಮದ ಕಾಟ ಕಮ್ಮಿಯಾಯಿತೆಂಬಂತೆ ತೋರಿದರೂ ರಾತ್ರಿ ಮತ್ತೆ ಅದೇ ಗೋಳು ಶುರುವಾಯಿತು. ಪುನಃ ಆ ಅಮಾಯಕ ಮೌಢ್ಯಗಳು ಅದೇ ಜ್ಯೋತಿಷಿಯ ಬಳಿ ಹೋದಾಗ ಆತ ಪುನಃ ಕಣ್ಮುಚ್ಚಿ ಬಾಯಿಯಿಂದ ವಿಷಾದದ ದನಿ ಹೊರಡಿಸಿ "ಅದು ದೊಡ್ಡ ಪಿಶಾಚಿಯೇ ಹೌದು. ಸಮಸ್ಯೆ ಎಣಿಸಿದಷ್ಟು ಸರಳವಿಲ್ಲ ಅದಕ್ಕೆ ದಿಗ್ಬಂಧನ ಬೇರೆ ಹಾಕಲಾಗಿದೆ. ಅದಕ್ಕೆ ವ್ಯವಸ್ಥೆ ಮಾಡೋಣ" ಎಂದು ಗೋವಿಂದರಿಂದ ಇನ್ನಷ್ಟು ದೊಡ್ಡ ಗಂಟನ್ನು ನುಂಗುವ ಪ್ಲಾನನ್ನು ಯೋಚಿಸಿ ಸದ್ಯಕ್ಕೆ ಅವರನ್ನು ಕಳುಹಿಸಿಕೊಟ್ಟ. ಆದರೆ ಮರದಲ್ಲಿನ ಕುಲೆ(ಅತೃಪ್ತ ಆತ್ಮ)ಯ ಚೀರಾಟ ಮುಂದುವರೆದೇ ಇತ್ತು.

ಆದರೆ, ಮರುದಿನ ಹೇಳಿ ಕಳುಹಿಸದಿದ್ದರೂ ಅವರ ಮನೆಗೆ ತೆಂಗಿನ ಮರಹತ್ತುವ ಶೀನ ಪೂಜಾರಿ ಬಂದಿದ್ದರು. ಮುಖದಲ್ಲಿ ಬೇರೆ ಗೆಲುವಿರಲಿಲ್ಲ. ಬಂದವರೇ ತನ್ನ ಕೈಯಲ್ಲಿದ್ದ ಮೊಬೈಲ್ ತೆಗೆದು ಯಾರಿಗೋ ಫೋನ್ ಮಾಡಿ ನಂತರ ಏನೋ ಜ್ಞಾನೋದಯದ ಗೆಲುವಿನಲ್ಲಿ ಎದುರಿದ್ದ ಮರವನ್ನು ಸರಸರನೇ ಹತ್ತಿ ಕೆಲವೇ ನಿಮಿಷದಲ್ಲಿ ಕೆಳಗಿಳಿದು ವಿಚಿತ್ರವಾಗಿ ಜಯದ ನಗೆಬೀರಿದ್ದರು. ಅದನ್ನು ಕಂಡು ಹತ್ತಿರದಲ್ಲಿದ್ದವರೆಲ್ಲ ಈತನಿಗೇನೋ ಆ ತೆಂಗಿನಮರದ ಆ ಭೀಕರ ಕುಲೆಯೇ ಈ ರೀತಿಯಾಗಿ ಆಟವಾಡಿಸುತ್ತಿದೆ ಅಂದುಕೊಂಡಿದ್ದರು. ಆದರೆ ವಸ್ತುಸ್ಥಿತಿ ಬೇರೆಯದೇ ಆಗಿತ್ತು.

ಅದೇನೆಂದರೆ, ಆತ ಈ ಮಗುವಿನ ಆತ್ಮಕ್ಕೆ ಸಂಬಂಧ ಪಟ್ಟವನೇ ಆಗಿದ್ದರೂ ಆ ಆತ್ಮ ಬೇರೆ ಯಾವುದೋ ಪಾರಮಾರ್ಥಿಕ ಲೋಕದ್ದಾಗಿರದೇ ಅದೊಂದು ಎಲೆಕ್ಟ್ರಾನಿಕ್ ಕುಲೆಯಾಗಿತ್ತು. ಅದನ್ನು ಬೇರೆ ಪ್ಲಾಸ್ಟಿಕ್‌ನಲ್ಲಿ ದಿಗ್ಬಂಧನ (ಸುತ್ತಿ) ಮಾಡಿಡಲಾಗಿತ್ತು.

ಕರಾವಳಿ ಜಿಲ್ಲೆಗಳಲ್ಲಿ ತೆಂಗಿನಮರ ಏರುವವರಿಗೆ ರಾಜ ಮರ್ಯಾದೆ. ಯಾಕೆಂದರೆ ಕಾಯಿ ಕೀಳಲು ಜನವೇ ಸಿಗುವುದಿಲ್ಲ. ಈಗ ಜಾರುವ ಮಳೆಗಾಲ ಬೇರೆ. ಎಲ್ಲರ ಕೈಯಲ್ಲೂ ವಿಜೃಂಭಿಸುವ ಮೊಬೈಲ್ ತೆಂಗಿನ ಮರ ಏರುವವರ ಕೈಯಲ್ಲೂ ಇದ್ದರೆ ಅದು ವಿಶೇಷ ಸಂಗತಿಯೂ ಆಗಿದ್ದಿರಲಿಲ್ಲ. ಈ ಮಗುವಿನ ವಿಚಿತ್ರ ಕೂಗು ಪ್ಲಾಸ್ಟಿಕ್‌ನೊಳಗೆ ಸುತ್ತಿಟ್ಟ ಮೊಬೈಲ್‌ನ ರಿಂಗ್‌ಟೋನ್ ಆಗಿತ್ತೇ ವಿನಃ ಜ್ಯೋತಿಷಿ ಹೇಳಿದಂತೆ ಪಿಶಾಚಿ-ಬ್ರಹ್ಮರಕ್ಕಸ ಯಾರದ್ದೂ ಆಗಿದ್ದಿರಲಿಲ್ಲ.

ಗೋವಿಂದರ ಮನೆಗೆ ಕಾಯಿ ಕೀಳಲು ಬಂದ ಶೀನ ಪೂಜಾರಿ ಅದನ್ನು ತೆಂಗಿನಮರದಲ್ಲಿ ಮರೆತುಬಿಟ್ಟಿದ್ದೇ ಇಷ್ಟೆಲ್ಲಾ ಅನಾಹುತಕ್ಕೆ ಕಾರಣ... ಈ ಪಿಶಾಚಿ ರಹಸ್ಯ ಬಯಲಾದ ಬಳಿಕ ಜ್ಯೋತಿಷಿಯ ಬಳಿ ಹೋ... ಸುರಿದ ಹಣ ವಾಪಸ್ ಕೇಳಿದಾಗ ಆತ ಕೊಡಲೊಪ್ಪದೇ ಕೊನೆಗೆ ಯ... ಮಧ್ಯಸ್ಥಿಕೆಯಿಂದ ಅರ್ಧಾಂಶ ಹಣ ಕೊಡಲು ಒಪ್ಪಿದನಂತೆ.

ಸೀರಿಯಸ್ ವಿಷಯದಲ್ಲಿ ಆರಂಭಿಸಿ ತಮಾಷೆಯಾಗಿ ಈ ಬ... ಮುಗಿಸಲೂ ಕಾರಣವಿದೆ. ಕೇವಲ ಸಮಾಜದ ಹಿತಕ್ಕಾಗಿ ತಮ್ಮೆಲ್ಲ ಸ್ವ... ತೊರೆದು ಜನಜಾಗೃತಿ ಮೂಡಿಸಲು ಹೆಣಗುವವರನ್ನು ಮೌಢ್ಯಕ್ಕೆ ... ಮೂಢರೇ ಕೊಂದು ತಮ್ಮ ಬದುಕಿಗೇ ಕಂಟಕಪ್ರಾಯರಾಗು... ಎಂಬುದನ್ನು ಕೇಳಿ ನಗುವುದೋ ಅಳುವುದೋ ತಿಳಿಯುತ್ತಿಲ್ಲ. ಆ... ಜನಪರ ಚಿಂತನೆಯ ಮಾತಾಡುತ್ತಾ ಈಗ ಪಕ್ಕಾ ಸಂಪ್ರದಾಯ... ಮಾತಿಗೆ ಬಲಿಬಿದ್ದು ಅವರನ್ನು ಮೀರಿಸುವಂತೆ ಮಾತಾಡುವ ತಳವ... ಬಂದಂತಹ ಕೇರಳದ ನನ್ನ ಮಿತ್ರನೊಬ್ಬ "ಮೊದಲು ಈ ಕಮ್ಯುನಿ... ಕಡಿಯಬೇಕು" ಅಂದಾಗ ನಾನೆಂದೆ "ಅಯ್ಯಾ, ಮಹಾ... ನಂಬೂದರಿಪ್ಪಾಡ್‌ರಂತಹ ಕಮ್ಯುನಿಸ್ಟ್ ಇಲ್ಲದಿರುತ್ತಿದ್ದರೆ ನೀನು ಈ ... ಆಡುತ್ತಿರಲಿಲ್ಲ. ಯಾಕೆ ಗೊತ್ತಾ, ನೀನಿವತ್ತು ಯಾರದ್ದೋ ಮನೆಯ ಪಾ... ತೊಳೆಯುತ್ತಾ ಇರುತ್ತಿದ್ದೆ. ನಿನಗೆ ವಿದ್ಯೆಯಾಗಲಿ, ಇಂತಹ ಮ... ಪುರುಸೊತ್ತಾದರೂ ಆಗ ಎಲ್ಲಿ ಸಿಕ್ಕಿರುತ್ತಿತ್ತು?" ಎಂದೆ. ಆತ ಮರುಮಾ...

- ಶಶಿ ಪುತ್ತೂ...

ಪ್ರೊ. ಶಿವರಾಮಯ್ಯ ಅವರ 'ಮನೆಮುರುಕ ವಾಸ್ತು ಭವಿ... ಲೇಖನ ಓದಿದಾಗ ನಮ್ಮೂರಿನ ಇಂಥದ್ದೇ ಒಂದು ಸ್ವಾರಸ್ಯಕರ... ನೆನಪಾಯಿತು-

ಆ ವ್ಯಕ್ತಿ ತಮ್ಮ ಮನೆ ಮಹಡಿಯ ಆರು ಅಡಿ ಉದ್ದ ಮತ್ತು... ಅಡಿ ಅಗಲದ (6x3) ಸ್ಥಳಾವಕಾಶದಲ್ಲಿ ಕಕ್ಕಸು ಕಟ್ಟಿಸಲು ನಿರ್ಧ... ಉದ್ದವು ಪೂರ್ವ- ಪಶ್ಚಿಮವಾಗಿದ್ದರೆ, ಅಗಲವು ಉತ್ತರ- ದಕ್ಷಿ... ಕಮೋಡನ್ನು ಪೂರ್ವ ಪಶ್ಚಿಮವಾಗಿರಿಸುವುದು ಬಳಕೆಯ ಅ... ದೃಷ್ಟಿಯಿಂದ ಸರಿಯಾದ ಕ್ರಮ. ಯಾಕೆಂದರೆ ಆಗ ಕಮೋಡ್... ಮುಂದೆ ಸಾಕಷ್ಟು ಜಾಗ ಸಿಗುತ್ತದೆ.

ಆದರೆ ವಾಸ್ತುಪ್ರಕಾರ, 'ಅದಕ್ಕೆ' ಕೂರುವಾಗ ಪೂರ್ವ ಪ... ಕೂರುವಂತಿಲ್ಲ ಎಂದು ವಾಸ್ತುಪಂಡಿತರು ಅಪ್ಪಣೆ ಕೊಡಿಸಿ ಕ... ಉತ್ತರದಕ್ಷಿಣವಾಗಿ ಇರಿಸುವಂತೆ ಸೂಚಿಸಿದರು. ಅವರ ಸಲ... ವಿಧೇಯವಾಗಿ ಪಾಲಿಸಲಾಯಿತು. ಈಗ 'ಅದಕ್ಕೆ' ಕೂರುವಾಗ ಹಿ... ಜಾಗ ಇಲ್ಲ, ಮುಂದೆಯೂ ಜಾಗ ಇಲ್ಲ. 'ತೊಳೆದುಕೊಳ್ಳಲು'... ಮುಂದಕ್ಕೆ ಬಾಗಿದರೂ ಮೂಗು ಮುಂದಿನ ಗೋಡೆಗೆ ಡಿಕ್ಕಿ ... ಜಖಂಗೊಂಡು ಪ್ರತೀಬಾರಿಯೂ ಮೂಗಿಗೆ ಬ್ಯಾಂಡೇಜು ಹಾಕುವ...

ಯಾಕೋ ವಾಸ್ತುವಿನ ಗೀಳು ಅತಿಯಾಯಿತು ಅನಿಸು... ಮಲವಿಸರ್ಜನೆಗೂ, ದಿಕ್ಕಿಗೂ ಏನು ಸಂಬಂಧ? ಬಯಲಿನಲ್ಲಿ ಬ... ಕೂರುವವರು ಪೂರ್ವವೋ ಪಶ್ಚಿಮವೋ ಎಂದು ದಿಕ್ಕು... ಕೂರುತ್ತಾರೆಯೇ? ದಿಕ್ಕು ನೋಡಿ ಕೂರದ್ದರಿಂದ ಮಲವಿಸರ್ಜನೆಗೆ ... ತೊಂದರೆಯಾಗಿದೆಯೇ? ಇಂತಹ ವಾಸ್ತುವನ್ನು, ಇಂತಹ ಮನೆಹಾ... ನೀಡುವ ವಾಸ್ತು ಪಂಡಿತರನ್ನು ಮತ್ತು ಮಿದುಳನ್ನು ಅಡ ಇಟ್ಟ... ಸಲಹೆಯನ್ನು ಚಾಚೂತಪ್ಪದೆ ಪಾಲಿಸುವವರನ್ನು ಏನು ಮಾಡಬೇ... ಹೇಳಿ.

-ಶ್ರೀನಿವಾಸ ಕಾರ್ಕಳ, ಮಂ...

ಅಯ್ಲಾನ್ ತೆರೆದಿಟ್ಟ ದುರಂತ ಕತೆ



ಕಂಡಹಾಗೆ

• ಗೌರಿ ಲಂಕೇಶ್

editorlankesh@gmail.com

ಕೆಂಪು ಅಂಗಿ, ನೀಲಿ ಚೆಡ್ಡಿ ತೊಟ್ಟು ಹಾಗೆ ...ಮ್ಮನೆ ನಿದ್ರಿಸುತ್ತಿರುವಂತೆ ಸಮುದ್ರದ ದಡದಲ್ಲಿ ...ಗಾತ ಮಲಗಿದ್ದ ಮೂರು ವರ್ಷದ ಬಾಲಕ ...ಯ್ಲಾನ್ ಕುರ್ದಿ. ಮಗುವನ್ನು ಮಲಗಿಸಲು ...ಯಿಯೊಬ್ಬಳು ಮೆಲ್ಲಗೆ ತಟ್ಟುವಂತೆ, ಆಯ್ಲಾನ್‌ನನ್ನು ...ಪ್ಪುತ್ತಿದ್ದ ಸಮುದ್ರದ ಅಲೆಗಳಿಂದಾಗಿ ಆತನ ...ದಲು ಮತ್ತು ಬಟ್ಟೆಗಳು ಒದ್ದೆಯಾಗಿದ್ದವು. ...ಗಾಯಿತು, ಎದ್ದೇಳು ಮರಿ' ಎಂದು ಮೈ ...ದರೆ ಮರುಕ್ಷಣವೇ ಎದ್ದು ಕೂರುವ ಕೂಸಿನಂತೆ ...ಸುತ್ತಿದ್ದ ಅಯ್ಲಾನ್.

ಆದರೆ ಅಯ್ಲಾನ್ ನಿದ್ರಿಸುತ್ತಿರಲಿಲ್ಲ, ಆತ ...ವಾಗಿದ್ದ. ಅಯ್ಲಾನ್‌ನ ಆ ಚಿತ್ರ ಇಡೀ ಜಗತ್ತೇ ...ರಿಡುವಂತೆ ಮಾಡಿದೆ. ಕಳೆದ ಹಲವಾರು ...ಗಳಿಂದ ಆತನ ಚಿತ್ರ ನನ್ನನ್ನು ಅದೆಷ್ಟು ಕಾಡಿದೆ ...ದರೆ ಅದನ್ನು ನೆನೆದಾಗಲೆಲ್ಲ ಕಣ್ಣೀರು ...ಯುತ್ತಿದೆ. ಮನಸ್ಸು ತತ್ತರಿಸುತ್ತಿದೆ. ನನ್ನ ...ನಂತೆ ಅದೆಷ್ಟೋ ಜನ ಅಯ್ಲಾನ್‌ನ ಆ ...ಟೊ ಟಿವಿ ಪರದೆಯ ಮೇಲೆ ...ಡಿಬರುತ್ತಿದ್ದಂತೆ "ಅಯ್ಯೋ, ನೋಡಕ್ಕಾಗಲ್ಲ" ...ಮ ಚಾನೆಲ್ ಬದಲಿಸುತ್ತಿದ್ದಾರೆ.

ಈಗ ಎಲ್ಲರಿಗೂ ಗೊತ್ತಿರುವಂತೆ ಅಯ್ಲಾನ್‌ನ ... ಅಬ್ದುಲ್ಲಾ ಕುರ್ದಿ ತನ್ನ ಕುಟುಂಬ ಸಮೇತ ...ದ್ಧ ಭೂಮಿಯಾಗಿರುವ ತನ್ನ ತಾಯಿನಾಡಾದ ...ಯಾದಿಂದ ಟರ್ಕಿ ದೇಶಕ್ಕೆ ವಲಸೆಹೋಗಿದ್ದ. ...ಲ್ಲಾ ಜೀವನೋಪಾಯಕ್ಕೆ ಕಷ್ಟಗಳು ಎದುರಾದಾಗ ...ದರು ಮಾಡಿ ಗ್ರೀಸ್ ದೇಶವನ್ನು ಹೊಕ್ಕಲು ...ತ್ನಿಸಿದ. ಅವನ ಅಂತಿಮ ಉದ್ದೇಶ ಗ್ರೀಸ್ ...ದಿಂದ ಕೆನಡಾ ದೇಶಕ್ಕೆ ಹೋಗುವುದಾಗಿತ್ತು. ... ತರಹದ ಸಂತ್ರಸ್ತ ಕುಟುಂಬಗಳನ್ನು ...ಮವಾಗಿ ಪರ ದೇಶಗಳಿಗೆ ಸಾಗಿಸುವ ದಲ್ಲಾಳಿಗಳು ... ದೋಣಿ ನೀರು ಪಾಲಾಗಿದ್ದರಿಂದ ಅಬ್ದುಲ್ಲಾನ ...ರಿಹಾನ, ಐದು ವರ್ಷದ ಮಗ ಗಲೀಪ್ ಮತ್ತು ...ರು ವರ್ಷದ ಅಯ್ಲಾನ್ ಸಮುದ್ರದಲ್ಲಿ ತಮ್ಮ ...ಗಳನ್ನು ಕಳೆದುಕೊಂಡರು. ಅಬ್ದುಲ್ಲಾ ಒಬ್ಬನೇ ...ಗೆ ಉಳಿದುಕೊಂಡಿದ್ದು.

ಈಗ ಕೆಲವರು ಸಂತ್ರಸ್ತರನ್ನು ಅಕ್ರಮವಾಗಿ ...ಸುವ ದಲ್ಲಾಳಿಗಳು ಅಮಾಯಕ ಬಾಲಕ ...ಲಾನ್‌ನ ಸಾವಿಗೆ ಕಾರಣ ಎನ್ನುತ್ತಿದ್ದಾರೆ. ಇನ್ನು ...ರು ಕೆನಡಾ ದೇಶ ಕುರ್ದಿಯ ಕುಟುಂಬಕ್ಕೆ ... ಬರಲು ಅವಕಾಶ ನೀಡಿದ್ದರೆ ಈ ದುರಂತ





...ಸುತ್ತಿರಲಿಲ್ಲ ಎಂದೂ ದೂರುತ್ತಿದ್ದಾರೆ. ಹಾಗೆಯೇ ...ರೋಪಿನ ಹಲವು ದೇಶಗಳು ವಲಸಿಗರನ್ನು ... ತಮ್ಮ ನೀತಿನಿಯಮಗಳನ್ನು ...ಯಿಸಿಕೊಳ್ಳುವ ಮೂಲಕ ತಾವು ಅಯ್ಲಾನ್ ...ವ ನಿರಾಶ್ರಿತರ ಸಾವನ್ನು ತಪ್ಪಿಸುತ್ತೇವೆ ಎಂದು ...ಗಿ ಬಿಡುತ್ತಿವೆ.

...ದರೆ ವಾಸ್ತವವಾಗಿ ಅಯ್ಲಾನ್ ಸೇರಿದಂತೆ ... ಜಗತ್ತಿನಾದ್ಯಂತ ಕೋಟ್ಯಾಂತರ ಜನ ...ಶ್ರಿತರಾಗುವುದಕ್ಕೆ, ಸಾವಿಗೀಡಾಗುತ್ತಿರುವುದಕ್ಕೆ, ...ವಾಗುತ್ತಿರುವುದು ಅಮೆರಿಕ ದೇಶ ಎಂಬ ...ನ್ನು ಎಲ್ಲರೂ ಮರೆಯುತ್ತಿದ್ದಾರೆ ಅಥವಾ ...ಸುತ್ತಿದ್ದಾರೆ.

...ಕ್ಕೆ, ಉದಾಹರಣೆಯಾಗಿ ಕುರ್ದಿ ...ವನ್ನೇ ತೆಗೆದುಕೊಳ್ಳಿ. ಅಬ್ದುಲ್ಲಾ ಕುರ್ದಿ ... ಸಿರಿಯಾದ ರಾಜಧಾನಿ ಡಮಾಸ್ಕಸ್‌ನಲ್ಲಿ ...ಗಿದ್ದವನು. ಯಾವಾಗ ಡಮಾಸ್ಕಸ್ ...ಮೇಲೆ ಐಸಿಸ್ ಪಡೆಯು ದಾಳಿಯಾಯಿತೋ ಆಗ

ತನ್ನ ಕುಟುಂಬವನ್ನು ರಕ್ಷಿಸಲೆಂದು ಅಬ್ದುಲ್ಲಾ ಅಲೆಪ್ಪೋ ಎಂಬ ನಗರಕ್ಕೆ ಸ್ಥಳಾಂತರಗೊಂಡಿದ್ದ. ಆದರೆ ಅಲೆಪ್ಪೋ ಮೇಲೆಯೂ ಐಸಿಸ್ ದಾಳಿ ಮಾಡಿದಾಗ ಅಬ್ದುಲ್ಲಾ ಮತ್ತೊಮ್ಮೆ ತನ್ನ ಕುಟುಂಬ ಸಮೇತ ತನ್ನ ಕುರ್ದಿಶ್ ಸಮುದಾಯವೇ ಹೆಚ್ಚಿನ ಸಂಖ್ಯೆಯಲ್ಲಿರುವ ಕೊಬಾನಿ ಎಂಬ ನಗರಕ್ಕೆ ವಲಸೆಹೋಗಿದ್ದ. ದುರದೃಷ್ಟವಶಾತ್ ಕೊಬಾನಿ ಮೇಲೆ ಕೂಡ ಐಸಿಸ್ ದಾಳಿ ಮಾಡಿತು. ಆಗ ವಿಧಿ ಇಲ್ಲದೆ ಅಬ್ದುಲ್ಲಾ ತನ್ನ ದೇಶವನ್ನೇ ತೊರೆದು ನೆರೆಯ ಟರ್ಕಿ ದೇಶಕ್ಕೆ ನಿರಾಶ್ರಿತನಾಗಿ ಹೋದ. ಸದ್ಯ ಅಮೆರಿಕ ಮತ್ತು ಕುರ್ದಿಶ್ ಸೈನ್ಯದ ಜಂಟಿ ಕಾರ್ಯಾಚರಣೆಯಿಂದಾಗಿ ಕೊಬಾನಿ ನಗರ ಮತ್ತೆ ಕುರ್ದಿಶ್ ಸೈನ್ಯದ ಕೈಸೇರಿದೆ. ಆದರೆ ಯಾವಾಗ ಐಸಿಸ್ ಮತ್ತೆ ದಾಳಿ ಮಾಡುತ್ತದೆ ಎಂದು ಯಾರಿಗೂ ಗೊತ್ತಿಲ್ಲ. ಇದಕ್ಕೂ ಅಮೆರಿಕಕ್ಕೂ ಏನು ಸಂಬಂಧ



ಎಂದು ಪ್ರಶ್ನಿಸಬಹುದು. ಎಲ್ಲರಿಗೂ ಗೊತ್ತಿರುವಂತೆ ಇರಾಕ್‌ನ ಸರ್ವಾಧಿಕಾರಿ ಸದ್ದಾಂ ಹುಸೇನನ ವಿರುದ್ಧ ಐಸಿಸ್ ಎಂಬ ಉಗ್ರರ ಪಡೆಯನ್ನು ಬೆಳೆಸಿದ್ದೇ ಅಮೆರಿಕ. ಈಗ ಅದೇ ಐಸಿಸ್ ಇರಾಕ್ ಮತ್ತು ಸಿರಿಯಾದ ಹಲವು ಪ್ರದೇಶಗಳನ್ನು ಆಕ್ರಮಿಸಿಕೊಂಡು ಜಗತ್ತಿಗೆ ದೊಡ್ಡ ತಲೆನೋವಾಗಿ ಪರಿವರ್ತನೆಗೊಂಡಿದೆ.

ವಿಶ್ವಸಂಸ್ಥೆ ಕೊಡುವ ಅಂಕಿಅಂಶಗಳ ಪ್ರಕಾರ ಐಸಿಸ್ ಸಿರಿಯಾ ದೇಶದ ಮೇಲೆ ಡಾಳಿ ಮಾಡಿದ ನಂತರ ಆ ದೇಶದ ಒಟ್ಟು 65 ಲಕ್ಷ ಜನಸಂಖ್ಯೆಯಲ್ಲಿ ಲಕ್ಷಾಂತರ ಜನರು ಮಡಿದಿದ್ದಾರಲ್ಲದೆ ಬರೋಬ್ಬರಿ 22 ಲಕ್ಷ ಜನರು ನಿರಾಶ್ರಿತರಾಗಿದ್ದಾರೆ.

ಇರಾಕ್ ಮೇಲೆ ಅಮೆರಿಕ ಯುದ್ಧ ಸಾರಿದ್ದರಿಂದ ಆ ದೇಶದಲ್ಲೂ ಲಕ್ಷಾಂತರ ಜನರು ನಿರಾಶ್ರಿತರಾಗಿದ್ದಾರಲ್ಲದೆ, ತಮ್ಮ ಪ್ರಾಣ ಉಳಿಸಿಕೊಳ್ಳಲು ಯುದ್ಧಭೂಮಿಯಾಗಿ ಪರಿವರ್ತನೆಗೊಂಡಿರುವ ತಮ್ಮ ಊರುಕೇರಿಗಳನ್ನು ತೊರೆದುಹೋಗುತ್ತಿದ್ದಾರೆ. ಲಿಬಿಯಾದ ಪರಿಸ್ಥಿತಿಯೂ ಇದಕ್ಕಿಂತ ಭಿನ್ನವಾಗಿಲ್ಲ, ಅದು ಕೂಡ ಅಮೆರಿಕದ ಬಾಂಬ್ ದಾಳಿಗೆ ಬೆಸ್ತು ಬಿದ್ದು ಜನ ಗುಳೆ ಹೋಗುತ್ತಿದ್ದಾರೆ. ಸೊಮಾಲಿಯಾ, ದಕ್ಷಿಣ ಸುಡಾನ್, ನೈಜೀರಿಯಾ, ಕಾಂಗೋ ತರಹದ ಆಫ್ರಿಕಾದ ಬಡದೇಶಗಳ ಮೇಲೂ ಅಮೆರಿಕ ದಾಳಿ ಮಾಡಿದ್ದರಿಂದಲೋ ಅಥವಾ ಅಸ್ಥಿರತೆಯನ್ನು ತಂದಿಟ್ಟಿದ್ದರಿಂದಲೋ ಅಲ್ಲಿಂದಲೂ ಜನ ಜೀವರಕ್ಷಣೆಗಾಗಿ ತಮ್ಮ ಚೂರುಪಾರು ಸಾಮಾನುಗಳನ್ನು ಕಟ್ಟಿಕೊಂಡು ಹೊರಟಿದ್ದಾರೆ. ಇದೆಲ್ಲದರ ಅರ್ಥ ಇಷ್ಟೇ: ಎಲ್ಲೆಲ್ಲಿ ಅಮೆರಿಕವು ಸ್ಥಳೀಯ ಸರ್ಕಾರಗಳ ವಿರುದ್ಧ ಮಸಲತ್ತು

ಮಾಡಿದೆಯೋ, ಸಂಚುಕೋರರನ್ನು ಬೆಂಬಲಿಸಿದೆಯೋ, ವಿರೋಧವನ್ನು ಹುಟ್ಟುಹಾಕಿದೆಯೋ, ಭ್ರಷ್ಟಾಚಾರಕ್ಕೆ ಕುಮ್ಮಕ್ಕು ಕೊಟ್ಟಿದೆಯೋ, ವ್ಯವಸ್ಥೆಯನ್ನು ಅಸ್ಥಿರಗೊಳಿಸಿದೆಯೋ, ಬಿರುಕುಗಳನ್ನು ಬಿತ್ತಿದೆಯೋ, ನಾಯಕರ ಕಗ್ಗೊಲೆಗಳನ್ನು ನಡೆಸಿದೆಯೋ, ಆರ್ಥಿಕವಾಗಿ ದಿವಾಳಿ ಎಬ್ಬಿಸಿದೆಯೋ, ಪ್ರಜಾಪ್ರಭುತ್ವವನ್ನು ದಮನಿಸಿದೆಯೋ... ಅಲ್ಲೆಲ್ಲ ಯುದ್ಧಗಳು ಪ್ರಾರಂಭವಾಗಿವೆ ಮತ್ತು ಈ ಯುದ್ಧಗಳು ಹಿಂದಿನ ಯುದ್ಧಗಳಂತಲ್ಲ. ಯಾಕೆಂದರೆ ಇವುಗಳಿಗೆ ಅಧಿಕೃತವಾಗಿ ಶುರುವಾದ ದಿನಗಳು ಹೇಗಿಲ್ಲವೋ, ಹಾಗೆಯೇ ಇವು ಕೊನೆಗೊಳ್ಳುವ ದಿನವೂ ಬರುವುದೇ ಇಲ್ಲ. ಬದಲಾಗಿ ಇವು ಒಂದು ರೀತಿಯಲ್ಲಿ ಹೊಸಹೊಸ ರೂಪ, ಉದ್ದೇಶ ಮತ್ತು ಧ್ಯೇಯವನ್ನು ತಳೆದು ನಿರಂತರವಾಗಿ ನಡೆಯುತ್ತಲೇ ಸಾಗುವ ಯುದ್ಧಗಳಾಗಿ ಮಾರ್ಪಾಟುಗೊಂಡು ಹಲವಾರು ವರ್ಷಗಳೇ ಆಗಿವೆ. ಉದಾಹರಣೆಗೆ ಅಫಘಾನಿಸ್ತಾನದಲ್ಲಿ ಅಮೆರಿಕ ಹುಟ್ಟುಹಾಕಿದ ಮುಜಾಹಿದ್ದೀನ್ ಅನಂತರ ತಾಲಿಬಾನ್ ಆಯಿತು, ಆಮೇಲೆ ಅಲ್ ಕೈದಾ ಆಯಿತು, ಈಗ ಐಸಿಸ್ ಆಗಿದೆ.

ಇಲ್ಲಿ ಇನ್ನೊಂದು ಉದಾಹರಣೆಯನ್ನು ಕೊಡಬಹುದು. ಅಮೆರಿಕದ ಮೇಲೆ 9/11 ದಾಳಿಯು ಸಂಭವಿಸುವ ಮುನ್ನ ಜಗತ್ತಿನಾದ್ಯಂತ ಇದ್ದ ನಿರಾಶ್ರಿತರ ಸಂಖ್ಯೆ ಈಗ ಮೂರು ಪಟ್ಟು ಹೆಚ್ಚಾಗಿದೆ ಎಂದು ವಿಶ್ವಸಂಸ್ಥೆಯೇ ಹೇಳುತ್ತಿದೆ. ಅಷ್ಟೇ ಅಲ್ಲ, ಈ ಸಂಖ್ಯೆ ಎರಡನೆ ಜಾಗತಿಕ ಯುದ್ಧದ ಸಂದರ್ಭದಲ್ಲಿ ಇದ್ದ ನಿರಾಶ್ರಿತರ ಸಂಖ್ಯೆಗಿಂತಲೂ ಹೆಚ್ಚಾಗಿದೆ. ಈಗ ಜಾಗತಿಕ ಯುದ್ಧ ನಡೆಯುತ್ತಿಲ್ಲವಾದರೂ ನಿರಾಶ್ರಿತರ ಸಂಖ್ಯೆ ಯಾವ ಕಾರಣಕ್ಕೆ ಹೆಚ್ಚಾಗಿದೆ ಎಂಬ ಪ್ರಶ್ನೆಗೆ ಉತ್ತರ ಹುಡುಕಿದರೆ ಅಲ್ಲೂ ಸಿಗುವುದು ಅಮೆರಿಕವೆ. ಯಾಕೆಂದರೆ 9/11 ದಾಳಿಯ ನಂತರ 'ಭಯೋತ್ಪಾದನೆ ವಿರುದ್ಧ ಜಾಗತಿಕ ಯುದ್ಧ'ವನ್ನು ಪ್ರಾರಂಭಿಸಿದ ಅಮೆರಿಕ ಈಗ ವಿಶ್ವದ ವಿವಿಧ ಕಡೆ ಯುದ್ಧವನ್ನು ಮುಂದುವರೆಸುತ್ತಿದೆ. ಹಲವಾರು ಕಡೆ ತಾನೇ ಹುಟ್ಟುಹಾಕಿದ ಪಡೆಗಳ ವಿರುದ್ಧ ಸೆಣಸಾಡುತ್ತಿದೆ. ಇಷ್ಟೆಲ್ಲ ಆಗಿದ್ದರೂ ಇದಕ್ಕೆಲ್ಲ ತಾನೇ ಕಾರಣ ಎಂದು ಒಪ್ಪಿಕೊಳ್ಳುವ ಬದಲು 'ಇಸ್ಲಾಮ್ ಮೂಲಭೂತವಾದಿಗಳೆ ಕಾರಣ' ಎಂದು ಅಮೆರಿಕ ವಾದಿಸುತ್ತಿದೆ. ಇಸ್ಲಾಮ್ ಮೂಲಭೂತಕ್ಕೂ ತಾನೇ ಆರಂಭದಲ್ಲಿ ಕುಮ್ಮಕ್ಕು ಕೊಟ್ಟದ್ದು ಎಂದೂ ಅದು ಒಪ್ಪಿಕೊಳ್ಳಲು ಸಿದ್ಧವಿಲ್ಲ.


ಏಷ್ಯಾ ಮತ್ತು ಆಫ್ರಿಕಾದ ವಿವಿಧ ದೇಶಗಳಲ್ಲಿ ಅಮೆರಿಕ ಮಾಡಿರುವ ಅನಾಹುತಗಳಿಂದಾಗಿ ಇವತ್ತು ಕೋಟ್ಯಾಂತರ ಜನರು ಮನೆ ಮಠ ಕಳೆದುಕೊಂಡು ವಲಸೆ ಹೋಗುತ್ತಿದ್ದಾರೆ. ಅವರೆಲ್ಲ ಹೆಚ್ಚಿನ ಸಂಖ್ಯೆಯಲ್ಲಿ ಧಾವಿಸುತ್ತಿರುವುದು ಯೂರೋಪ್ ದೇಶಗಳತ್ತ. ಆದರೆ ವಿಪರ್ಯಾಸ ನೋಡಿ, ಜರ್ಮನಿ ಮತ್ತು ಫ್ರಾನ್ಸ್ ತರಹದ ಯೂರೋಪಿನ ಬಲಿಷ್ಠ ದೇಶಗಳು "ನಾವು ಇಷ್ಟು ಮಾತ್ರ ನಿರಾಶ್ರಿತರನ್ನು ತೆಗೆದುಕೊಳ್ಳುವುದಕ್ಕೆ ಸಾಧ್ಯ" ಎಂದು ಚೌಕಾಸಿ ಮಾಡುತ್ತಿವೆ. ಇಂತಹ ಸಂದರ್ಭದಲ್ಲಿ ಹೆಚ್ಚಿನ ನಿರಾಶ್ರಿತರಿಗೆ ತಮ್ಮ ಬಾಗಿಲನ್ನು ತೆರೆದು ತಾತ್ಕಾಲಿಕ ವಸತಿ ಸೌಕರ್ಯಗಳನ್ನು ಕಲ್ಪಿಸಿಕೊಟ್ಟಿರುವುದು ಟರ್ಕಿ, ಜೋರ್ಡಾನ್ ಮತ್ತು ಲೆಬನಾನ್ ತರಹದ ಬಡದೇಶಗಳು. ಈಗ ತಾಯಿನಾಡನ್ನು ತೊರೆದು ನಿರಾಶ್ರಿತರಾಗಿರುವ ಸಿರಿಯಾ, ಇರಾಕ್ ಮತ್ತು ಇತರೆ ದೇಶಗಳ ಜನರ ಸಂಖ್ಯೆ ಸುಮಾರು ನಲವತ್ತು ಲಕ್ಷವಾಗಿದ್ದು ಅವರಲ್ಲಿ ಟರ್ಕಿ ದೇಶವೇ 17 ಲಕ್ಷ ನಿರಾಶ್ರಿತರಿಗೆ ತನ್ನ ಬಾಗಿಲನ್ನು ತೆರೆದಿದೆ. ಈ ದೇಶದಿಂದ ಗ್ರೀಸ್ ದೇಶಕ್ಕೆ ಕದ್ದುಮುಚ್ಚಿ ಹೋಗಲು ಪ್ರತಿರಾತ್ರಿ ನೂರಾರು ಜನರು ಅಪಾಯಕಾರಿ ದೋಣಿಗಳನ್ನು ಏರುತ್ತಾರೆ. ಈ ವರ್ಷವೇ ಅಂತಹ ಯತ್ನದಲ್ಲಿ ಮೂರು ಸಾವಿರಕ್ಕೂ ಹೆಚ್ಚು ಜನ ನೀರು ಪಾಲಾಗಿದ್ದಾರೆ. ಈ ಕಾರಣಕ್ಕೇ ಈಗ ಮೆಡಿಟರೇನಿಯನ್ ಸಮುದ್ರವನ್ನು ಜನ 'ಜಲಸಮಾಧಿ' ಎಂದು ಕರೆಯಲಾರಂಭಿಸಿದ್ದಾರೆ.

ನಿರಾಶ್ರಿತರಾಗಿ ಟರ್ಕಿಯಲ್ಲಿ ನೆಲೆ ಪಡೆದವರಲ್ಲಿ ಅಬ್ದುಲ್ಲಾ ಕುರ್ದಿಯ ಕುಟುಂಬವೂ ಒಂದಾಗಿತ್ತು. ಕಳೆದ ಸೆಪ್ಟೆಂಬರ್ 2ರ ಬೆಳಗ್ಗೆ ಟರ್ಕಿ ತೀರದಿಂದ ಕೇವಲ ಹತ್ತು ಕಿಲೋಮೀಟರ್ ದೂರವಿರುವ ಗ್ರೀಸ್ ದೇಶದ ಕೋಸ್ ಎಂಬ ದ್ವೀಪವನ್ನು ತಲುಪುವ ಉದ್ದೇಶದಿಂದ ಕುರ್ದಿಯ ಕುಟುಂಬ ಒಂದು ಪ್ಲಾಸ್ಟಿಕ್ ದೋಣಿಯನ್ನೇರಿತ್ತು. ಕೇವಲ ಆರು ಜನರಿಗೆಂದು ತಯಾರಿಸಲಾಗಿದ್ದ ಆ ದೋಣಿಯಲ್ಲಿ ಹನ್ನೆರಡು ಜನರನ್ನು ತುಂಬಲಾಗಿತ್ತು. ದೋಣಿ ದಡವನ್ನು ಬಿಟ್ಟು ನಾಲ್ಕು ನಿಮಿಷವೂ ಆಗಿರಲಿಲ್ಲ, ಹದಿನೈದು ಅಡಿ ಎತ್ತರವಿದ್ದ ಅಲೆಗಳು ದೋಣಿಯನ್ನು ಮಗುಚಿಹಾಕಿದವು. ಅಬ್ದುಲ್ಲಾ ತನ್ನ ಮಡದಿ ಮತ್ತು ಮಕ್ಕಳನ್ನು ರಕ್ಷಿಸಲು ಅದೆಷ್ಟೇ ಪ್ರಯತ್ನಪಟ್ಟರೂ ಸಾಧ್ಯವಾಗಲಿಲ್ಲ. ಮಾರನೆ ದಿನ ಸಮುದ್ರದ ದಡದಲ್ಲಿ ಸಿಕ್ಕಿದ್ದು ಅಯ್ಲಾನ್‌ನ ಶವ.

ಅಯ್ಲಾನ್ ಸಾವಿನಿಂದಾಗಿ ಇವತ್ತು ಜಗತ್ತೇ ನಿರಾಶ್ರಿತರ ಸ್ಥಿತಿಗತಿ ಬಗ್ಗೆ ಯೋಚಿಸುವಂತೆ ಆಗಿದೆ. ಆದರೆ ಅವರ ಬಗ್ಗೆ ಯೋಚಿಸುವುದು, ಅವರಿಗೆಂದು ಸೌಲತ್ತುಗಳನ್ನು ಕಲ್ಪಿಸುವುದು ಮಾತ್ರ ಸಾಕಾಗದು. ಅವರನ್ನೆಲ್ಲ ಇಂತಹ ಸ್ಥಿತಿಗೆ ದೂಡಿದ ಅಮೆರಿಕ ಮತ್ತು ಅದರೊಂದಿಗೆ ಕೈಜೋಡಿಸಿದ ಸರ್ಕಾರಗಳ ಬಗ್ಗೆಯೂ ಚಿಂತಿಸಬೇಕಿದೆ. ಅಮೆರಿಕವನ್ನು ಹೇಗೆ ಮಟ್ಟಹಾಕಬೇಕೆಂದೂ ಯೋಚಿಸಬೇಕಿದೆ. ಅದು ಸಾಧ್ಯವಾಗುವವರೆಗೂ ಅಯ್ಲಾನ್ ತರಹದ ಅಮಾಯಕರು ಸಾಯುತ್ತಲೇ ಇರುತ್ತಾರೆ. ಅಯ್ಲಾನ್‌ಗಾಗಿ ಸುರಿದ ಕಣ್ಣೀರು ಅಮೆರಿಕಕ್ಕೆ ಧಿಕ್ಕಾರವಾದಾಗ ಮಾತ್ರ ಅದಕ್ಕೆ ಅರ್ಥ ಸಿಗುತ್ತದೆ. ■


ಕೌನ್ಸಿಲರ್‌ಗಳ ಖರೀದಿ ಯತ್ನ ಪಂಕ್ಚರ್

ಬಿ ಬಿ ಎಂ ಪಿ



ಬಿಬಿಎಂಪಿಯನ್ನು ಹಿಡಿಯುವ ಬಿಜೆಪಿ ಹೋರಾಟ ಇಷ್ಟಕ್ಕೇ ಮುಗಿದಿಲ್ಲ, ಪಿಕ್ಚರ್ ಅಭೀ ಬಾಕಿ ಹೈ....! ಎಂದ ಬಿಜೆಪಿ ರಾಷ್ಟ್ರೀಯ ಅಧ್ಯಕ್ಷ ಅಮಿತ್ ಷಾ ಮೀಡಿಯಾ ಗಳೆದುರು ಹೂಂಕರಿಸಿದ್ದೇ ತಡ, ಬೆಂಗಳೂರಿನ ಕಾಂಗ್ರೆಸ್ ಪಾಳೆಯದಲ್ಲಾಗಲೇ ನಡುಕ ಶುರುವಾಗಿತ್ತು. ನಾಗವಾರದ ಕಾಂಗ್ರೆಸ್ ಕೌನ್ಸಿಲರ್ ಇರ್ಷಾದ್ ಬೇಗಮ್‌ರ ಪತಿ ಖಲೀಮುಲ್ಲಾರಿಗೆ ಬಿಜೆಪಿ ಮೂಲದ ರಿಯಲ್ ಎಸ್ಟೇಟ್ ಖದೀಮನೊಬ್ಬ ವಿಚಿತ್ರ ಡೀಲ್ ಒಂದನ್ನು ತಂದೊಪ್ಪಿಸಿದ್ದ.

ಅದು ಮೇಯರ್ ಚುನಾವಣೆಗೆ ಚಕ್ಕರ್. ಅಂದರೆ



ಸೆಪ್ಟೆಂಬರ್ 11ರಂದು ನಡೆಯುವ ಬಿಬಿಎಂಪಿ ಮೇಯರ್ ಎಲೆಕ್ಷನ್ನಿನ ದಿನ ಯಾರ ಕೈಗೂ ಸಿಗದೆ ಅವರ ಕೌನ್ಸಿಲರ್ ಪತ್ನಿ ಇರ್ಷಾದ್ ಬೇಗಮ್‌ರನ್ನು ಅಜ್ಞಾತಸ್ಥಳದಲ್ಲಿ ಬಚ್ಚಿಟ್ಟಿರಬೇಕು. ಕೆ.ಜೆ. ಜಾರ್ಜ್ ಅಥವಾ ಯಾರೇ ಕಾಂಗ್ರೆಸ್ ನಾಯಕರು ಕೇಳಿದ ಪಕ್ಷದಲ್ಲಿ ತನ್ನ ಪತ್ನಿಗೆ ಆರೋಗ್ಯ ಸರಿ ಇಲ್ಲದ ಕಾರಣ ಬರಲಾಗಲಿಲ್ಲ ಎಂದು ದಬಾಯಿಸಬೇಕು ಅಥವಾ ತನ್ನ ಪತ್ನಿಯನ್ನು ಯಾರೋ ರೌಡಿಗಳು ಕಿಡ್ನಾಪ್ ಮಾಡಿ ಬಚ್ಚಿಟ್ಟಿದ್ದರೆಂದು ಪಟ್ಟು ಹೊಡೆಯಬೇಕು. ಮೇಯರ್ ಎಲೆಕ್ಷನ್ ಮುಗಿದನಂತರ ಏನು ಬೇಕಾದರೂ ಮಾಡಿಕೋ,' ಆ ಬಗ್ಗೆ ನಾನು ಕೇಳಲ್ಲ. ಆದರೆ ಮೇಯರ್ ಚುನಾವಣೆಗೆ ಮಾತ್ರ ಬರಕೂಡದು. ಇದಕ್ಕೆ ಎರಡೂವರೆ ಕೋಟಿ ಅಡ್ವಾನ್ಸ್ ದುಡ್ಡು. ಕೆಲಸ ಮುಗಿದನಂತರ ಮತ್ತೆ ಎರಡೂವರೆ ಕೋಟಿ ಹಾರ್ಡ್‌ಕ್ಯಾಷೂ...!

ಇಂಥಾದೊಂದು ಪ್ರಪೊಸಲ್ಲನ್ನು ಬಿಜೆಪಿ ಮೂಲದ ನಟೋರಿಯಸ್ ಲ್ಯಾಂಡ್ ಡೀಲರ್ ಓರ್ವ ನಾಗವಾರದ ಕಾಂಗ್ರೆಸ್ ಕೌನ್ಸಿಲರ್ ಶ್ರೀಮತಿ ಇರ್ಷಾದ್ ಬೇಗಮ್‌ರ ಪತಿ ಖಲೀಮುಲ್ಲಾನ ಮುಂದಿಟ್ಟಿದ್ದ. ಪ್ರಾರಂಭದಲ್ಲಿ ಐದು ಕೋಟಿಯಿದ್ದದ್ದು ಕ್ರಮೇಣ ಎಂಟು ಕೋಟಿಯತನಕ ಎಳೆದು ಅಂತಿಮವಾಗಿ ಖಲೀಮುಲ್ಲಾ ಭೀತಿಗೆ ಬಿದ್ದಿದ್ದೇ ಆಮಿಷವೊಡ್ಡುತ್ತಿದ್ದ ಖದೀಮನ ಜೊತೆ ಮಾತಾಡುವುದನ್ನೇ ನಿಲ್ಲಿಸಿಬಿಟ್ಟ!

ವಿಶ್ವನಾಥ್ ಬಂಟ

ಇತ್ತ ಯಲಹಂಕದಲ್ಲಿ ಚೌಡೇಶ್ವರಿ ವಾರ್ಡಿಗೆ ನಿಂತಿದ್ದ ಬಿಜೆಪಿ ಶಾಸಕ ವಿಶ್ವನಾಥ್‌ರ ಪತ್ನಿ ವಾಣಿಶ್ರೀಯವರನ್ನು ಸೋಲಿಸಿದ್ದು ಪದ್ಮಾವತಿ ಅಮರನಾಥ್. ಮೂಲತಃ ಆರೆಸ್ಸೆಸ್ ಕಾರ್ಯಕರ್ತರಾದ ಅಮರ್‌ನಾಥ್ ಕಾಂಗ್ರೆಸ್ಸಿನಿಂದ ತಮ್ಮ ಪತ್ನಿಯನ್ನು ಗೆಲ್ಲಿಸಲು ಪಟ್ಟ ಪಾಡು ಅಷ್ಟಿಷ್ಟಲ್ಲ. ಯಲಹಂಕ ಶಾಸಕ ವಿಶ್ವನಾಥ್ ಪತ್ನಿ ವಾಣಿಶ್ರೀಯವರಿಗೆ 8 ಸಾವಿರದಷ್ಟು ಓಟುಗಳು ಬಂದರೆ ಪದ್ಮಾವತಿ ಅಮರ್‌ನಾಥ್‌ಗೆ ಹನ್ನೆರಡು ಸಾವಿರದಷ್ಟು ಅಂದರೆ ಅಂತರವೇ 3250 ಮತಗಳು. ಮೊನ್ನೆ ಇದ್ದಕ್ಕಿದ್ದಂತೆ ಶಾಸಕ ವಿಶ್ವನಾಥ್ ಪರಮಾಪ್ತ ಮಧು ಎಂಬಾತನಿಂದ ಅಮರ್‌ನಾಥ್ ಮೊಬೈಲಿಗೆ ಕರೆ ಬಂದಿದೆ. ಅತ್ತಿಂದ ಮಾತಾಡಿದ ಮಧು 'ಏನಪ್ಪಾ ಎಲೆಕ್ಷನ್ನಿಗೆ ಎಷ್ಟು ಖರ್ಚು ಬಂತು, ಹೇಗಪ್ಪಾ ದುಡ್ಡು ಹೊಂಚಿಕೊಂಡೆ' ಎಂದು ಕುಹಕದ ಧಾಟಿಯಲ್ಲಿ ಕಿಚಾಯಿಸಿದ್ದಾನೆ. ಅದಕ್ಕೆ ಅಮರನಾಥ್ ತಾನು ಪಟ್ಟ ಕಷ್ಟ ಮಾಡಿದ ಸಾಲ ಚುನಾವಣೆಯಲ್ಲಿ ತಗುಲಿದ ವೆಚ್ಚಕ್ಕೆ ಹೆಂಡತಿ ಹೆಸರಲ್ಲಿದ್ದ ಸೈಟು ಮಾರುತ್ತೇನೆಂದೂ ಜೊತೆಗೆ ಮತ್ತೆರಡು ಆಸ್ತಿ ಮಾರಿ ಸಾಲ ತೀರಿಸಬೇಕಾಗಿದೆ ಎಂದಿದ್ದಾರೆ. ಇತ್ತ ಮಧು 'ಯಾಕಪ್ಪಾ ಸಾಲ ಮಾಡ್ತೀಯಾ ನನ್ನತ್ರ ಒಳ್ಳೆ ಐಡಿಯಾ ಇದೆ. ನೋಡು; ನೀನು ಮನಸ್ಸು ಮಾಡ್ದೆ ಅಂದ್ರೆ ಸಾಲನೂ ತೀರುತ್ತೆ ದುಡ್ಡೂ ಮಾಡಬಹುದು' ಎಂದಿದ್ದಾನೆ. ಹೇಗಪ್ಪಾ ಸಾಧ್ಯ ಎಂದು ಅಮರ್‌ನಾಥ್ ಕೇಳಿದ್ದಕ್ಕೆ 'ನಾನು ನಾಳೆ ಫೋನ್ ಮಾಡ್ತೀನಿ' ಎಂದು ಮಧು ಕಾಲ್ ಕಟ್ ಮಾಡಿದ್ದಾನೆ.

ಏನೋ ಚೇಷ್ಟೆಯಿರಬೇಕೆಂದು ತನ್ನ ಪಾಡಿಗೆ ತಾನಿದ್ದ ಅಮರನಾಥ್‌ಗೆ ಎರಡು ದಿನ ಬಿಟ್ಟು ಮತ್ತೆ ಫೋನ್ ಬಂದಿದೆ. ಅತ್ತಿಂದ ಮಧು ಮತ್ತು ಆತನ ಪಕ್ಕ ಯಲಹಂಕ ಬಿಜೆಪಿ ಶಾಸಕ ವಿಶ್ವನಾಥ್. ಮಧು ಹೇಳಿದ್ದಿಷ್ಟೆ. ನೋಡು ನಿನಗೆ ಈಗ್ಗಿಂದಿಗ್ಗೆ ಎರಡೂವರೆ ಕೋಟಿ ಕೊಟ್ಟು ಬಿಡ್ತೀವಿ. ಅದಕ್ಕೆ ನಿನ್ನಿಂದ ಯಾವ ಷ್ಯೂರಿಟಿಯನ್ನೂ ನಾವು ಪಡೆಯೋಲ್ಲ. ನೀನು ದುಡ್ಡು ಈಸ್ಕೊಳ್ಳುತ್ತಿದ್ದಂತೆ ನಮ್ಮ ಕೈಗೆ ರಾಜೀನಾಮೆ ಪತ್ರವನ್ನು ಬರೆದುಕೊಡಬೇಕು. ಅದನ್ನು ನಾವು ಹೇಗೆ ಬೇಕಾದ್ರೂ ಬಳಸ್ಕೋತ್ತೀವಿ. ನೀನು ರಾಜೀನಾಮೆ ಕೊಟ್ಟ ನಂತರ ಹೇಗೂ ಮತ್ತೆ ಎರಡು ತಿಂಗಳೊಳಗೆ ಎಲೆಕ್ಷನ್ ಬಂದೇ ಬರುತ್ತೆ. ಆಗ ನಿನಗೆ ಇದೇ ಕ್ಷೇತ್ರದಿಂದ ಬಿಜೆಪಿ ಟಿಕೆಟ್ ಕೊಡ್ತೀವಿ. ಜೊತೆಗೆ ಎಲೆಕ್ಷನ್ ಖರ್ಚಿಗೆ ಅಂತ ಮತ್ತೆ ಎರಡೂವರೆ ಕೋಟಿ ಕೊಡ್ತೀವಿ. ಅಲ್ಲಿಗೆ ನಿನಗೆ ಐದು ಕೋಟಿ ಮತ್ತೆ ಕೌನ್ಸಿಲರ್‌ಗಿರಿ ಎಲ್ಲವನ್ನೂ ಒದಗಿಸಿದಂತಾಯ್ತು. ಐದು ಕೋಟಿ ಸಾಲಲ್ಲ ಅಂದ್ರೆ ನೀನು ಈ ಬಗ್ಗೆ ಬಾರ್ಗೇನ್ ಮಾಡಬಹುದು. ಇದಕ್ಕೆ ಯಲಹಂಕ ಎಮ್ಮೆಲ್ಲೇ ವಿಶ್ವನಾಥ್ ಮಾತ್ರವೇ ಅಲ್ಲ, ಸ್ವತಃ ಅಶೋಕ್ ಗ್ಯಾರಂಟಿ ಕೊಡ್ತಾರೆ...!

ಅಶೋಕ್ ಮನೇಲಿ..!

ಮಧು ಬಾಯಿಂದ ಇಷ್ಟು ಕೇಳಿದ್ದೇ ತಡ ಅಮರ್‌ನಾಥ್ ಅರ್ಥವಾಗದವನಂತೆ 'ನಿಮ್ಮ ಎ (ವಿಶ್ವನಾಥ್) ಮಾತ್ರಾನೇ ಅಲ್ದೆ ಅಶೋಕ್ ಕೂಡ ಮಾತುಕತೇಲಿ ಇರ್ತಾರಾ?' ಎಂದು ಕೇಳಿದ್ದಕ್ಕೆ ಮ 'ಹೌದು. ಇದು ನಾವಲ್ಲ ಹೇಳ್ತಿರೋದು. ಅಶೋ ಮನೇಲೇ ಮಾತುಕತೆ ಮಾಡೋಣ. ನಮ್ಮ ಮೆ ನಿನಗೆ ನಂಬಿಕೆ ಇಲ್ಲದೆ ಹೋದ್ರೆ ಅಶೋಕ್ ಹೆ ಮೇಲಾದ್ರೂ ನಂಬಿಕೆ ಬರಬೇಕಲ್ವಾ? ನಿನಗೆ ದು ಕೊಡೋದು ಅಶೋಕ್ ಅವರೇನೇ. ಅಶೋಕ್ ಮನೇಲೇ ಮಾತುಕತೆ ಮಾಡೋಣ. ಅವರ ಬಾಯಿಂದಲೇ ನಿನಗೆ ಬಿಜೆಪಿ ಟಿಕೆಟ್ ಪ್ರಾಮಿಸ್ ಮಾಡ್ತಾರೆ. ಮುಂದೆ ಅವರೇ ನಿನಗೆ ಎಲೆಕ್ಷನ್ ಬಿಜೆಪಿ 'ಬಿ' ಫಾರ್ಮು ಎಲ್ಲವನ್ನೂ ವ್ಯವಸ್ಥೆ ಮ ನೀನು ಚಿಂತೆ ಮಾಡಬಾರದು ಅಷ್ಟೇನೆ...' ಎಂ ಮಧು. ಪಕ್ಕದಲ್ಲೇ ಕೂತು ಮಧು ಬಾಯಿಂದ ಇದೆಲ್ಲವನ್ನೂ ಹೇಳಿಸುತ್ತಿದ್ದ ಯಲಹಂಕ ಶಾಸಕ ವಿಶ್ವನಾಥ್ ತಾನು ಹೇಳುವ ಬದಲು ತನ್ನ ಬ ಬಂಟನಿಂದ ಹೇಳಿಸುತ್ತಿದ್ದಾರೆಂಬುದು ಸ್ಪಷ್ಟವಾಗಿ ಅಮರ್‌ನಾಥ್ ಗಮನಕ್ಕೆ ಬಂದಿದೆ. ಆಯ್ತು ಹೆ ಎಂದಿದ್ದೇ ಫೋನ್ ಕಟ್ ಮಾಡಿದ್ದಾರೆ.


ಮೂಲತಃ ಆರೆಸ್ಸೆಸ್ ಕಾರ್ಯಕರ್ತರಾದ ಅಮರ್‌ನಾಥ್ ಬಿಜೆಪಿಯಲ್ಲಿದ್ದು ಯಲಹಂಕದ ವಿಶ್ವನಾಥ್ ಅಟ್ಟಹಾಸಕ್ಕೆ ರೋಸತ್ತೇ ಕಾಂಗ್ರೆಸ್ಸಿಗೆ ಬಂದಾತ. ಜಿದ್ದಿಗೆ ಬಿದ್ದೇ ವಿಶ್ವನಾಥ್ ಪತ್ನಿಯ ಗೆದ್ದ ನಂತರವೂ ಇಂಥಾದ್ದೊಂದು ಚೌಕಾಸಿಗೆ ಬಿಜೆಪಿ ನಾಯಕರ ದುರ್ಬುದ್ಧಿಗೆ ಅಸಹ್ಯ ಪಟ್ಟು ಲೋಕಲ್ ಕಾಂಗ್ರೆಸ್ ನಾಯಕ ಗೋಪಾಲಕೃಷ್ಣ ವಿಷಯ ಮುಟ್ಟಿಸಿದ್ದಾರೆ. ಗೋಪಾಲಕೃಷ್ಣ ಇದನ ಹಠಕ್ಕೆ ಬಿದ್ದು ಸುದ್ದಿ ಮಾಡಿದ್ದಾರೆ. ಇಲ್ಲಿ ನೆಪಕ್ಕೆ ಯಲಹಂಕ ಶಾಸಕ ವಿಶ್ವನಾಥ್ ಮತ್ತು ಲೋಕ ಬಿಜೆಪಿ ಪುಢಾರಿಗಳಿದ್ದರೆ ಇದರ ಮೂಲದಲ್ಲಿದ್ದ ಮಾಜಿ ಡಿಸಿಎಂ ಅಶೋಕ್ ಎಂಬ ಬಗ್ಗೆ ಯಾ ಅನುಮಾನವಿಲ್ಲ.

ಬೆಂಬಲ ಘೋಷಿಸಿ ಬಿಜೆಪಿ ಕಚೇರಿ ತನ ತನ್ನನ್ನು ಹುಡುಕಿಬಂದಿದ್ದ ನಾಲ್ವರು ಪಕ್ಷೇತರರ ಅವಮಾನಿಸಿ ಕಳಿಸಿದ ಅಶೋಕ್‌ಗೆ ತನ್ನ ತಪ್ಪಿನ ಅರಿವಾಗಲು ಹೆಚ್ಚು ಸಮಯ ಹಿಡಿಯಲಿಲ್ಲ. ಮತ್ತೊಂದೆಡೆ ಜೆಡಿಎಸ್ ಬಿಜೆಪಿಯ ಎಲ್ಲಾ ಲೆ ತಲೆಕೆಳಗು ಮಾಡಿ ಕಾಂಗ್ರೆಸ್ ಜೊತೆ ಕೈಜೋ ಅಶೋಕ್ ಪಾಲಿಗೆ ಹಡಗು ಮುಳುಗಿ ದಂತಾ ಒಂದೆಡೆ ಬಿಜೆಪಿ ವರಿಷ್ಠರ ಹಿಡಿಶಾಪ ಮತ್ತೊಂ ರಾಜ್ಯ ಬಿಜೆಪಿಯಲ್ಲಿನ ತನ್ನ ವಿರೋಧಿಗಳ ಕೆಲ ಕಂಗಾಲು ಬಿದ್ದ ಅಶೋಕ್ ಹತಾಶ ಯತ್ನವೆಂ ಇಂಥಾದ್ದೊಂದು ದುಸ್ಸಾಹಸಕ್ಕಿಳಿದದ್ದು ನಿಚ್ಚಳವ

ಮೇಯರ್ ಮೇಕರ್ ರಾ.ಲಿಂ. ರೆಡ್ಡಿ!


ಜೆಡಿಎಸ್-ಕಾಂಗ್ರೆಸ್ ಜಂಟಿಯಾಗಿ ಪಾಲಿಕೆ ಹಿಡಿಯುತ್ತಿದ್ದಂತೆ ಹೊಸ ಮೇಯರ್ ಯಾರೆಂಬ ಕುತೂಹಲಕ್ಕೆ ಬೆಂಗಳೂರು ಬಿದ್ದಂತಿದೆ. ಪಾಲಿಕೆ ರಾಜಕಾರಣ ಮತ್ತು ಕಾಂಗ್ರೆಸ್ ಜಾಯಮಾನ ಬಲ್ಲವರೆಲ್ಲ ಹೇಳುವ ಏಕೈಕ ಹೆಸರೆಂದರೆ ಅದು ಮಡಿವಾಳದ ಕೌನ್ಸಿಲರ್ ಮಂಜುನಾಥ್ ರೆಡ್ಡಿ!

ಸತತ ನಾಲ್ಕನೇ ಬಾರಿಗೆ ಮಡಿವಾಳದಿಂದ ಗೆದ್ದು ಬರುತ್ತಿರುವ ಮಂಜುನಾಥ್ ರೆಡ್ಡಿ ರಾಮಲಿಂಗಾರೆಡ್ಡಿಗೆ ಪರಮಾಪ್ತ ಮತ್ತು ಸದ್ಯ ಬಿಬಿಎಂಪಿಯ ಎಲ್ಲಾ ಕಾಂಗ್ರೆಸ್ ಕೌನ್ಸಿಲರ್‌ಗಳಿಗಿಂತಲೂ ಹಿರೀಕ. ಈ ಹಿಂದೆ ವಿರೋಧಿ









ನಾಯಕನಾಗಿ, ಸ್ಥಾಯಿ ಸಮಿತಿ ಅಧ್ಯಕ್ಷನಾಗಿ ಪಾಲಿಕೆ ರಾಜಕಾರಣದ ಆಳ ಅಗಲ ಬಲ್ಲ ಮಂಜುನಾಥ್ ರೆಡ್ಡಿ ಸಮರ್ಥನೆಂಬ ಬಗ್ಗೆ ಎರಡು ಮಾತಿಲ್ಲ, ಅದು ಬಿಟ್ಟರೆ ಕೇಳಿಬರುವ ಎರಡನೇ ಹೆಸರು ಜಯಮಹಲ್‌ನ ಎಂ.ಕೆ. ಗುಣಶೇಖರ್. ರೋಷನ್ ಬೇಗ್ ಬಲಗೈ ಬಂಟ.


ಆದರೆ ಭೈರತಿ ಬಸವರಾಜ್ ಮತ್ತು ಹೊಸಕೋಟೆ ಶಾಸಕ ಎಂಟಿಬಿ ನಾಗರಾಜ್ ತಮ್ಮದೇ ಪ್ರತ್ಯೇಕ ಸಿಂಡಿಕೇಟ್ ಮಾಡಿಕೊಂಡಿರುವಂತಿದೆ. ಇದನ್ನು ಸಿಎಂ ಸಿದ್ದು ಕೃಪಾಪೋಷಿತ ಕೂಟವೆನ್ನುವವರೂ ಉಂಟು. ಇವರ ಅಭ್ಯರ್ಥಿಯಾಗಿ ಮೇಯರ್ ಪದವಿಗೆ ಕೈಹಾಕಿರುವುದು ಹಗದೂರು ಕಾಂಗ್ರೆಸ್ ಕೌನ್ಸಿಲರ್ ಉದಯ್‌ಕುಮಾರ್. ಇದಲ್ಲದೆ ಹೇರೊಹಳ್ಳಿ ವಾರ್ಡಿನ ಬಿ. ರಾಜಣ್ಣನ ಹೆಸರನ್ನು ಯಶವಂತಪುರ ಶಾಸಕ ಎಸ್.ಟಿ. ಸೋಮಶೇಖರ್ ತೂರಿಬಿಟ್ಟಿದ್ದಾರೆ. ಶಂಕರಮಠದ ಶಿವರಾಜು, ದತ್ತಾತ್ರೇಯ ದೇವಸ್ಥಾನ ವಾರ್ಡಿನ ಸತ್ಯನಾರಾಯಣ ಮತ್ತು ಪ್ರಕಾಶ್ ನಗರದ ಪದ್ಮಾವತಿಯವರ ಹೆಸರೂ ಮೇಯರ್ ಹುದ್ದೆಯ ಮುಂಚೂಣಿಯಲ್ಲಿದೆ.

ಮಂಜುನಾಥ್ ರೆಡ್ಡಿ ಬಿಟ್ಟರೆ ಪದ್ಮಾವತಿ ಸೀನಿಯರ್. ದೇವೇಗೌಡ ಮುಖ್ಯಮಂತ್ರಿಯಾಗಿದ್ದಾಗಲೇ ಮೇಯರಾಗಬೇಕಿತ್ತು, ಈಗಾದರೂ ಹಿಂದುಳಿದ ಮಹಿಳೆಯೊಬ್ಬಳಿಗೆ ಅವಕಾಶ ಸಿಗುತ್ತಾ ಅಥವಾ ಮಹಿಳೆಗೆಂದೇ ಮೇಯರ್ ಮೀಸಲು ಬರುವವರೆಗೂ ಕಾಯಬೇಕಾ ಗೊತ್ತಿಲ್ಲ, ಸದ್ಯಕ್ಕಂತೂ ಮಂಜುನಾಥ್ ರೆಡ್ಡಿ ಹೆಸರೇ ಮುಂದಿದೆ. ಅದೂ ರಾಮಲಿಂಗಾರೆಡ್ಡಿಯವರ ತಾಕತ್ತಿನ ಕಾರಣಕ್ಕೆ.

...ರಿಪಾಳ್ಯದ ಅಲ್ತಾಫ್

...ಬೆಂಗಳೂರಿನ ಪ್ರಮುಖ ಬಿಜೆಪಿ ಶಾಸಕರೆಲ್ಲ ...ಗಿ ಅಶೋಕ್ ಮನೆಯಲ್ಲಿ ಕೂತು ರಣತಂತ್ರ ...ಿದ್ದರ ಫಲವೇ ಅರ್ಧ ಡಜನ್ ಕಾಂಗ್ರೆಸ್ ...ಲರ್‌ಗಳ ಖರೀದಿಗೆ ಬಿಜೆಪಿ ಕೈಹಾಕಿತ್ತು. ಕಟ್ಟಾ ...ಬ್ಬ ಗ್ಯಾಂಗ್ ನಾಗವಾರದ ಕಾಂಗ್ರೆಸ್ ಕೌನ್ಸಿಲರ್ ...ದ್ ಬೇಗಮ್‌ಗೆ ಕೈಯಿಟ್ಟರೆ ಯಲಹಂಕದ ...ಥ್ ತನ್ನ ಪತ್ನಿಯನ್ನೇ ಸೋಲಿಸಿದ ಪದ್ಮಾವತಿ ...ರ್‌ನಾಥ್ ದಾಶಿಗೆ ಪ್ರವೇಶಿಸಿದ್ದ. ಇತ್ತ ...ರಾಜಪೇಟೆ ಮತ್ತು ವಿಜಯನಗರದ ಕಾಂಗ್ರೆಸ್ ...ಲರ್‌ಗಳ ಬೇಟೆಗೆ ನಿಂತಿದ್ದು ಅಶೋಕ್‌ರ ನಂಬಿಕಸ್ಥ ಎಮ್ಮೆಲ್ಸಿ ಅಶ್ವತ್ಥನಾರಾಯಣ. ನೇರವಾಗಿ ...ಪಾಳ್ಯದ ಕಾಂಗ್ರೆಸ್ ಕೌನ್ಸಿಲರ್ ಸೀಮಾರ ಪತಿ ...ಫ್ ಖಾನ್‌ಗೇ ಗಾಳ ಹಾಕಿದ ಅಶ್ವತ್ಥ ನಾರಾಯಣ ... ಡೀಲು ತಂದಿಟ್ಟ ರೀತಿಯೇ ಹಾಗಿತ್ತು. "ನೀವು ...ಷ್ಟಿನಲ್ಲೇ ಇರಿ. ಬಿಜೆಪಿಯನ್ನು ಬೆಂಬಲಿಸೋದೂ ... ಆದರೆ ಮೇಯರ್ ಚುನಾವಣೆ ದಿನ ಏನಾದ್ರೂ ... ಚಕ್ಕರ್ ಹಾಕಿಬಿಡಿ. ಅಷ್ಟೇ ಸಾಕು. ಅದಕ್ಕೆ ...ವರೆ ಕೋಟಿ ಅಡ್ವಾನ್ಸು. ಕೆಲಸ ಮುಗಿದ ... ಬಾಕಿ ಎರಡೂವರೆ ಕೋಟಿ ಈಸ್ಕೊಳ್ಳಿ. ಇದಕ್ಕೆ ...ಕ್ ಸಾಹೇಬರೇ ಗ್ಯಾರಂಟಿ ಕೊಡ್ತಾರೆ. ಬೇಕಿದ್ರೆ ... ನಿಮ್ಮನ್ನ ಅಶೋಕ್ ಮನೆಗೆ ಕರ್ಕೊಂಡು ... ಒನ್ ಟು ಒನ್ ಮಾತಾಡಿಸ್ತೀನಿ. ಮೇಯರ್











...ನ್ನಲ್ಲಿ ನೀವು ಚಕ್ಕರ್ ಹಾಕ್ಬೇಕು ಅಷ್ಟೇ. ನಿಮ್ಮ ...ಯವರು ನಿಮ್ಮ ನಿಷ್ಠೂರ ಕಟ್ಕೊಂಡು ಅದೇನ್ ...ಕ್ಕೋಕಾಗುತ್ತೇ...!" ಎಂದು ಎಮ್ಮೆಲ್ಸಿ ...ನಾರಾಯಣ ಕುದುರಿಸಿದ್ದ ಡೀಲನ್ನು ಅಲ್ತಾಫ್ ...ನಾಗೇ ನಿಭಾಯಿಸಿದ್ದರು.

...ನಾವತ್ತು ಅಲ್ತಾಫ್ ಬಲೆಗೆ ಬೀಳುತ್ತಿಲ್ಲ ಎಂದು ...ಟಿಯಾಯಿತೋ ಅಶ್ವತ್ಥನಾರಾಯಣರ ಕಣ್ಣು ... ಬಾಪೂಜಿ ನಗರದ ಮತ್ತೊಬ್ಬ ಕಾಂಗ್ರೆಸ್ ...ರ್ ಅಜ್ಮಲ್ ಬೇಗ್ ಮೇಲೆ. ವಿಜಯನಗರ ...ಮ ಬಾಪೂಜಿನಗರ ವಾರ್ಡಿನಲ್ಲಿ ಬಿಜೆಪಿಯ ...ಮ ಟಿ.ವಿ. ಕೃಷ್ಣ ಮತ್ತು ಜೆಡಿಎಸ್‌ನ ಆರಿಫ್ ... ಎಂಬಿಬ್ಬರು ದೈತ್ಯರನ್ನೂ ಮಣಿಸಿ ಗೆದ್ದದ್ದು ... ಪಾಷಾ. ಜೆಡಿಎಸ್‌ನ ಆರಿಫ್ ಪಾಷಾ ...ತಮ್ಮ ಐದು ಸಾವಿರದಷ್ಟು ಮತಗಳನ್ನು ...ೂ ಬಿಜೆಪಿಯ ಟಿ.ವಿ. ಕೃಷ್ಣನ ವಿರುದ್ಧ ...ಕ್ಕೂ ಅಧಿಕ ಮತಗಳ ಅಂತರದಿಂದ ಗೆದ್ದ ... ಪಾಷಾ ನಿಷ್ಠೂರಿ ವ್ಯಕ್ತಿ. ಇದು ಗೊತ್ತಿದ್ದೂ ...ತ್ತೀಯ ಮುಸ್ಲಿಂ ಸ್ಕ್ರ್ಯಾಪ್ ಡೀಲರ್ ಒಬ್ಬನನ್ನು ...5 ಕೋಟಿಯ ಆಮಿಷವೊಡ್ಡಿ ಮುಂಗಡವಾಗಿ ...ವರೆ ಕೋಟಿಯ ಆಸೆ ಹುಟ್ಟಿಸಿದ್ದಕ್ಕೆ ಅಜ್ಮಲ್ ... ನಯವಾಗಿಯೇ ತಲೆತಪ್ಪಿಸಿಕೊಂಡಿದ್ದಾರೆ.

...ತರರ ಸಂಬಂಧಿಗಳು

...ದು ಕೇವಲ ಗೋರಿಪಾಳ್ಯ ಮತ್ತು ...ಜಿನಗರದ ಇಬ್ಬರು ಮುಸ್ಲಿಂ ಕೌನ್ಸಿಲರ್‌ಗಳ ... ಯತ್ನವಷ್ಟೇ ಆಗಿರಲಿಲ್ಲ. ಯಾರೆಲ್ಲ ...ಪಕ್ಷೇತರ ಕೌನ್ಸಿಲರ್‌ಗಳ ಬಲೆಗೆ ಬೀಳುತ್ತಾರೆಂದೇ ... ಎಮ್ಮೆಲ್ಲೆಗಳ ಮೂಲಕ ಒಂದು ಸುತ್ತಿನ ...ದಾಗಿತ್ತು. ಈಗಾಗಲೇ ಮುನಿರತ್ನ ಮತ್ತು ... ಬಸವರಾಜ್ ಸುಪರ್ದಿಯಲ್ಲಿದ್ದ ಆರು ಮಂದಿ ... ಕೈಕೊಂಡ ಕೋನೇನ ಅಗ್ರಹಾರದ ಚಂದ್ರಪ್ಪ ರೆಡ್ಡಿ ...ಮಯ್ಯನ ನಗರದ ಆನಂದ್‌ಕುಮಾರ್ ... ರೆಸಾರ್ಟ್ ಸೇರಿಕೊಂಡಿರುವುದು ...ನ್ನಿದ್ದೇ ಆನಂದ್‌ಕುಮಾರ್ ಅಣ್ಣ ಮತ್ತು ...ರಿಪ್ಪನ ಸಮೀಪದ ಸಂಬಂಧಿಯೊಬ್ಬನನ್ನು ... ಇಬ್ಬರಿಗೂ ತಲಾ ಐದೈದು ಕೋಟಿಯ ಆಫರ್ ಇಡಲಾಯಿತು. ಸಿ.ವಿ. ರಾಮನ್‌ನಗರದ ಬಿಜೆಪಿ ಶಾಸಕ ರಘುವೇ ನೇರವಾಗಿ ಅಖಾಡಕ್ಕಿಳಿದು ಅಶೋಕ್ ಸಾಹೇಬರೇ ದುಡ್ಡು ಕೊಡ್ತಾರೆ. ಅವರೇ ಬಿಜೆಪಿ ಟಿಕೆಟ್ ಕೊಡಿಸಿ ಗೆಲ್ಲಿಸಿಕೊಳ್ತಾರೆ ಇತ್ಯಾದಿಯಿಂದಾಗಿ ಮಸ್ಕಾ ಹೊಡೆದದ್ದೇ ಹೊಡೆದದ್ದು.


ಆದರೆ ಕೇರಳದ ರೆಸಾರ್ಟ್‌ನಲ್ಲಿದ್ದ ಪಕ್ಷೇತರ ಕೌನ್ಸಿಲರ್‌ಗಳ ಸುತ್ತ ಮುನಿರತ್ನ ಹಾಕಿದ್ದ ಸರ್ಪಗಾವಲು ಹೇಗಿತ್ತೆಂದರೆ ಬಿಜೆಪಿಯ ಪರ ಡೀಲು ಕುದುರಿಸಲು ಬಂದಿದ್ದ ಸಂಬಂಧಿಗಳೇ ದಂಗಾಗುವಂತೆ ಕಾವಲು ವ್ಯವಸ್ಥೆಯಿತ್ತು. ಭಾರೀ ನಿರೀಕ್ಷೆಯಿಟ್ಟು ಕೇರಳದ ರೆಸಾರ್ಟಿಗೆ ಬಂದಿದ್ದ ಸಂಬಂಧಿಗಳು ಬಂದ ದಾರಿಗೆ ಸುಂಕವಿಲ್ಲ ಎಂದು ಬರಿಗೈಯಲ್ಲಿ ವಾಪಸ್ಸಾಗಬೇಕಾಯಿತು.

ಕೌನ್ಸಿಲರ್‌ಗಳ ಖರೀದಿ ತಾವು ತಿಳಿದಷ್ಟು ಸಲೀಸಲ್ಲ ಎಂಬುದು ಅರ್ಥವಾಗಿದ್ದೇ ಬಿಜೆಪಿ ಬೇರೆಯದೇ ಲೆಕ್ಕಾಚಾರಕ್ಕಿಳಿದಿದೆ. ಬಿಬಿಎಂಪಿಯ ಸದಸ್ಯರಲ್ಲದ ಸಂಸದರು, ಶಾಸಕರು, ವಿಧಾನ ಪರಿಷತ್ ಸದಸ್ಯರಿಗೆ ಮೇಯರ್ ಚುನಾವಣೆಯಲ್ಲಿ ಮತ ಹಾಕುವ ಅಧಿಕಾರವನ್ನೇ ಪ್ರಶ್ನಿಸಿ ಐವರು ಬಿಜೆಪಿ ಕೌನ್ಸಿಲರ್‌ಗಳಿಂದ ಕೋರ್ಟ್ ಮೆಟ್ಟಿಲೇರಿದ್ದಾಯ್ತು. ಅದೂ ಪ್ರಯೋಜನಕ್ಕೆ ಬರುತ್ತಿಲ್ಲ ಎಂದು ಗೊತ್ತಾಗಿದ್ದೆ ಎಮ್ಮೆಲ್ಸಿಗಳಾದ ರಘು ಆಚಾರ್ ಮತ್ತು ಕೋನರೆಡ್ಡಿಗೆ ಬಲೆ ಬೀಸಿದ್ದಾಯ್ತು.

ಸರ್ಕಾರ ಕಾಂಗ್ರೆಸ್ಸಿರುವಾಗ ಬಿಜೆಪಿಯ ಮೇಯರಾಗಿ ಬರುವ ಲಾಭ ಅಷ್ಟಕ್ಕಷ್ಟೇ ಎಂಬ ಕಾಮನ್‌ಸೆನ್ಸ್ ಪ್ರತಿಯೊಬ್ಬರಲ್ಲೂ ಕಾರ್ಯ ಸಾಧಿಸತೊಡಗಿತ್ತು. ಹಾಗೊಮ್ಮೆ ಬಿಜೆಪಿಯೇ ಪಾಲಿಕೆ ಹಿಡಿದರೂ ಸರ್ಕಾರ ತನ್ನ ಪಟ್ಟು ಬಿಗಿಹಿಡಿಯಿತೆಂದರೆ ಕೋಟಿಗಟ್ಟಲೆ ಸುರಿದು ಗೆದ್ದುಬಂದ ಯಾವೊಬ್ಬ ಕೌನ್ಸಿಲರೂ ನಯಾ ಪೈಸೆ ಗಿಟ್ಟಿಸಲಾಗುವುದಿಲ್ಲ. ಸಿದ್ದು ಸರ್ಕಾರ ಫಂಡು ಕೊಟ್ಟರೆ ತಾನೇ ವಾರ್ಡ್ ಅಭಿವೃದ್ಧಿ ಮತ್ತು ಕಾಮಗಾರಿ?

ಇಂಥ ಮನಸ್ಥಿತಿಗೆ ಬಿದ್ದೇ ಹುಷಾರಾದ ಪಕ್ಷೇತರ ಪಾಲಿಕೆ ಸದಸ್ಯರು ಮತ್ತು ಬಿಜೆಪಿ ಗಾಳಕ್ಕೆ ಸಿಲುಕದ ಕಾಂಗ್ರೆಸ್ ಕೌನ್ಸಿಲರ್‌ಗಳ್ಯಾರೂ ಐದು ಕೋಟಿಯ ಡೀಲಿಗೆ ತಲೆ ಕೊಡಲಿಲ್ಲ. ಸದಸ್ಯೇತರರ ಮತದಾನದ ಅಧಿಕಾರ ಕುರಿತಂತೆ ಕೋರ್ಟ್ ಮೆಟ್ಟಿಲೇರಿದ ಬಿಜೆಪಿ ಕೌನ್ಸಿಲರ್‌ಗಳ ಹುನ್ನಾರಕ್ಕೆ ಹೈಕೋರ್ಟ್ ಮಣೆಯಲೂ ಇಲ್ಲ. ಕೊನೆಗೂ ಅಶೋಕ್ ಪಟಾಲಮ್ಮಿಗೆ ಉಳಿದದ್ದು ಕಾಂಗ್ರೆಸ್ ಜೆಡಿಎಸ್ ಮೈತ್ರಿ ವಿರುದ್ಧ ಬೀದಿಗಿಳಿದು ಬಾಯಿ ಬಡಿದುಕೊಳ್ಳುವುದೊಂದೆ. ಸದ್ಯ ಬೀದಿಬೀದಿಗಳಲ್ಲಿ ಬಿಜೆಪಿ ಬೊಬ್ಬೆ ಹಾಕುತ್ತಿರುವುದಕ್ಕೆ ಬೆಂಗಳೂರಿನ ಜನ ಕವಡೆ ಕಿಮ್ಮತ್ತು ಕೊಟ್ಟಿಲ್ಲ. ಬೆಂಗಳೂರನ್ನು ಕಸದ ಗುಂಡಿಯಾಗಿಸಿದ ಬಿಜೆಪಿಗರನ್ನು ಬೀದಿಯಲ್ಲಿ ಕಂಡ ಜನಕ್ಕೆ ಕಸದ ರಾಶಿ ಬಿಟ್ಟರೆ ಬೇರೆ ಬೇರೆ ಯಾವ ಚಿತ್ರ ತಾನೇ ಕಣ್ಣಿಗೆ ಕಟ್ಟಲು ಸಾಧ್ಯ?

■ ರಾ. ಸೋಮನಾಥ್



ಬೆಂಗಳೂರು ಜೆಡಿಎಸ್‌ಗೆ ದೇವೇಗೌಡರು ಕಲ್ಪಿಸಿದ ಗಂಜಿಕೇಂದ್ರ

ಜೆಡಿಎಸ್-ಕಾಂಗ್ರೆಸ್ ಮೈತ್ರಿ ಇನ್ನೇನು ಪಕ್ಕಾ ಎಂದು ಗೊತ್ತಾಗಿದ್ದೇ ಹತಾಶೆಗೆ ಬಿದ್ದ ಬಿಜೆಪಿ ಮೇಯರ್‌ಗಿರಿಯನ್ನೇ ಜೆಡಿಎಸ್‌ಗೆ ಬಿಟ್ಟುಕೊಡಲು ಅಣಿಯಾಗಿತ್ತು. ಬಿಜೆಪಿಯ ಮೇಯರ್‌ಗಿರಿಯನ್ನೇ ಧಿಕ್ಕರಿಸಿದ ದೇವೇಗೌಡರು ಕಾಂಗ್ರೆಸ್ ಕೊಡುವ ಉಪಮೇಯರ್ ಅಲ್ಪತೃಪ್ತಿಗೆ ಇಳಿದಿದ್ದಾದರೂ ಏಕೆ?

ದೇವೇಗೌಡರ ಚಾಲು ಬಲ್ಲ ಯಾರಿಗೂ ಇದರಲ್ಲಿ ವಿಶೇಷ ಕಾಣಿಸುತ್ತಿಲ್ಲ. ಹಾಗೊಮ್ಮೆ ಬಿಜೆಪಿ ಬೆಂಬಲ ಗಳಿಸಿ ಜೆಡಿಎಸ್‌ಗೇ ಮೇಯರ್ ಪಟ್ಟ ಪ್ರಾಪ್ತಿಯಾದರೂ ಸರ್ಕಾರ ಕಾಂಗ್ರೆಸ್ಸಿರುವುದರಿಂದ ನಯಾಪೈಸೆಯ ಪ್ರಯೋಜನವಾಗದೆಂಬ ಲೆಕ್ಕಾಚಾರ ಗೌಡರದ್ದು. ಈ ಮಧ್ಯೆ ರಾಷ್ಟ್ರಪತಿಗಳೇನಾದರೂ ಬೆಂಗಳೂರು ತ್ರಿಭಜನೆ ಮಸೂದೆಗೆ ಅಂಕಿತವಿಟ್ಟರೆಂದರೆ ಸರ್ಕಾರ ಪಾಲಿಕೆಯನ್ನೇ ರದ್ದು ಮಾಡುತ್ತದೆ. ಕೋಟಿ ಕೋಟಿ ಸುರಿದು ಗೆದ್ದ ತನ್ನ ಪಕ್ಷದ ಕೌನ್ಸಿಲರ್‌ಗಳಿಗೆ ಚೂರು ಪಾರಾದರೂ ಲಾಭ ಗಿಟ್ಟಬೇಕೆಂದರೆ ಉಪಮೇಯರ್‌ಗಿರಿಯಾದರೂ ಸರಿ ಸರ್ಕಾರದ ಜೊತೆಗಿದ್ದರೇನೇ ಲಾಭ.

ಹೇಗೂ ಪಾಲಿಕೆಗೆ ಗೆದ್ದುಬಂದವರೆಲ್ಲ ಹೊಸಬರು ಮತ್ತು ಆಯಾ ಕ್ಷೇತ್ರದ ಜೆಡಿಎಸ್ ಶಾಸಕರ ಕೈಗೊಂಬೆಗಳ. ಇಂಥ ಹೊಸ ಕೌನ್ಸಿಲರ್‌ಗಳನ್ನು ತಮ್ಮ ಕೈಯೊಳಗಿಟ್ಟುಕೊಂಡು ಜೆಡಿಎಸ್ ಶಾಸಕರಿಗೂ ನಾಲ್ಕು ಕಾಸು ಹುಟ್ಟುವುದಾದರೆ ಬರಗೆಟ್ಟ ಜೆಡಿಎಸ್‌ಗೆ ಹುಲ್ಲುಕಡ್ಡಿಯ ಆಸರೆ ತಾನೆ? ಮುಂಬರುವ ಚುನಾವಣೆ ತನಕ ಬೆಂಗಳೂರಿನ ಜೆಡಿಎಸ್‌ಗೊಂದು ಗಂಜಿಕೇಂದ್ರ ಈ ಮೂಲಕ ಬರುವುದಾದರೆ ಯಾರಿಗೆ ತಾನೇ ಬೇಡ?

ಇದು ದೇವೇಗೌಡರ ದೂರದೃಷ್ಟಿಯೂ ಹೌದು ಬರಗಾಲದಲ್ಲೂ ಬದುಕುವ ನೀತಿ ಕೂಡ. ಗೋಪಾಲಯ್ಯನ ಮಡದಿಗೆ ಉಪಮೇಯರ್‌ಗಿರಿಯ ಸೌಭಾಗ್ಯ ಮತ್ತು ಅಖಂಡ ಶ್ರೀನಿವಾಸಮೂರ್ತಿ, ಜಮೀರ್ ಥರದವರಿಗೆ ಅರೆಕಾಸಿನ ಮಜ್ಜಿಗೆಯ ಆರವಂಟಿಗೆ!

ಮಂಡ್ಯ: ಪ್ರೀತಿ, ಜಾತಿ ಮತ್ತು ಪೊಲೀಸ್ ಫಜೀತಿ

ಮಂಡ್ಯದ ಹುಲಿವಾನ ಗ್ರಾಮದಲ್ಲಿ ನಡೆದ ಈ ಘಟನೆ ಸಮಾಜದಲ್ಲಿ ಮೇಲ್ಜಾತಿಗಳಿಗೆ ದಲಿತರ ಮೇಲಿರುವ ಅಸಹನೆ, ಸಮಸ್ಯೆ ನಿಭಾಯಿಸುವಲ್ಲಿ ಪೊಲೀಸರ ವೈಫಲ್ಯ ಮತ್ತು ತಮ್ಮ ವೈಫಲ್ಯಕ್ಕೆ ಖಾಕಿಗಳು ತೆಗೆದುಕೊಂಡ ಪ್ರತೀಕಾರ ಇವೆಲ್ಲವನ್ನೂ ಎಳೆಎಳೆಯಾಗಿ ಬಿಚ್ಚಿಟ್ಟಿದೆ. ಇಷ್ಟುದಿನ ರೈತರ ಸರಣಿ ಆತ್ಮಹತ್ಯೆಯ ಕಾರಣಕ್ಕೆ ಸುದ್ದಿಯಲ್ಲಿದ್ದ ಮಂಡ್ಯ ಮೊನ್ನೆ ಜಾತಿಕಲಹದ ನೆಪದಲ್ಲಿ ಚರ್ಚೆಗೆ ಬಂದಿತ್ತು. ಪ್ರಗತಿಪರ ಹೋರಾಟಕ್ಕೆ ಹೆಸರುವಾಸಿಯಾದ ಮಂಡ್ಯದ ನೆಲ ಜಾತಿ ದೌರ್ಜನ್ಯಕ್ಕೆ ಸಾಕ್ಷಿಯಾಗಿರುವುದು ದುರಂತವಾದರೂ ಇತ್ತೀಚಿನ ದಿನಗಳಲ್ಲಿ ಜಾತಿ ದೌರ್ಜನ್ಯಗಳು ಹೆಚ್ಚಾಗುತ್ತಿರುವ ಜಿಲ್ಲೆಗಳಲ್ಲೂ ಒಂದಾಗಿದೆ ಎಂಬುದು ವಾಸ್ತವ!

ಇಡೀ ವೃತ್ತಾಂತ ಸುತ್ತಿಕೊಂಡಿರುವುದು ಒಂದು ಪುಟ್ಟ ಪ್ರೇಮ್ ಕಹಾನಿಯ ಸುತ್ತ. ಇಲ್ಲಿ ಹುಡುಗ ದಲಿತನಾಗಿದ್ದು ಹುಡುಗಿ ಲಿಂಗಾಯತ ಜಾತಿಗೆ ಸೇರಿರೋದೇ ಕೆಲ ಜಾತ್ಯಸ್ಥ ಮನಸ್ಸುಗಳಿಗೆ ಸಹಿಸಿಕೊಳ್ಳಲಾರದಷ್ಟು ಘಾಟೆನಿಸಿರುವುದು. ಮಂಡ್ಯದಿಂದ 9 ಕಿ.ಮೀ. ದೂರದಲ್ಲಿರುವ ಹುಲಿವಾನ ಗ್ರಾಮದಲ್ಲಿ ಒಕ್ಕಲಿಗರ ಸಂಖ್ಯೆಯೇ ಹೆಚ್ಚು. ದಲಿತರದ್ದು 70-80 ಮನೆಗಳಿದ್ದರೆ ಇನ್ನುಳಿದಂತೆ ಲಿಂಗಾಯತರದ್ದು 15-20 ಕುಟುಂಬಗಳಿವೆ. ಆದಾಗ್ಯೂ ಈ ಊರಿನಲ್ಲಿ ಇದುವರೆಗೆ ಒಂದೇಒಂದು ಜಾತಿ ಕಲಹವೂ ನಡೆದಿರಲಿಲ್ಲ. ಆ ದಾಖಲೆಯನ್ನು ಮುರಿದುಹಾಕಿದ್ದು ಸೆಪ್ಟೆಂಬರ್ 3ರ ಕರಾಳ ರಾತ್ರಿ. ಇಷ್ಟುದಿನ ಒಟ್ಟಿಗೇ ಬದುಕಿದ್ದ ಒಕ್ಕಲಿಗರು ಮತ್ತು ದಲಿತರು ಅವತ್ತು ರಾತ್ರಿ ಪರಮವೈರಿಗಳಾಗಿ ಬದಲಾಗಿಹೋಗಿದ್ದರು.

ಇದೇ ಊರಿನ ದಲಿತರ ಹುಡುಗ 27ರ ಹರೆಯದ ಸಂತೋಷ್‌ನಿಗೂ, ಲಿಂಗಾಯತರ ಹುಡುಗಿ 18ರ ತರುಣಿ ಸುಮಾಗು ಪ್ರೇಮಾಂಕುರವಾಗಿತ್ತು. ಈ ವಿಚಾರ ಸುಮಾ ಮನೆಯವರಿಗೆ ತಿಳಿದು ಸಹಜವಾಗಿ ಜಾತಿ ಪ್ರತಿರೋಧವೂ ವ್ಯಕ್ತವಾಗಿತ್ತು. ತಮ್ಮ ಪ್ರೇಮಕ್ಕೆ ಈ ಹಾಳು ಜಾತಿ ಅಡ್ಡ ಬರುತ್ತೆ ಎಂಬುದು ಪ್ರೇಮಿಗಳಿಗೆ ಖಾತ್ರಿಯಾಗುತ್ತಿದ್ದಂತೆಯೇ ಸೆಪ್ಟೆಂಬರ್ 2ರಂದು ಒಂದಷ್ಟು ಸ್ನೇಹಿತರ ಸಮ್ಮುಖದಲ್ಲಿ ಮಂಡ್ಯದ ಉಪನೋಂದಣಾಧಿಕಾರಿಗಳ ಕಚೇರಿಯಲ್ಲಿ ರಿಜಿಸ್ಟರ್ ಮ್ಯಾರೇಜ್ ಆಗಿದ್ದರು.

ಜಾತ್ಯೋನ್ಮತ್ತ ಪೋಷಕರಿಂದ ತಮಗೆ ರಕ್ಷಣೆ ನೀಡುವಂತೆ ನವದಂಪತಿಗಳು ಮಂಡ್ಯ ಗ್ರಾಮಾಂತರ ಪೊಲೀಸ್ ಠಾಣೆಯ ಮೊರೆಹೋಗಿದ್ದರು. ಆಗ ಎರಡೂ ಮನೆಯವರು ಮತ್ತು ಜಾತಿಯ ಮುಖ್ಯಸ್ಥರನ್ನು ಕರೆಸಿದ್ದ ಪೊಲೀಸರು ರಾಜೀಸಂಧಾನ ನಡೆಸಿ, ಮುಖಂಡರಿಂದ ಮುಚ್ಚಳಿಕೆ ಬರೆಸಿಕೊಂಡು ಕಳುಹಿಸಿದ್ದರು. ಅದರ ಹೊರತಾಗಿ ಪ್ರಕರಣದ ಗಂಭೀರತೆ ಮತ್ತು ತಿರುವುಗಳನ್ನು ಪೊಲೀಸರು ಅಂದಾಜು ಮಾಡುವ ಕೆಲಸಕ್ಕೇ ಹೋಗಿರಲಿಲ್ಲ.

ಇದು ಊರಿನಲ್ಲಿ ಹೊಸ ರೂಪ ಪಡೆದುಕೊಳ್ಳಲಾರಂಭಿಸಿತು. ಸಂತೋಷ್ ಮತ್ತು ಸುಮಾ ಮದುವೆಯಾಗಲು ದಲಿತ ಜಾತಿಗೆ ಸೇರಿದ ದಿಲೀಪ್ ಎಂಬ ಯುವಕ ಮಧ್ಯಸ್ಥಿಕೆ ವಹಿಸಿದ್ದ. ಜಾತಿ ಮನಸ್ಸುಗಳ ಮುನಿಸು ನವದಂಪತಿಗಳಿಂದ ವಿಮುಖಗೊಂಡ ದಿಲೀಪ್‌ನತ್ತ ತಿರುಗಿತ್ತು. ಹಾಗಾಗಿ ಲಿಂಗಾಯತ ಜಾತಿಗೆ ಸೇರಿದ ರಾಜಪ್ಪ, ಪ್ರಸನ್ನ, ರಮೇಶ್ ಮತ್ತು ಒಕ್ಕಲಿಗ ಜನಾಂಗದ ಮಹೇಶ್, ಸುಧಾ ಸೇರಿದಂತೆ ಒಟ್ಟು 7 ಮಂದಿ ಅದೇ ದಿನ ರಾತ್ರಿ ದಿಲೀಪನ ಮನೆಗೆ ನುಗ್ಗಿ, ಬಾಯಿಗೆಬಂದಂತೆ ಬೈದದ್ದಲ್ಲದೆ ದಿಲೀಪ ಹಾಗೂ ಆತನ ತಂದೆಯ ಮೇಲೆ ಹಲ್ಲೆ ಮಾಡಿದ್ದರು. ಅಷ್ಟಕ್ಕೇ ಸುಮ್ಮನಾಗದೆ ಅವರಿಗೆ ಸೇರಿದ ಬೈಕು, ಸೈಕಲ್, ಮನೆಯ ಕಿಟಕಿಗಾಜು, ಬಾಗಿಲುಗಳನ್ನೂ ಧ್ವಂಸ ಮಾಡಿಹೋಗಿದ್ದರು. ಈ ಹಿನ್ನೆಲೆಯಲ್ಲಿ ದಿಲೀಪ್ ಕೆರಗೋಡು ಪೊಲೀಸ್ ಠಾಣೆಯಲ್ಲಿ ಎಲ್ಲರ ಮೇಲೂ ದೂರು ದಾಖಲಿಸಿದ್ದ. ಎಸ್ಸಿ/ಎಸ್ಟಿ ದೌರ್ಜನ್ಯ ತಡೆ ಕಾಯ್ದೆಯಡಿ ಎಫ್‌ಐಆರ್ ಕೂಡಾ ದಾಖಲಾಗಿತ್ತು.

ಯಾವಾಗ ದಲಿತರ ಹುಡುಗ ತಮ್ಮ ಮೇಲೆಯೇ ಪೊಲೀಸ್ ಕಂಪ್ಲೆಂಟ್ ಕೊಟ್ಟಿದ್ದಾನೆ ಎನ್ನುವ ಸುದ್ದಿ ಊರಿನ ಮೇಲ್ಜಾತಿ ಜನರಿಗೆ ಮುಟ್ಟಿತೊ ಆಗ ಅವರು ಮತ್ತಷ್ಟು ಕುಪಿತಗೊಂಡರು. ಸೆಪ್ಟೆಂಬರ್ 3ರ ರಾತ್ರಿ ದಲಿತರ ಕೇರಿಗೆ ನುಗ್ಗಿದ ಮೇಲ್ಜಾತಿಯವರು ಸಿಕ್ಕಸಿಕ್ಕವರ ಮೇಲೆ ಹಲ್ಲೆ ಮಾಡಿದ್ದರು. ಉದ್ರಿಕ್ತರ ಕೈಗೆ ಸಿಕ್ಕ ದಲಿತರ 2 ಬೈಕ್‌ಗಳು ಬೆಂಕಿಗಾಹುತಿಯಾದವು. ಪ್ರಾಣ ಉಳಿಸಿಕೊಳ್ಳುವುದಕ್ಕಾಗಿ ದಲಿತರ ಹೆಂಗಸರು-ಮಕ್ಕಳು ಕಬ್ಬಿನ ಗದ್ದೆಯಲ್ಲಿ ಅವಿತುಕೊಳ್ಳುವಂತಹ ಪರಿಸ್ಥಿತಿ ನಿರ್ಮಾಣವಾಗಿತ್ತು. ಆ ಗಲಭೆಯಲ್ಲಿ ಸುಮಾರು 20ಕ್ಕೂ ಹೆಚ್ಚು ದಲಿತರು ಗಾಯಗೊಂಡಿದ್ದರೆ 25ಕ್ಕೂ ಹೆಚ್ಚು ಮನೆಗಳು ಜಖಂಗೊಂಡಿದ್ದವು.

ಹುಲಿವಾನದಲ್ಲಿ ಭುಗಿಲೆದ್ದ ಜಾತಿಕಲಹದ ಸಂಗತಿ ಪೊಲೀಸರಿಗೆ ತಲುಪಿತ್ತು. ಆಗಲೂ ಸಹ ಪ್ರಕರಣದ ಗಂಭೀರತೆಯ ಅಂದಾಜು ಮಾಡುವಲ್ಲಿ ಪೊಲೀಸರು ವಿಫಲವಾಗಿದ್ದರು. ಒಂದಷ್ಟು ಸೂಕ್ತ ಬಂದೋಬಸ್ತ್‌ಗೆ ತಯಾರಿ ಮಾಡಿಕೊಳ್ಳದೆ ಕೆಲವೇ ಕೆಲವು ಸಿಬ್ಬಂದಿಗಳ ಜೊತೆಗೆ ಡಿವೈಎಸ್ಪಿ ಉದೇಶ್, ಮಂಡ್ಯ ಗ್ರಾಮಾಂತರ ಠಾಣೆಯ ಸಿಪಿಐ ಲೋಕೇಶ್, ಕೆರಗೋಡು ಎಸ್‌ಐ ಸತೀಶನಾಯ್ಕರು ಸ್ಥಳಕ್ಕೆ ಆಗಮಿಸಿದ್ದರು. ಗಲಭೆಯನ್ನು ನಿಯಂತ್ರಿಸುವುದಕ್ಕಿಂತ ಹೆಚ್ಚಾಗಿ ಮಾತುಕತೆಯಲ್ಲಿ ಸಮಾಧಾನ ಮಾಡುವ ಇರಾದೆ



ಮಂಡ್ಯ ತಾಲೂಕಿನ ಹುಲಿವಾನ ಗ್ರಾಮಕ್ಕೆ ಸಂಸದ ಸಿ.ಎಸ್. ಪುಟ್ಟರಾಜು, ವಿಧಾನ ಪರಿಷತ್ ಉಪ ಸಭಾಪತಿ ಮರಿತಿಬ್ಬೇಗೌಡ, ಎಂ. ಶ್ರೀನಿವಾಸ್, ಕೆ. ಎಸ್. ವಿಜಯಾನಂದ, ಜಿ.ಬಿ. ಶಿವಕುಮಾರ್ ಭೇಟಿ ನೀಡಿದ್ದರು.

ಪೊಲೀಸರಿಗೆ ಇತ್ತು ಎನಿಸುತ್ತೆ. ಆದರೆ ಮಾತುಕತೆಗೆ ಬಗ್ಗುವ ಮನಸ್ಥಿತಿಯಲ್ಲಿ ಗಲಭೆಕೋರರು ಇರಲಿಲ್ಲ.

ಪೊಲೀಸರ ಪ್ರವೇಶ ಪ್ರಸಂಗ

ರಾತ್ರಿ 8.30ರ ಸುಮಾರಿಗೆ ಹುಲಿವಾನಕ್ಕೆ ಬಂದ ಸಿಪಿಐ ಲೋಕೇಶ್, ದಲಿತರ ಕೇರಿಗೆ ಹೋಗುತ್ತಿದ್ದಂತೆಯೇ ಕುಡಿದು ಚಿತ್ತಾಗಿದ್ದ ಪುಂಡರ ಗುಂಪು ಅವರ ಮೇಲೆಯೇ ಕಲ್ಲು ತೂರಿದ್ದರು. ಸೂಕ್ತ ಸಿದ್ಧತೆ ಮಾಡಿಕೊಳ್ಳದೆ ಬಂದ ಪೊಲೀಸರೇ ಕಲ್ಲೇಟು ತಾಳದೆ ಜೀವಭಯದಿಂದ ಕಾಲ್ಕೀಳುವ ಪರಿಸ್ಥಿತಿ ಬಂದೊದಗಿತ್ತು. ಆಮೇಲೆ ಸ್ಥಳಕ್ಕೆ ಬಂದ ಡಿವೈಎಸ್ಪಿ ಉದೇಶ್‌ಗೂ ಇದೇ ಮರ್ಯಾದೆ ಎದುರಾಗಿತ್ತು. ಉದ್ರಿಕ್ತರು ಪೊಲೀಸ್ ವಾಹನಗಳಿಗೆ ಬೆಂಕಿ ಹಚ್ಚುವ ಪ್ರಯತ್ನಕ್ಕೂ ಮುಂದಾಗಿದ್ದರು. ಪ್ರತ್ಯಕ್ಷದರ್ಶಿಗಳು ಹೇಳುವ ಪ್ರಕಾರ ಉದ್ರಿಕ್ತ ಗುಂಪು ಡಿವೈಎಸ್ಪಿ ಉದೇಶ್, ಸಿಪಿಐ ಲೋಕೇಶ್, ಎಸ್‌ಐ ಸುರೇಶ್‌ನಾಯ್ಕ ಹಾಗೂ ಪೇದೆಗಳನ್ನು ಹಿಡಿದು ಎಳೆದಾಡಿ, ಬಾಯಿಗೆಬಂದಂತೆ ನಿಂದಿಸಿದ್ದರು. ಆನಂತರವೇ ಪೊಲೀಸ್ ಇಲಾಖೆಗೆ ಪ್ರಕರಣದ ಗಂಭೀರತೆ ಅರ್ಥವಾದದ್ದು. ಕೂಡಲೇ ಎಚ್ಚೆತ್ತ ಜಿಲ್ಲಾ ಎಸ್‌ಪಿ ಭೂಷಣ್ ಜಿ. ಬೊರಸೆ ಮಂಡ್ಯದ ಅಷ್ಟೂ ಠಾಣೆಯಲ್ಲಿದ್ದ ಪೊಲೀಸರನ್ನು ತುಂಬಿಕೊಂಡು ಹುಲಿವಾನ ಗ್ರಾಮದ ಮೇಲೆ 'ದಾಳಿ' ಮಾಡಿದ್ದರು.

ಎಸ್ಪಿ ಸಾಹೇಬರಿಂದ ಆದೇಶ ಹೊರಹೊಮ್ಮಿ, ಸಾಕಷ್ಟು ಸಿಬ್ಬಂದಿ ಬಲ ಲಭ್ಯವಾಗುತ್ತಿದ್ದಂತೆಯೇ ಪೊಲೀಸ್ ಪ್ರತಾಪ ಉದ್ರಿಕ್ತರ ಮೇಲೆ ಕಾರಿಕೊಂಡಿತ್ತು. ಚುರುಕು ಪಡೆದ ಪೊಲೀಸ್ ಲಾಠಿಗಳು ರಾತ್ರಿ ಸಿಕ್ಕ ದೇಹದ ಮೇಲೆಲ್ಲಾ ಲಾಲಿ ಹಾಡಲು ಶುರು ಮಾಡಿದ್ದವು. ತಮ್ಮ ಮೇಲೆ ಕಲ್ಲು ತೂರಾಡಿದ್ದ ಉದ್ರಿಕ್ತಗುಂಪು ಹೊಲ, ಗದ್ದೆ ಎನ್ನದೇ ಸಿಕ್ಕ ದಿಕ್ಕಿನತ್ತ ಕಾಲುಕೀಳಲು ಆರಂಭಿಸಿದ್ದರು. ಅಷ್ಟಕ್ಕೇ ಪೊಲೀಸ್ ಆಕ್ರೋಶ ಮುಗಿಯುವ ಹಾಗಿರಲಿಲ್ಲ. ಗಲಾಟೆ ಭುಗಿಲೆಬ್ಬಿಸಿದ್ದ ಪುಂಡರ ಗುಂಪು ಕಾಣದೆ ಚದುರಿದ ಮೇಲೆ ಸೀದಾ ಮೇಲ್ಜಾತಿಯ ಕೇರಿಗಳಿಗೆ ನುಗ್ಗಿದ ಪೊಲೀಸರು ಮನೆಯಲ್ಲಿದ್ದ ಗಂಡಸರನ್ನು ಎಳೆದು ತರಲಾರಂಭಿಸಿದ್ದರು. ಈ ಮೊದಲು ಮೇಲ್ಜಾತಿಯ ಪುಂಡರ ಗುಂಪು ದಲಿತರ ಕೇರಿಯಲ್ಲಿ ಮಾಡಿದ್ದಂತಹ ದೌರ್ಜನ್ಯವನ್ನು ಈಗ ಪೊಲೀಸರು ಮೇಲ್ಜಾತಿಗ ಕೇರಿಯಲ್ಲಿ ನಡೆಸಿ ಲೆಕ್ಕ ಚುಕ್ತಾ ಮಾಡಲು ಶುರು ಮಾಡಿದ್ದರು.

ಮನೆ ಬಾಗಿಲನ್ನು ಒಡೆದು, ಕಿಟಕಿ ಗ್ಲಾಸ್‌ಗಳನ್ನು ಪುಡಿಗೈದ ಪೊಲೀಸ್ ಪಡೆ ಮನೆಯ ಒಳಗಿದ್ದ ಗಂಡಸರನ್ನು ಹಿಡಿದು ಚೆನ್ನಾಗಿ ಥಳಿಸಿ ಬಂಧಿಸಿ ವ್ಯಾನ್‌ಗೆ ... ಕೊಂಡರು. ಗಂಡಂದಿರನ್ನು ಬಿಡಿಸಿಕೊಳ್ಳಲು ... ಹೆಂಗಸರಿಗೂ ಪೊಲೀಸರ ಲಾಠಿಗಳು ರಿಯಾ... ತೋರಲಿಲ್ಲ. ಪುರುಷ ಪೇದೆಗಳೇ ಹೆಂಗಸು, ಮ... ಎಳೆದಾಡಿದ್ದಲ್ಲದೆ ಮನಬಂದಂತೆ ಥಳಿಸಿ, ಬೆಡ್‌ರೂ... ಬಾಗಿಲನ್ನು ಕಾಲಿನಿಂದ ಒದ್ದು ಮುರಿದು ಅಲ್ಲಿದ್ದ... ಎಳೆದೊಯ್ದಿದ್ದರು. ಉದ್ರಿಕ್ತರು ದಲಿತರ ಮೇಲೆ ... ಮಾಡಿದ್ದಾರೆ ಎನ್ನುವ ಕರ್ತವ್ಯಪ್ರಜ್ಞೆಗಿಂತ 'ಪೊಲೀಸ್' ... ಮೇಲೆಯೇ ಕೈಮಾಡ್ತೀರಾ ಎನ್ನುವ ಆಕ್ರೋಶ ... ಪಡೆಗಳ ರಣೋತ್ಸಾಹದಲ್ಲಿ ಕಂಡುಬರುತ್ತಿತ್ತು.

ಗಲಭೆಗೆ ಸಂಬಂಧಿಸಿದಂತೆ ಒಟ್ಟು 58 ಮಂದಿ... ಬಂಧಿಸಲಾಗಿದ್ದು, ದಲಿತ ಕೇರಿಗೆ ನುಗ್ಗಿ ಅವರ ... ಹಲ್ಲೆ ಮಾಡಿದ್ದಕ್ಕೆ ಎಸ್ಸಿ/ಎಸ್ಟಿ ಕಾಯ್ದೆಯಡಿ ಒಂದು ಪ್ರ... ಪೊಲೀಸರ ಮೇಲೆ ಹಲ್ಲೆ ಮಾಡಿ, ಅವರ ಕರ್ತವ್ಯಕ್ಕೆ ... ಪಡಿಸಿ, ಕೊಲೆಗೆ ಯತ್ನಿಸಿದರೆಂದು ಮತ್ತೊಂದು ಪ್ರ... ಸೇರಿ ಒಟ್ಟು 3 ಪ್ರಕರಣ ದಾಖಲಾಗಿವೆ.

ಪೊಲೀಸರತ್ತಲೇ ಆಕ್ರೋಶ

ಹುಲಿವಾನದ ಘಟನೆ ಬೆಳಕಿಗೆ ಬರುತ್ತಿದ್ದಂ... ಜನಪ್ರತಿನಿಧಿಗಳು, ಸಂಘ-ಸಂಸ್ಥೆಗಳ ಮುಖಂಡರು, ... ಆಯೋಗಗಳ ಅಧ್ಯಕ್ಷರು ಊರಿಗೆ ಭೇಟಿ ನೀಡುತ್ತಿ... ಸಂಸದ ಪುಟ್ಟರಾಜು, ಶಾಸಕರಾದ ಚಲುವರಾಯಸ್ವಾ... ಉಪಸಭಾಪತಿ ಮರಿತಿಬ್ಬೇಗೌಡ, ಮಾಜಿ ... ಎಂ.ಶ್ರೀನಿವಾಸ್, ಕೇಂದ್ರ ಎಸ್ಸಿ/ಎಸ್ಟಿ ಆಯೋಗದ ... ಕಮಲಮ್ಮ, ರಾಜ್ಯ ಅನುಸೂಚಿತ ಜಾತಿ/ ಪಂಗ... ಸದನ ಸಮಿತಿ ಅಧ್ಯಕ್ಷ ಪಿ.ಎಂ.ನರೇಂದ್ರಸ್ವಾಮಿ, ಸದ... ಶಾಸಕ ತಿಮ್ಮರಾಯಪ್ಪ ಪಿ.ರಾಜೀವ್, ನರೇಂದ್ರ, ದಾಸ... ರಾಜವೆಂಕಟಪ್ಪನಾಯಕ, ರಾಜ್ಯ ಮಹಿಳಾ ಆಯೋ... ಅಧ್ಯಕ್ಷೆ ಮಂಜುಳಾ ಮಾನಸ, ದಲಿತ ಸಂಘಟ... ಮುಖಂಡರು ಹುಲಿವಾನಗೆ ಭೇಟಿ ನೀಡಿ ಶಾಂತಿ ಸ... ಮಾತುಕತೆ ನಡೆಸಿ ಹೋಗುತ್ತಿದ್ದಾರೆ.

ಹೀಗೆ ಬಂದ ಎಲ್ಲರ ಮುಂದೆ ಜಾತಿಕಲ... ಪೊಲೀಸರ ಆಕ್ರೋಶವೇ ಚರ್ಚೆಗೆ ಬರುತ್ತಿರೋದು ... ಎಲ್ಲಾ ರಾಜಕೀಯ ಪಕ್ಷಗಳ ನಾಯಕರು, ನಿಯೋ... ಸದಸ್ಯರ ಮುಂದೆ ಹೆಣ್ಣುಮಕ್ಕಳು ಪೊಲೀಸರ ದೌರ್ಜ...



ದಾಳಿಗೊಳಗಾದ ದಲಿತರ ಮನೆಗಳು


ಬಗ್ಗೆ ದೂರು ಹೇಳಿದ್ದಾರೆ. ತಪ್ಪು ಮಾಡಿದವರ ... ಕ್ರಮ ಕೈಗೊಳ್ಳಲಿ. ಅದನ್ನು ಬಿಟ್ಟು ಮನೆಯಲ್ಲಿದ್ದ... ಈ ರೀತಿ ಅಮಾನುಷವಾಗಿ ಥಳಿಸಿ ಗಾಯಗೊ... ಓಯುಸಿ ಓದುತ್ತಿರುವ ಮಕ್ಕಳನ್ನು ಎಳೆದೊಯ್ದದ್ದು ... ಸರಿ? ನಮ್ಮ ಮನೆಯ ಬೆಡ್‌ರೂಮಿನ ಬಾಗಿಲನ್ನು ... ಯುವ ಹಕ್ಕನ್ನು ಪೊಲೀಸರಿಗೆ ಕೊಟ್ಟವರ್ಯಾರು? ... ಮನೆಯ ಹೆಣ್ಣುಮಕ್ಕಳ ಮೇಲೆ ಹೀಗೆ ಕೈ ಮಾಡು... ಅವರ ಹೆಂಡತಿಯ ಮೈಯನ್ನು ಬೇರೆಯವರು ಮ... ಹೀಗೆ ಬಿಡುತ್ತಿದ್ದರಾ? ಅಂತ ತಮ್ಮ ಆಕ್ರೋ... ಹೊರಹಾಕುತ್ತಿದ್ದಾರೆ.

ಒಟ್ಟಾರೆ ಕಳೆದೊಂದು ವಾರದಿಂದ ಹು... ಗ್ರಾಮದಲ್ಲಿ ನಡೆದ ಅಹಿತಕರ ಘಟನೆಗಳ ಹಿನ್ನೆಲೆ... ಕೆದಕಿ ನೋಡಿದಾಗ ಹಿಂದೆಂದಿಗಿಂತಲೂ ಈಗ... ವೈಷಮ್ಯ ಹೆಚ್ಚುತ್ತಿರುವುದು ಕಂಡುಬರುತ್ತಿದೆ. ... ಮೀಸಲಾತಿಯಿಂದ ಎಲ್ಲವನ್ನು ಪಡೆಯುತ್ತಿದ್ದಾರೆ; ... ಹಿಂದುಳಿದವರಿಗೆ ಸರ್ಕಾರದ ಸವಲತ್ತು ಸಿಗುತ್ತಿಲ್ಲ ... ಅಸಹನೆಯೇ ಇಂದು ಜಾತಿಸಂಘರ್ಷಕ್ಕೆ ಪ್ರಮುಖ... ವಾಗಿದೆ. ಗುಜರಾತ್‌ನಲ್ಲಿ ಹಾರ್ದಿಕ್ ಪಟೇಲ್‌ನ ನೇ... ನಡೆದ ಬಲಾಢ್ಯ ಪಟೇಲ್ ಸಮುದಾಯದ ಮೀ... ಹೋರಾಟದ ಮತ್ತೊಂದು ಮಗ್ಗುಲು ಕೂಡಾ ಇಂ... ಅಸಹನೆಯೇ ಆಗಿದೆ. ಮೀಸಲಾತಿಯ ವಿಶಾಲ... ಮತ್ತು ದಲಿತರ ಹಕ್ಕುಗಳ ಕುರಿತು ಸಮಾಜಕ್ಕೆ ಸ... ವಾಗಿ ಮನವರಿಕೆ ಮಾಡಿಕೊಡುವಂತಹ ಪ್ರಗತಿಪರ ... ಗಳು ಹೆಚ್ಚೆಚ್ಚು ಘಟಿಸಬೇಕಿದೆ. ಇಲ್ಲದೇ ಹೋದಲ್ಲಿ ... ದಲ್ಲಿ ಹುಲಿವಾನಗಳ ಸಂಖ್ಯೆ ಹೆಚ್ಚುತ್ತಲೇ ಹೋ...

■ ವರದಿ...

ಮಂಡ್ಯ ಇನ್ ಡೇಂಜರ್; ಅಂಬಿ ಇನ್ ಫಾರಿನ್!

ಹುಲಿವಾನ ಗ್ರಾಮ ಕಳೆದೊಂದು ವಾರದಿಂದ ಜಾತಿಘರ್ಷಣೆಯಲ್ಲಿ ಉದ್ವಿಗ್ನಗೊಂಡಿದ್ದರೂ ಸ್ವತಃ ಇದೇ ವಿಧಾನಸಭಾ ಕ್ಷೇತ್ರದ ಎಂಎಲ್‌ಎ ಮತ್ತು ಜಿಲ್ಲಾ ಉಸ್ತುವಾರಿ ಸಚಿವನಾಗಿರುವ ಅಂಬಿ ಇತ್ತ ತಲೆ ಕೂಡಾ ಹಾಕಿಲ್ಲ. ಮೇಲ್ಜಾತಿಗಳು ದಲಿತರ ಮೇಲೆ ಕಿಡಿಕಾರಿ, ದೊಡ್ಡ ಸಂಘರ್ಷವೇ ನಡೆಯುತ್ತಿದ್ದ ವೇಳೆಯಲ್ಲಿ ಅಂಬರೀಶ್ ವಿದೇಶದಲ್ಲಿದ್ದರು! ಈವರೆಗೂ




ಅಂಬರೀಶ್ ಜಿಲ್ಲೆಗೆ ಕಾಲಿಟ್ಟಿಲ್ಲ. ಒಂದು ಕ್ಷೇತ್ರದ ಶಾಸಕನಾಗಿ, ರಾಜ್ಯದ ಸಚಿವನಾಗಿ ತನ್ನ ಜವಾಬ್ದಾರಿ ನಿರ್ವಹಿಸಬೇಕಿದ್ದ ಅಂಬರೀಶ್ ಘಟನೆ ನಡೆದು ವಾರವಾಗುತ್ತ ಬಂದರೂ ಹುಲಿವಾನಕ್ಕೆ ಬರದಿರುವುದು ಕ್ಷೇತ್ರದ ಜನರನ್ನು ಸಿಟ್ಟಿಗೇಳುವಂತೆ ಮಾಡಿದೆ. ಅಂಬರೀಶ್ ಸಿನಿಮಾದಲ್ಲಿ ಜನರ ಸೇವೆ ಮಾಡಿದಂತೆ ಕ್ಷೇತ್ರದ ಜನರ ಸೇವೆ ಮಾಡುತ್ತಾರೆಂಬ ವಿಶ್ವಾಸದಿಂದ ಈ ಬಾರಿ ಮಂಡ್ಯದ ಜನರು ಅಂಬರೀಶ್‌ರನ್ನು ಅತ್ಯಧಿಕ ಮತಗಳಿಂದ ಗೆಲ್ಲಿಸಿದ್ದರು.

ಜಾತಿ ಸಂಘರ್ಷದಲ್ಲಿ ಜನರು ಸತ್ತರೂ ಅಂಬರೀಶ್‌ಗೆ ಏನೂ ಆಗಬೇಕಿಲ್ಲ. ಜಿಲ್ಲೆಯಲ್ಲಿ 40ಕ್ಕೂ ಹೆಚ್ಚು ಮಂದಿ ರೈತರು ಸತ್ತರೂ ಅಂಬರೀಶ್ ಅವರ ಮನೆಗೆ ತೆರಳಿ ಸೌಜನ್ಯಕ್ಕೂ ಸಾಂತ್ವನ ಹೇಳಲಿಲ್ಲ. ಸಿಎಂ ಬಂದಾಗಷ್ಟೇ ಒಂದು ದಿನ ಹಾಗೆ ಬಂದು ಹೀಗೆ ಹೋದ ಅಂಬರೀಶ್‌ರಂತಹ ಉಡಾಫೆ ವ್ಯಕ್ತಿ ಜನಪ್ರತಿನಿಧಿ ಆಗಿರುವುದು ಜಿಲ್ಲೆಯ ಪಾಲಿಗೆ ದುರಂತ. ಮೈಷುಗರ್ ಸೇರಿದಂತೆ ಜಿಲ್ಲೆಯಲ್ಲಿರುವ ಸಕ್ಕರೆ ಕಾರ್ಖಾನೆಗಳು ಇನ್ನೂ ಪ್ರಾರಂಭವಾಗಿಲ್ಲ. ಇದರಿಂದ ಕಬ್ಬು ಬೆಳೆದಿರುವ ರೈತರು ಆತಂಕಗೊಂಡಿದ್ದಾರೆ. ಈಗಾಗಲೇ ಜಿಲ್ಲೆಯಲ್ಲಿ ಕಬ್ಬು ಬೆಳೆದಿರುವ ರೈತರು ಬೆಲೆ ಸಿಗದೆ ಕಂಗಾಲಾಗಿ ಆತ್ಮಹತ್ಯೆಗೆ ಶರಣಾಗಿದ್ದು ಇಡೀ ದೇಶಕ್ಕೆ ಗೊತ್ತಿದೆ. ಜಿಲ್ಲೆಯಲ್ಲಿ ಭೀಕರ ಬರ ತಾಂಡವವಾಡುತ್ತಿದ್ದರೂ ಇದುವರೆಗೂ ಅಂಬರೀಶ್ ಬರ ಪರಿಸ್ಥಿತಿ ಎದುರಿಸುವ ಬಗ್ಗೆ ಜಿಲ್ಲೆಯಲ್ಲಿ ಅಧಿಕಾರಿಗಳ ಸಭೆ ನಡೆಸಿಲ್ಲ. ಬರ ಪೀಡಿತ ತಾಲ್ಲೂಕುಗಳಿಗೆ ತೆರಳಿ ಜನರ ಜೊತೆ ನಾವಿದ್ದೇವೆ ಎಂಬ ಧೈರ್ಯವನ್ನು ತುಂಬಿಲ್ಲ. ಜನ-ಜಾನುವಾರುಗಳ ಸ್ಥಿತಿ ಏನು ಎಂಬುದೂ ಅಂಬರೀಶ್‌ಗೆ ಗೊತ್ತಿಲ್ಲ. ಮಳೆಯಾಗದ ಹಿನ್ನೆಲೆಯಲ್ಲಿ ಕನ್ನಂಬಾಡಿ ಬರಿದಾಗಿದ್ದು, ಕಾವೇರಿ ನೀರಿನ ವಿಚಾರದಲ್ಲಿ ತಮಿಳುನಾಡು ಮುಖ್ಯಮಂತ್ರಿ ಜಯಲಲಿತಾ ನೀರು ಬಿಡುವಂತೆ ಪ್ರಧಾನಿಗೆ ಪತ್ರಬರೆದಿರುವುದು ಮತ್ತೆ ಕಾವೇರಿ ವಿವಾದ ಭುಗಿಲೇಳುವ ಸಂದರ್ಭ ನಿಚ್ಚಳವಾಗಿದೆ. ಇವ್ಯಾವ ಸಮಸ್ಯೆಗಳತ್ತಲೂ ಅಂಬಿ ಪ್ರಾಮಾಣಿಕವಾಗಿ ಆಲೋಚಿಸುತ್ತಲೇ ಇಲ್ಲ. ಒಟ್ಟಿನಲ್ಲಿ ಸಿನಿ ಅಂಬಿಯ ಅಭಿಮಾನಕ್ಕೆ ಕಟ್ಟುಬಿದ್ದು ಮತಹಾಕಿದ್ದಕ್ಕೆ ಮಂಡ್ಯದ ಜನ ದೊಡ್ಡ ಬೆಲೆಯನ್ನೇ ತೆರುವಂತಾಗಿದೆ.

ಕೊಡಗು: ಬಿ.ಎಸ್.ತಮ್ಮಯ್ಯನ ಎಡವಟ್ಟುಗಳು

ಅಕಾಡೆಮಿಗಳು ರಾಜಕೀಯ ವ್ಯಕ್ತಿಗಳ ಕೈಗೆ ಹೋದರೆ ...ನಾಗುತ್ತದೆ ಎನ್ನುವುದಕ್ಕೆ ಕೊಡಗು ಜಿಲ್ಲೆಯ ಕರ್ನಾಟಕ ಕೊಡವ ಸಾಹಿತ್ಯ ಅಕಾಡೆಮಿ ಸಾಕ್ಷಿಯಾಗಿದೆ. ಈ ಅಕಾಡೆಮಿ ಆರಂಭದಿಂದಲೂ ಒಂದಲ್ಲ ಒಂದು ರೀತಿಯ ಗೊಂದಲ, ಸಮಸ್ಯೆ ಹಾಗೂ ಆಂತರಿಕ ಕ್ಷೋಭೆಯಿಂದ ಬಳಲುತ್ತಾ ಬಂದಿದ್ದು ಈಗ ಹಾಲಿ ಅಧ್ಯಕ್ಷ ಬಿ.ಎಸ್.ತಮ್ಮಯ್ಯ ವಿರುದ್ಧ ಕಚೇರಿಯ ಮಹಿಳಾ ಸಿಬ್ಬಂದಿಯೊಬ್ಬರು ಲೈಂಗಿಕ ಕಿರುಕುಳದ ಆರೋಪ ಹೊರಿಸಿ ಪೊಲೀಸ್ ಪುಕಾರು ನೀಡಿದ್ದಾರೆ.

ಬಿ.ಎಸ್.ತಮ್ಮಯ್ಯ ಅಕಾಡೆಮಿಯ ಅಧ್ಯಕ್ಷ ಸ್ಥಾನದಲ್ಲಿ ...ರಲು ಬೇಕಾದಂತಹ ಯಾವುದೇ ಚಟುವಟಿಕೆಯಲ್ಲಿ ...ರಲಿಲ್ಲ, ಸಾಹಿತ್ಯ ಕೃಷಿ ಎಂಬುದು ಗೊತ್ತೇ ಇಲ್ಲದ ವ್ಯಕ್ತಿ ...ವಾಗಿದ್ದರು. ಹೇಗೋ ಏನೋ ಹಿಂದಿನ ಅಕಾಡೆಮಿಯಲ್ಲಿ ಸದಸ್ಯರಾಗಿ ನೇಮಕಗೊಂಡಿದ್ದರು. ಏಕಾಏಕಿ ತಾನೇಕೆ ಅಧ್ಯಕ್ಷನಾಗಬಾರದು ಎಂಬ ವಿಚಾರ ತಲೆಗೆ ಹೊಕ್ಕು ಅಧ್ಯಕ್ಷ ಸ್ಥಾನಕ್ಕೆ ಪ್ರಯತ್ನಿಸಿದ್ದರು. ಸಿದ್ದರಾಮಯ್ಯ ಸರಕಾರ ಅಕಾಡೆಮಿಗಳಿಗೆ ಅತ್ಯಂತ ಯೋಗ್ಯರನ್ನು ಆಯ್ಕೆ ಮಾಡುವ ಪ್ರಕ್ರಿಯೆಯನ್ನು ಇಟ್ಟುಕೊಂಡಿತ್ತು. ಹಾಗಾಗಿ ಕೊಡಗಿಗೆ ...ಮಿತವಾಗಿರುವ ಕರ್ನಾಟಕ ಕೊಡವ ಸಾಹಿತ್ಯ ಅಕಾಡೆಮಿಗೆ ನಿವೃತ್ತ ಪ್ರಾಂಶುಪಾಲ ಮತ್ತು ಕನ್ನಡ ಮತ್ತು ಕೊಡವ ...ರಹಗಾರರಾದ ಇಟ್ಟಿರ ಕೆ. ಬಿದ್ದಪ್ಪರವರನ್ನು ಮತ್ತು ಕರ್ನಾಟಕ ಅರೆಭಾಷೆ ಅಕಾಡೆಮಿಗೆ ಸಾಹಿತಿ ಹಾಗೂ ವಕೀಲರಾದ ಕೆ.ಆರ್.ವಿದ್ಯಾಧರ ...ರನ್ನು ನೇಮಿಸಿತ್ತು ಮತ್ತು ಈ ನೇಮಕವು ಅತ್ಯಂತ ಯೋಗ್ಯವಾಗಿ ಇತ್ತು.



ಕುಸುಮ

ಆದರೆ ಕೊಡಗು ಜಿಲ್ಲೆಯ ಕಾಂಗ್ರೆಸಿಗರಿಗೆ ಮಾತ್ರ ಈ ನೇಮಕಾತಿಗಳು ...ರ್ಣವಾಗಲಿಲ್ಲ. ಹಾಗಾಗಿ ಕಾಂಗ್ರೆಸಿನ ಕಾರ್ಯಕರ್ತರುಗಳಾದ ಬಿ.ಎಸ್. ತಮ್ಮಯ್ಯರವರನ್ನು ಕರ್ನಾಟಕ ಕೊಡವ ಸಾಹಿತ್ಯ ಅಕಾಡೆಮಿಗೂ, ಕೊಲ್ಯದ ...ರೇಶ್‌ರವರನ್ನು ಕರ್ನಾಟಕ ಅರೆಭಾಷೆ ಅಕಾಡೆಮಿಗೂ ನೇಮಿಸಬೇಕೆಂದು ಪಟ್ಟು ಹಿಡಿದರು. ಲೋಕಸಭಾ ಚುನಾವಣೆ ಘೋಷಣೆಯಾಗಿದ್ದ ಹಿನ್ನೆಲೆಯಲ್ಲಿ ಕಾಂಗ್ರೆಸಿನಲ್ಲಿ ಗುರುತಿಸಿಕೊಂಡಿದ್ದ ಮತ್ತು ಪ್ರಮುಖ ಹುದ್ದೆಗಳಲ್ಲಿ ಇದ್ದ ಈ ಇಬ್ಬರು ಅಡಗೂರು ವಿಶ್ವನಾಥ್‌ರವರನ್ನು ಚುನಾವಣೆಯ ...ಸರಿನಲ್ಲಿ ಬ್ಲಾಕ್‌ಮೇಲ್ ಮಾಡಿ ಆಗಿದ್ದ ನೇಮಕಾತಿಯನ್ನು ...ಹಿಡಿಯುವಲ್ಲಿ ಯಶಸ್ವಿಯಾಗಿದ್ದರು. ಆದರೂ ಚುನಾವಣೆಯಲ್ಲಿ ವಿಶ್ವನಾಥ್ ಗೆಲ್ಲಲಿಲ್ಲ.

ನಂತರದ ಬೆಳವಣಿಗೆಯಲ್ಲಿ ಬೆಂಗಳೂರು ವಿಧಾನಸೌಧದ ... ಕೊಡಗು ಜಿಲ್ಲೆಯ ಎಲ್ಲಾ ಕೆಲಸಕಾರ್ಯಗಳನ್ನು ಮಾಡಲು ಕಾಂಗ್ರೆಸಿನಿಂದ ಅಧಿಕೃತವಾಗಿ ಹಕ್ಕು ಪತ್ರ (ಜಿ.ಪಿ.ಎ.) ಪಡೆದಿರುವ ಮಾಜಿ ಶಾಸಕ ಎಚ್.ಡಿ. ಬಸವರಾಜುರವರನ್ನು ...ಶಕೆ ಮಾಡಿಕೊಂಡು, ವಿಶ್ವನಾಥ್‌ರವರ ಕೃಪಾಕಟಾಕ್ಷದಿಂದ ಈ ಇಬ್ಬರು ಅರ್ಹತೆ ಇಲ್ಲದಿದ್ದರೂ ಅಧ್ಯಕ್ಷರಾಗಿ ನೇಮಕಗೊಂಡರು. ಅರೆಭಾಷೆ ಅಕಾಡೆಮಿ ಏನೂ ಮಾಡದೇ ಇರುವುದರಿಂದ ಸುದ್ದಿಯಲ್ಲಿಯೇ ಇಲ್ಲ, ಈಗ ಲಾಂಛನ ...ದಲು ಮಾಡುವ ವಿಚಾರದಲ್ಲಿ ಅರೆಭಾಷೆ ಅಕಾಡೆಮಿಯ ಸದಸ್ಯರು ಮತ್ತು ಆಸಕ್ತಿ ಇರುವ ಅರೆಭಾಷಿಕರು ...ಡುವುದನ್ನು ಬಿಟ್ಟು, ಈ ಅಕಾಡೆಮಿಯಲ್ಲಿ ಘನಂದಾರಿ ಕೆಲಸಗಳು ಏನೂ ಆಗುತ್ತಿಲ್ಲ.


ಕರ್ನಾಟಕ ಕೊಡವ ಸಾಹಿತ್ಯ ಅಕಾಡೆಮಿಯ ಅಧ್ಯಕ್ಷ ತಮ್ಮಯ್ಯ ಹಾಗೂ ಹಿಂದೆ ರಿಜಿಸ್ಟ್ರಾರ್ ಆಗಿದ್ದು ಈಗ ...ಮೊಗ್ಗಕ್ಕೆ ವರ್ಗವಾಗಿರುವ ಮಂಗಳ ನಾಯಕ್‌ರವರ ನಡುವೆ ಜಟಾಪಟಿ ನಡೆದದ್ದು ಮಾತ್ರ ಅಕಾಡೆಮಿಯ ಸಾಧನೆಯಾಗಿತ್ತು. ಅಕಾಡೆಮಿಯೆಂದರೆ ತನ್ನ ಪಿತ್ರಾರ್ಜಿತ ಆಸ್ತಿ ಎನ್ನುವಂತೆ ಅಧ್ಯಕ್ಷರು ಅದನ್ನು ನಡೆಸಿಕೊಂಡು ಬರುತ್ತಿದ್ದುದನ್ನು ಮಂಗಳ ನಾಯಕ್ ವಿರೋಧಿಸಿದ್ದರಿಂದ ಅವರ ಮೇಲೆ ಸಾಕಷ್ಟು ಆರೋಪಗಳನ್ನು ಮಾಡಲು ಪ್ರಯತ್ನಿಸಿದ್ದರು. ಆದರೆ ಅದು ಸಫಲವಾಗಿರಲಿಲ್ಲ, ಬದಲಿಗೆ ನಿಯಮಬಾಹಿರವಾಗಿ ಅಧ್ಯಕ್ಷರು ಚಟುವಟಿಕೆಗಳನ್ನು ನಡೆಸಿದ್ದಾರೆ ಮತ್ತು ಹಣವನ್ನು ಸಂಗ್ರಹ ಮಾಡಿ, ಲೆಕ್ಕಪತ್ರವನ್ನು ನೀಡಿಲ್ಲ, ಹಣ ಸಂಗ್ರಹಕ್ಕೆ ನಿರ್ಣಯವೂ ಆಗಿಲ್ಲ ಎಂದು ಮಂಗಳ ನಾಯಕ್ ಪೊಲೀಸ್ ಪುಕಾರು ನೀಡಿದ್ದರು. ಆಗ ಅವರನ್ನು ವರ್ಗಾಯಿಸುವ ಬೆದರಿಕೆಯನ್ನು ಹಾಕಿದ್ದರು.

ಮಂಗಳ ನಾಯಕ್ ತಮ್ಮ ಹಿರಿಯ ಅಧಿಕಾರಿಗಳಿಗೆ ಬರೆದ ಅಧಿಕೃತ ಪತ್ರದಲ್ಲಿ ಅಧ್ಯಕ್ಷ ಬಿ.ಎಸ್.ತಮ್ಮಯ್ಯನವರು ಸಿಬ್ಬಂದಿಗಳೊಂದಿಗೆ ವರ್ತಿಸುವುದು ಭಯ ಮೂಡಿಸುವಂತಿದೆ ಮತ್ತು ಕಚೇರಿಯ ಕಡತ ಹಾಗೂ ಇನ್ನಿತರ ವಸ್ತುಗಳನ್ನು ಕಾಪಾಡುವುದು ಕಷ್ಟವಾಗುತ್ತದೆ ಎಂದು 10-12-2014ರಲ್ಲಿಯೇ ಪತ್ರ ಬರೆದಿದ್ದರು.

ಆಗಿನ ಘಟನೆಗಳು 'ಲಂಕೇಶ್'ನಲ್ಲಿ ಪ್ರಕಟವಾಗುತ್ತಿದ್ದಂತೆ ಅಕಾಡೆಮಿಯ ಮಾನದ ಜೊತೆಯಲ್ಲಿ ಸರಕಾರದ ಮಾನವು ಹರಾಜು ಆಗುತ್ತಿದೆ ಎಂಬುದು ಮನವರಿಕೆ ಆಗಿ, ಸರಕಾರ ಮತ್ತು ಕಾಂಗ್ರೆಸ್ ಪಕ್ಷ ಮಧ್ಯ ಪ್ರವೇಶಿಸಿತ್ತು. ಅಧ್ಯಕ್ಷರ ಮತ್ತು ಸದಸ್ಯರ ನಡುವೆ ಹಾಗೂ ಅಧ್ಯಕ್ಷರು ಮತ್ತು ರಿಜಿಸ್ಟ್ರಾರ್ ನಡುವೆ ಉಂಟಾಗಿದ್ದಂತಹ ಕಂದಕದಿಂದ ಸಭೆಗಳು ನಡೆಯದೆ, ಕಾರ್ಯಕ್ರಮಗಳೂ ನಡೆಯದೆ ಒಂದು ರೀತಿಯ ನಿರ್ಜೀವ ಸಂಸ್ಥೆ ಆಗಿತ್ತು. ಹಾಗಾಗಿ ಸದಸ್ಯರ ಮತ್ತು ಅಧ್ಯಕ್ಷರ ನಡುವಿನ ಭಿನ್ನಾಭಿಪ್ರಾಯಗಳನ್ನು ಹೋಗಲಾಡಿಸಲು ರಾಜ್ಯ ಮಟ್ಟದಿಂದ ನಿರ್ದೇಶನವೂ ಬಂದಿತ್ತು. ಸೂಕ್ಷ್ಮತೆಯ ಕೊರತೆ ಇರುವ ಕೊಡಗು ಉಸ್ತುವಾರಿ ಸಚಿವ ಕೆ.ಜೆ.ಜಾರ್ಜ್‌ರವರು ತಾನು ಕೊಡಗಿಗೆ ಬರುವುದರೊಳಗೆ ಈ ಸಮಸ್ಯೆಯನ್ನು ಬಗೆಹರಿಸಬೇಕು ಎಂದು ತಿಳಿಸಿದ್ದ ಕಾರಣ, ಕಾಂಗ್ರೆಸಿನ ಪಾಪದ ಕೂಸಾಗಿರುವ ಈ ಅಕಾಡೆಮಿಯ ಅಧ್ಯಕ್ಷರನ್ನು ಹಿರಿಯ ಕಾಂಗ್ರೆಸಿಗರೆಲ್ಲಾ ತರಾಟೆಗೆ ತೆಗೆದುಕೊಂಡು, ಆಕಾಶದಲ್ಲಿ ಹಾರುತ್ತಿದ್ದ ಅಧ್ಯಕ್ಷರನ್ನು ಪಾತಾಳಕ್ಕೆ ಇಳಿಸಿದ್ದರು. ಆ ನಂತರ ಅಕಾಡೆಮಿಯಲ್ಲಿ ಇರುವ ಕಾಂಗ್ರೆಸ್ ಸದಸ್ಯರೆಲ್ಲರನ್ನೂ ಕರೆಸಿ, ಬಹಿರಂಗವಾಗಿ ಕಚ್ಚಾಡಬಾರದೆಂದು; ಭಿನ್ನಾಭಿಪ್ರಾಯಗಳನ್ನು ಬಗೆಹರಿಸಿಕೊಳ್ಳಬೇಕೆಂದು ಸೂಚಿಸಿದ ನಂತರವಷ್ಟೇ ಅಕಾಡೆಮಿಯ ಕಾರ್ಯಗಳು ಆರಂಭವಾಗಿದ್ದವು.

ಈ ನಡುವೆ ಅಕಾಡೆಮಿಗೆ ನೇಮಿಸಿರುವ ಅಧ್ಯಕ್ಷರು ಚೆಕ್ ಬೌನ್ಸ್ ಪ್ರಕರಣದಲ್ಲಿ ಶಿಕ್ಷೆಗೆ ಗುರಿಯಾಗಿದ್ದರು. ಹಾಗಾಗಿ ಅವರನ್ನು ಅಕಾಡೆಮಿ ಅಧ್ಯಕ್ಷ ಸ್ಥಾನದಿಂದ ಕಿತ್ತು ಹಾಕಬೇಕೆಂದು ಕೆಲವರು ರಾಜ್ಯ ಉಚ್ಚ ನ್ಯಾಯಾಲಯದಲ್ಲಿ ರಿಟ್ ಅರ್ಜಿಯನ್ನು ಸಲ್ಲಿಸಿದ್ದಾರೆ. ಸರಕಾರಕ್ಕೆ ಈ ಬಗ್ಗೆ ಮನವಿ ಮಾಡಿಕೊಳ್ಳಲಾಗಿತ್ತು. ಅವರು ಸ್ಪಂದಿಸದ ಕಾರಣ ರಿಟ್ ಅರ್ಜಿಯನ್ನು ಸಲ್ಲಿಸಲಾಗಿದೆ ಎಂದು ಅವರು ಅರ್ಜಿಯಲ್ಲಿ ತಿಳಿಸಿದ್ದಲ್ಲದೆ, ಅಧ್ಯಕ್ಷರಿಗೆ ಅಧ್ಯಕ್ಷ ಸ್ಥಾನಕ್ಕೆ ಬೇಕಾದಂತಹ ಶೈಕ್ಷಣಿಕ ಹಿನ್ನೆಲೆಯೂ ಇಲ್ಲ, ಸಾಹಿತಿಯೂ ಅಲ್ಲ, ಸಾಹಿತ್ಯದ ಗಂಧಗಾಳಿಯೂ ಇಲ್ಲ ಎಂದು ತಿಳಿಸಿದ್ದಾರೆ.

ಕೊಡಗಿನ ಕಾಂಗ್ರೆಸ್ ಪಕ್ಷಕ್ಕಂತೂ, ಕರ್ನಾಟಕ ಕೊಡವ ಸಾಹಿತ್ಯ ಅಕಾಡೆಮಿಯು ಒಂದು ತಲೆನೋವಾಗಿ ಕಾಡುತ್ತಿದೆ. ಅರೆಭಾಷೆ ಅಕಾಡೆಮಿಯ ಅಧ್ಯಕ್ಷರು ಈಗಲೂ ನಾಪೋಕ್ಲು ಬ್ಲಾಕ್ ಕಾಂಗ್ರೆಸಿನ ಅಧ್ಯಕ್ಷರಾಗಿ ಮುಂದುವರೆದಿದ್ದಾರೆ. ಆದರೆ ಕೊಡವ ಅಕಾಡೆಮಿ ಅಧ್ಯಕ್ಷರಾದ ನಂತರ ಕಾಂಗ್ರೆಸಿನ ಅಧಿಕೃತ ವಕ್ತಾರ ಆಗಿದ್ದ ತಮ್ಮಯ್ಯ ತಾನು ಸರಕಾರದ ಒಂದು ಭಾಗ ಎಂದು ಹೇಳಿಕೊಂಡು, ಕಾಂಗ್ರೆಸ್ ಚಟುವಟಿಕೆಯಲ್ಲಿ ಪಾಲ್ಗೊಳ್ಳುತ್ತಿಲ್ಲ. ಇದು ಸಾಮಾನ್ಯ ಕಾರ್ಯಕರ್ತರಿಗೆ ನೆಮ್ಮದಿಯನ್ನು ತಂದಿದ್ದರೆ, ಕೆಲವು ಹಿರಿಯ ನಾಯಕರು ಅವರ ಈ ವರ್ತನೆಯನ್ನು ಆಕ್ಷೇಪಿಸುತ್ತಿದ್ದಾರೆ.



ಬಿ.ಎಸ್.ತಮ್ಮಯ್ಯ

ಹೀಗೆ ಕಾಂಗ್ರೆಸ್ ಮಧ್ಯ ಪ್ರವೇಶಿಸಿದ ನಂತರ ಅಕಾಡೆಮಿ ಚಟುವಟಿಕೆಗಳನ್ನು ಮಾಡಲು ಆರಂಭಿಸುತ್ತಿದ್ದಂತೆ ಅಕಾಡೆಮಿಯಲ್ಲಿ ಕಳೆದ 18 ವರ್ಷಗಳಿಂದ ದಿನಗೂಲಿ ಸಿಬ್ಬಂದಿಯಾಗಿ ಕಾರ್ಯ ನಿರ್ವಹಿಸುತ್ತಿರುವ ಕುಸುಮ ಎಂಬ ಮಹಿಳೆ ಅಧ್ಯಕ್ಷರ ವಿರುದ್ಧ ಲೈಂಗಿಕ ಕಿರುಕುಳದ ಪುಕಾರು ನೀಡಿದ್ದಾರೆ. ಆಕೆ ನೇರವಾಗಿ ಪೊಲೀಸ್ ವರಿಷ್ಠಾಧಿಕಾರಿಯವರನ್ನು ಭೇಟಿಯಾಗಿ, ಅವರಿಗೆ ವಿಚಾರವನ್ನು ತಿಳಿಸಿ, ಅವರ ನಿರ್ದೇಶನದ ಮೇಲೆ ಮಡಿಕೇರಿ ನಗರಠಾಣೆಯಲ್ಲಿ ಪುಕಾರು ನೀಡಿದ್ದಾರೆ. ಈ ಹಿಂದೆ ಮತ್ತೋರ್ವ ಮಹಿಳಾ ಸಿಬ್ಬಂದಿ ಕೂಡ ಪೊಲೀಸ್ ಪುಕಾರು ನೀಡಿದ್ದರು. ಆಗ ಅಧ್ಯಕ್ಷರು ರಾಜಕೀಯ ಪ್ರಭಾವ ಬೀರಿ ಎಫ್.ಐ.ಆರ್. ಆಗದಂತೆ ನೋಡಿಕೊಂಡಿದ್ದರು. ಆಗ ಪುಕಾರಿಗೆ ಕೇವಲ ಸ್ವೀಕೃತಿ ಪತ್ರವನ್ನು ನೀಡಲಾಗಿತ್ತು. ಹಾಗಾಗಿ ತನ್ನ ಪ್ರಕರಣದಲ್ಲಿಯೂ ಅದು ಮರುಕಳಿಸಬಾರದು ಎಂದು ಪೊಲೀಸ್ ವರಿಷ್ಠಾಧಿಕಾರಿಗಳ ಗಮನಕ್ಕೆ ತಂದು ಪುಕಾರು ನೀಡಿದ್ದೇನೆ ಎಂದು ಕುಸುಮ ಹೇಳುತ್ತಾರೆ.

ಗೆಸ್ಟ್‌ಹೌಸ್‌ಗೆ ಕರೆಯುತ್ತಿದ್ದರು

ಎಲ್ಲಾ ಅಕಾಡೆಮಿಗಳಲ್ಲಿ ಇರುವ ದಿನಗೂಲಿ ಸಿಬ್ಬಂದಿಗಳನ್ನು ಕಾಯಮಾತಿ ಮಾಡಬೇಕೆಂದು 2012ರಲ್ಲಿ ಸರಕಾರದ ಮುಂದೆ ಅರ್ಜಿ ಮಂಡಿಸಲಾಗಿತ್ತು. ಆದರೆ 1984ರ ನಂತರ ದಿನಗೂಲಿಗೆ ಸೇರ್ಪಡೆಗೊಂಡವರನ್ನು ಕಾಯಂಗೊಳಿಸಲು ಸಾಧ್ಯವಿಲ್ಲವೆಂದು ಸರ್ವೋಚ್ಚ ನ್ಯಾಯಾಲಯದ ಆದೇಶ ಇರುವ ಹಿನ್ನೆಲೆಯಲ್ಲಿ ಕಾಯಮಾತಿ ಆಗಿರಲಿಲ್ಲ. ಈ ಹಿನ್ನೆಲೆಯಲ್ಲಿ ಎಲ್ಲಾ ಅಕಾಡೆಮಿಯ ರಿಜಿಸ್ಟ್ರಾರ್‌ಗಳು ಮತ್ತು ಜಂಟಿ ನಿರ್ದೇಶಕರಾದ ಮಲ್ಲಿಕಾರ್ಜುನ್‌ರವರು ಐದು ಅಕಾಡೆಮಿಗಳಿಗೆ ಪತ್ರ ಬರೆದು, ಸಂಬಳವನ್ನು ಏರಿಸಲು ತಿಳಿಸಿದ್ದರು. ಆದರೆ ಈ ಏರಿಕೆಗೆ ಅಕಾಡೆಮಿಯ ಸರ್ವ ಸದಸ್ಯರ ಒಪ್ಪಿಗೆಯನ್ನು ಪಡೆಯಬೇಕೆಂದು ತಿಳಿಸಲಾಗಿತ್ತು. 2012ರಿಂದ 2014ರವರೆಗೆ ಅಕಾಡೆಮಿ ಸದಸ್ಯ ಮಂಡಳಿ ಇಲ್ಲದ ಕಾರಣ ಅನುಷ್ಠಾನಕ್ಕೆ ಬಂದಿರಲಿಲ್ಲ, ಸೆಪ್ಟೆಂಬರ್ 2014ರಲ್ಲಿ ನೂತನ ಮಂಡಳಿಯ ಸರ್ವ ಸದಸ್ಯರ ಸಭೆಯಲ್ಲಿ ಸಂಬಳ ಏರಿಕೆಯ ವಿಚಾರವನ್ನು ಮಂಡಿಸಲಾಗಿತ್ತು. ಆಗ ಆ ಸಭೆಗೆ ಜಂಟಿ ನಿರ್ದೇಶಕರಾಗಿ ಪ್ರಜ್ಞಾ ಎಂಬವರು ಬಂದಿದ್ದರು. ಅವರು ಸರ್ವ ಸದಸ್ಯರು ತೀರ್ಮಾನ ತೆಗೆದುಕೊಂಡು ಸಂಬಳವನ್ನು ಏರಿಸಬಹುದೆಂದು ತಿಳಿಸಿದ್ದ ಕಾರಣ, ಅಧ್ಯಕ್ಷ ಬಿ.ಎಸ್. ತಮ್ಮಯ್ಯರವರೂ ಸೇರಿ ಸರ್ವಸದಸ್ಯರು ಒಪ್ಪಿದ ನಂತರವಷ್ಟೇ 2012ರಿಂದ ಜಾರಿಯಾಗುವಂತೆ ಸಂಬಳ ಏರಿಕೆಯನ್ನು ಮಾಡಲಾಗಿತ್ತು.

ಸಂಬಳ ಏರಿಕೆಯಾದ ನಂತರ ಅಧ್ಯಕ್ಷರು ನಿನ್ನ ಸಂಬಳ ಏರಿಕೆಗೆ ನಾನೇ ಕಾರಣಕರ್ತ. ಹಾಗಾಗಿ ನಾನು ಹೇಳಿದಲ್ಲಿಗೆ ನೀನು ಬರಬೇಕು ಎಂದು ಹೇಳಲು ತೊಡಗಿದರು ಎಂಬುದು ಕುಸುಮರವರ ಆರೋಪ. ಒಮ್ಮೆ ಕಚೇರಿಯ ಕಡತಗಳನ್ನು ಸಂಜೆ 5-30ರ ವೇಳೆಗೆ ಸುದರ್ಶನ್ ಗೆಸ್ಟ್‌ಹೌಸ್‌ಗೆ ತೆಗೆದುಕೊಂಡು ಬರಲು ಸೂಚಿಸಿದರು. ಆಗ ಮಂಗಳ ನಾಯಕ್ ರಿಜಿಸ್ಟ್ರಾರ್ ಆಗಿ ಕಾರ್ಯ ನಿರ್ವಹಿಸುತ್ತಿದ್ದರು. ಆಗ ವಿಚಾರವನ್ನು ಅವರ ಗಮನಕ್ಕೆ ತಂದಾಗ ಯಾವುದೇ ಕಾರಣಕ್ಕೂ ಕಚೇರಿಯ ಕಡತಗಳನ್ನು ಕಚೇರಿಯಿಂದ ಹೊರಗೆ ತೆಗೆದುಕೊಂಡು ಹೋಗಬಾರದೆಂದು ತಿಳಿಸಿದರು ಮತ್ತು ಸಂಜೆಯ ವೇಳೆಗೆ ಒಂಟಿ ಮಹಿಳೆ ಹೋಗಬಾರದೆಂದು ಕೂಡ ತಿಳಿಸಿದ್ದರು. ಇದು ಅಧ್ಯಕ್ಷರ ಗಮನಕ್ಕೆ ಬಂದಿತ್ತು, ಹಾಗಾಗಿ ನಂತರದ ದಿನಗಳಲ್ಲಿ ನಿರಂತರವಾಗಿ ಕಿರುಕುಳವನ್ನು ನೀಡಲು ಆರಂಭಿಸಿದರು. ತನ್ನನ್ನು ಜೀತದ ಆಳು ಎನ್ನುವ ರೀತಿಯಲ್ಲಿ ನಡೆಸಿಕೊಳ್ಳಲು ಆರಂಭಿಸಿದರು. ಕಾರ್ಯಕ್ರಮಗಳಲ್ಲಿ ತನ್ನನ್ನು ಅವಮಾನಿಸುವುದು ಸೇರಿದಂತೆ ಹಲವಾರು ರೀತಿಯಲ್ಲಿ ತಾನು ಅವರ ಇಚ್ಛೆಗೆ ತಕ್ಕಂತೆ ನಡೆದುಕೊಳ್ಳಲಿಲ್ಲ ಎನ್ನುವ ಕಾರಣಕ್ಕೆ ಕಿರುಕುಳ ನೀಡಲು ಆರಂಭಿಸಿದ್ದರು.

ಈ ಬಗ್ಗೆ ತಾನು ಮಹಿಳಾ ಆಯೋಗವೂ ಸೇರಿದಂತೆ ಅಕಾಡೆಮಿಯ ರಿಜಿಸ್ಟ್ರಾರ್‌ರವರ ಗಮನಕ್ಕೂ ತಂದಿದ್ದೆ, ರಿಜಿಸ್ಟ್ರಾರ್‌ರವರು ಕೂಡ ಸಂಬಂಧಪಟ್ಟವರಿಗೆ ಲಿಖಿತವಾಗಿಯೇ ಪುಕಾರು ನೀಡಿದ್ದರು. ಆದರೆ ಯಾವುದೇ ಕ್ರಮ ಇವರುಗಳ ರಾಜಕೀಯ ಪ್ರಭಾವದಿಂದ ಆಗಲಿಲ್ಲ ಎನ್ನುತ್ತಾರೆ ಕುಸುಮ.

ಹೆಚ್ಚು ಹಣ ಪಡೆದಿದ್ದಾರೆ

ಅಧ್ಯಕ್ಷ ಬಿ.ಎಸ್.ತಮ್ಮಯ್ಯ ಈ ಬಗ್ಗೆ ಸ್ಪಷ್ಟೀಕರಣವನ್ನು ನೀಡಿ, ಅಕಾಡೆಮಿಯ ಸಿಬ್ಬಂದಿ ಕುಸುಮರವರು ಸುಮಾರು 1,10,000 ರೂಪಾಯಿಯನ್ನು ಹೆಚ್ಚುವರಿಯಾಗಿ ಪಡೆದಿದ್ದರು. ಅದನ್ನು ಹಿಂದಕ್ಕೆ ಪಾವತಿಸುವಂತೆ ಸೂಚಿಸಿದ್ದರಿಂದ ತನ್ನ ಮೇಲೆ ಇಂತಹ ಆರೋಪ ಮಾಡುತ್ತಿದ್ದಾರೆ ಎಂದು ಹೇಳುತ್ತಿದ್ದಾರೆ. ಆದರೆ ಆರಂಭದಿಂದಲೂ ವಿವಾದಗಳು ನಿಮ್ಮ ಸುತ್ತ ಸುತ್ತುತ್ತಿದೆಯಲ್ಲವೇ ಎಂದ ಪ್ರಶ್ನಿಸಿದರೆ ಅಕಾಡೆಮಿ ಕೆಲಸ ಮಾಡಬಾರದೆಂದು ಷಡ್ಯಂತ್ರ ಮಾಡಲಾಗುತ್ತಿದೆ ಎಂದು ಅವರು ಹೇಳುತ್ತಿದ್ದಾರೆ. ದಾಖಲೆಗಳನ್ನು ಪರಿಶೀಲಿಸಿದಾಗ ಕುಸುಮಾರವರಿಗೆ ಪಾವತಿಸಿದ ಮೊತ್ತ ನಿಯಮಬದ್ಧವಾಗಿ ಪಾವತಿಸಲಾಗಿದೆ ಎಂದು ಕಂಡುಬರುತ್ತದೆ.

ತಮ್ಮಯ್ಯ ಮಾಡಿರುವ ಘನಂದಾರಿ ಕೆಲಸಗಳು ಮಾತ್ರ ಇಂತಹ ಎಡವಟ್ಟುಗಳೇ ಆಗಿವೆ. ಅಡಗೂರು ವಿಶ್ವನಾಥ್ ಹಾಗೂ ಹೆಚ್.ಡಿ.ಬಸವರಾಜು ತಮ್ಮ ವೈಯಕ್ತಿಕ ಸ್ವಾರ್ಥಕ್ಕಾಗಿ ಹುಟ್ಟು ಹಾಕಿದ ಪಾಪದ ಕೂಸು, ಈಗ ಅವರ ಹೆಗಲೇರಿ ತಲೆಯ ಮೇಲೆ ಹೇಸಿಗೆ ಮಾಡುತ್ತಿದೆ. ಅದನ್ನು ಸಹಿಸಿಕೊಳ್ಳಬೇಕಾದ ಅನಿವಾರ್ಯತೆ ಅವರಿಗೆ ಬಂದಿದೆ. ಯಾವಾಗಲೂ ನನ್ನನ್ನು ಏನು ಮಾಡಲು ಸಾಧ್ಯವಿಲ್ಲ, ಸರಕಾರದ ರಿಮೋಟ್ ಕಂಟ್ರೋಲ್ ನನ್ನ ಬಳಿ ಇದೆ ಎನ್ನುವ ತಮ್ಮಯ್ಯನ ಮಾತು ನಿಜವೇ ಎಂದು ಕಾದು ನೋಡಬೇಕಾಗಿದೆ. ಮಹಿಳೆಯ ಮೇಲೆ ದೌರ್ಜನ್ಯ ಎಸಗುವವರನ್ನು ಸಂರಕ್ಷಿಸುತ್ತಾರೋ ಅಥವ ಶಿಕ್ಷಿಸುತ್ತಾರೋ 'ವಿಶ್ವನಾಥ್'ನಿಗೆ ಗೊತ್ತು.

■ ಬಿ.ಎನ್. ಮನುಶೆಣೈ

ಅತ್ಯಾಚಾರ ಆರೋಪಕ್ಕೊಳಗಾದ ಕಾವಿಧಾರಿಗಳ ರಕ್ಷಣೆಗೆ ಸ್ತ್ರೀಪಡೆ!

ಧರ್ಮ ಹಾಗೂ ಧರ್ಮಗುರುಗಳ ನಾಶಕ್ಕೆ ಮುಂದಾಗಿ...ವ ಶಕ್ತಿಗಳನ್ನು ಮಟ್ಟಹಾಕುವ ಉದ್ದೇಶ ತನ್ನದೆಂದು ...ಳಿಕೊಳ್ಳುವ ಸಂಘಟನೆಯೊಂದು ಇತ್ತೀಚೆಗೆ ಅಸ್ತಿತ್ವಕ್ಕೆ ಬಂದಿರುವುದಾಗಿ ವರದಿಯಾಗಿದೆ (ವಿಜಯ ಕರ್ನಾಟಕ, ...9.2015). "ನಾರಿ ಸುರಕ್ಷಾ ವೇದಿಕೆ" ಎಂಬ ಹೆಸರಿನ ಸಂಘಟನೆ ಇದೇ ಸೆಪ್ಟೆಂಬರ್ 4ರಂದು ಬೆಂಗಳೂರಿನಲ್ಲಿ ...ಸ್ಥ ಸಮಾಜಕ್ಕಾಗಿ ಮಹಿಳಾ ಜಾಗೃತಿ" ಸಮಾವೇಶವನ್ನು ...ಕೊಂಡಿತ್ತು, ಅಂದಿನ ಕಾರ್ಯಕ್ರಮದಲ್ಲಿ ಮಾತನಾಡಿದ ... ಮಹಿಳೆಯರು ಅತ್ಯಾಚಾರಕ್ಕೊಳಗಾದ ಸೋದರಿಯರ ...ಗಳನ್ನು ಎತ್ತಿಹಿಡಿಯುವ ಬದಲು ಅವರನ್ನು ...ಸಿರುವ ವಿಲಕ್ಷಣ ಘಟನೆ ನಡೆದಿದೆ!

ಸದರಿ ಸಮಾವೇಶದಲ್ಲಿ ಭಾಗವಹಿಸಿದ್ದ ರಾಜ್ಯ ಮಹಿಳಾ ಆಯೋಗದ ಮಾಜಿ ಅಧ್ಯಕ್ಷೆ ಪ್ರಮೀಳಾ ನೇಸರ್ಗಿ ಮತ್ತು ಆಯೋಗದ ಹಾಲಿ ಸದಸ್ಯೆ ಸುಮನ್ ಹೆಗಡೆ ಇಬ್ಬರೂ ...ಷ್ಟವಾಗಿ ರಾಘವೇಶ್ವರ ಸ್ವಾಮಿ ಆರೋಪಿಯಾಗಿರುವ ...ದು ಅತ್ಯಾಚಾರ ಪ್ರಕರಣಗಳಲ್ಲಿನ ಸಂತ್ರಸ್ತ ಮಹಿಳೆಯರ ... ತೀರ ಕೀಳಾಗಿ ಮಾತನಾಡಿದ್ದಾರೆ. ಸುಮನ್ ...ಹೇಳುವ ಪ್ರಕಾರ ಪ್ರಚಾರಕ್ಕೋಸ್ಕರ, ಪ್ರತಿಷ್ಠಿತರ ...ಕ್ಕೆ ಧಕ್ಕೆ ತರುವ ಉದ್ದೇಶದಿಂದ ಕೇಸ್ ...ಸಲಾಗುತ್ತಿದೆಯಂತೆ. ಮುಂದುವರಿದು ಆಕೆ "ಪುರುಷ ಮತ್ತು ಮಹಿಳೆಯ ಸಮ್ಮತಿಯಿಂದ ಮಾತ್ರ ಲೈಂಗಿಕ ಸಂಪರ್ಕ ನಡೆಯಲು ಸಾಧ್ಯ. ಇದನ್ನು ಬಲಾತ್ಕಾರ ಎನ್ನಲಾಗುವುದಿಲ್ಲ, ನಿರಂತರವಾಗಿ ಅತ್ಯಾಚಾರ ಎಸಗಲು ಸಾಧ್ಯವೇ ಇಲ್ಲ" ಎಂದು ತೀರ್ಮಾನಿಸಿದ್ದಾರೆ! ನೇಸರ್ಗಿಯವರಂತೂ ವಿವೇಚನೆ ಇಲ್ಲದವರಂತೆ ನಾಲಿಗೆ ಹರಿಯ ಬಿಟ್ಟಿದ್ದಾರೆ. "ಧರ್ಮ ಹಾಗೂ ಧರ್ಮಗುರುಗಳನ್ನು ನಾಶ ಮಾಡಲು ಶೂರ್ಪನಖಿಯರು ಜನ್ಮತಾಳಿದ್ದು ಇವರಿಂದ ಸ್ವಾಮೀಜಿಯನ್ನು ರಕ್ಷಿಸಲು ಮಹಿಳೆಯರು ಸೇನೆಯೊಂದನ್ನು ಕಟ್ಟಬೇಕಿದೆ......" ಎಂದ ಆಕೆ, ಕಾವಿ ಮೇಲೆ ಸುಳ್ಳು ಮೊಕದ್ದಮೆ ದಾಖಲಿಸುವ ಸಂಘಟನೆಗಳನ್ನು ಬೇರುಸಮೇತ ಕಿತ್ತೊಗೆಯಲು ಕರೆಕೊಟ್ಟಿದ್ದಾರೆ.





ಮಹಿಳಾ ಆಯೋಗದಲ್ಲಿ ಹಿಂದೆ ಇದ್ದವರು ಮತ್ತು ಈಗ ಇರುವವರೇ ಈ ತೆರನಾಗಿ ಪೂರ್ವಗ್ರಹಪೀಡಿತರಾದರೆ ಆಯೋಗದ ತನಿಖೆಗಳು ನಿಷ್ಪಕ್ಷಪಾತವಾಗಿರುತ್ತವೆ, ದೂರುದಾರರಿಗೆ ನ್ಯಾಯ ಸಿಗುತ್ತದೆ ಎಂಬ ಭರವಸೆ ಇಟ್ಟುಕೊಳ್ಳುವುದಾದರೂ ಹೇಗೆ? ಮಾಜಿ ಅಧ್ಯಕ್ಷೆಯ ರಾಜಕೀಯ ಒಲವುಗಳು ರಾಘವೇಶ್ವರ ಸ್ವಾಮಿಯನ್ನು ಪರೋಕ್ಷವಾಗಿ ಬೆಂಬಲಿಸುತ್ತಿರುವ ರಾಜಕೀಯ ಪಕ್ಷದ ಕಡೆಗೇ ಇರುವುದು ಎಲ್ಲರಿಗೂ ತಿಳಿದಿರುವ ಸಂಗತಿಯೇ ಆಗಿದೆ. ಮಾನ್ಯರು ಸದ್ಯ ಆಯೋಗದ ಪದಾಧಿಕಾರಿಯಲ್ಲ ಎಂದುಕೊಂಡರೂ ಆಯೋಗದ ಹಾಲಿ ಸದಸ್ಯೆಯಾದ ಸುಮನ್‌ರವರು ಹೀಗೆ ಪೂರ್ವಗ್ರಹ ಪೀಡಿತರಂತೆ ಮಾತಾಡಲು ಕಾರಣವೇನು? ಬಹುಶಃ ಇದನ್ನು ಎರಡು ವಿಧಗಳಲ್ಲಿ ಅರ್ಥೈಸಿಕೊಳ್ಳಬಹುದು. ಒಂದು, ಇದು ಅವರ ವೈಯಕ್ತಿಕ ಅಭಿಪ್ರಾಯ ಆಗಿರಬಹುದು. ಆದರೆ ಆಯೋಗದ ಸದಸ್ಯೆಯಾಗಿರುವ ಆಕೆಗೆ ವಿಚಾರಣೆಗೆ ಬಾಕಿ ಇರುವ ಪ್ರಕರಣದ ಕುರಿತು ತನ್ನ ವೈಯಕ್ತಿಕ, ಪಕ್ಷಪಾತೀಯ ನಿಲುವನ್ನು ಸಾರ್ವಜನಿಕ ವೇದಿಕೆಯಲ್ಲಿ ಪ್ರಕಟಿಸುವ ಅಧಿಕಾರ ಇಲ್ಲ, ಆದುದರಿಂದಲೆ ಆಕೆಯ ಈ ರೀತಿಯ ಹೇಳಿಕೆಗಳನ್ನು ಓದಿದ ಅನೇಕರು ಆಕೆ ಪರೋಕ್ಷವಾಗಿ ಆಯೋಗದ ಅರ್ಥಾತ್ ಸರಕಾರದ ನಿಲುವುಗಳನ್ನು ಪ್ರತಿಬಿಂಬಿಸುತ್ತಿದ್ದಾರೆಯೇ ಎಂಬ ಸಂದೇಹವನ್ನು ವ್ಯಕ್ತಪಡಿಸುತ್ತಿದ್ದಾರೆ.

ಇಂತಹದೊಂದು ಸಂದೇಹ ಸಂಪೂರ್ಣ ನಿರಾಧಾರವೆಂದು ಹೇಳಲಾಗುವುದಿಲ್ಲ, ಏಕೆಂದರೆ ಮೊದಲನೆ ಸಂತ್ರಸ್ತೆ ಹೇಮಲತಾರ ದೂರು ಸ್ವೀಕರಿಸಲು ವಿಳಂಬಿಸಿರುವುದರಿಂದ ಆರಂಭಿಸಿ, ದಂಪತಿ ವಿರುದ್ಧವೇ ಪ್ರಕರಣ ದಾಖಲಾಗಿರುವುದು; ಪೊಲೀಸರು ಚಾತುರ್ಮಾಸ್ಯದ ನೆಪವನ್ನು ಮಾನ್ಯಮಾಡಿ ಸ್ವಾಮಿಯನ್ನು ಬಂಧಿಸದಿರುವುದು; ಹೈಕೋರ್ಟಿನ ನಾಲ್ವರು ನ್ಯಾಯಮೂರ್ತಿಗಳು ಕಾರಣ ನೀಡದೆ ವಿಚಾರಣೆಯಿಂದ ಹಿಂದೆ ಸರಿದಿರುವುದು; ವೈದ್ಯಕೀಯ ಪರೀಕ್ಷೆಯಲ್ಲಿ ಸಂತ್ರಸ್ತೆಯ ಬಟ್ಟೆಯ ಮೇಲೆ ಇದ್ದುದು ಸ್ವಾಮಿಯ ವೀರ್ಯವೇ ಎಂದು ಸಾಬೀತಾಗಿದ್ದರೂ, ಇದೀಗ ಮತ್ತೋರ್ವ ಸಂತ್ರಸ್ತೆಯೂ ಅತ್ಯಾಚಾರದ ದೂರು ದಾಖಲಿಸಿದರೂ ಆರೋಪಿಯನ್ನು ಇದುವರೆಗೆ ಬಂಧಿಸದಿರುವುದು; ಸಿಐಡಿ ತನಿಖೆಯಲ್ಲಿ ಆಗುತ್ತಿರುವ ವಿಳಂಬ; ಇನ್ನೂ ಆರೋಪಪಟ್ಟಿ ಸಲ್ಲಿಸದಿರುವುದು ಇವೇ ಮೊದಲಾದ ವಿದ್ಯಮಾನಗಳು ಇದನ್ನೆಲ್ಲ ಗಮನಿಸುತ್ತಿರುವ ಜನರ ಮನಸ್ಸಿನಲ್ಲಿ ಸರಕಾರವೇ ಸ್ವಾಮಿಯ ಬೆಂಬಲಕ್ಕೆ ನಿಂತಿದೆಯೇನೋ ಎಂಬ ಅನುಮಾನಗಳನ್ನು ಹುಟ್ಟುಹಾಕುತ್ತಿವೆ. ಆದುದರಿಂದ ಇಂತಹ ಅನುಮಾನಗಳಿಗೆ ಆಸ್ಪದವಿರದಂತೆ ತನ್ನ ನಿಷ್ಪಕ್ಷಪಾತತೆಯನ್ನು ಮತ್ತು ನ್ಯಾಯಪರತೆಯನ್ನು ರಾಜ್ಯದ ಜನತೆಗೆ ತೋರ್ಪಡಿಸುವ ಗುರುತರ ಹೊಣೆಗಾರಿಕೆ ಸರಕಾರದ ಮೇಲಿದೆ. ಇಲ್ಲವಾದರೆ ಮತದಾರ ಜನತೆಯ ಅನುಮಾನಗಳು ಹೆಚ್ಚುತ್ತಾ ಹೆಚ್ಚುತ್ತಾ ಗಾಢನಂಬಿಕೆಗಳಾಗಿ ಪರಿವರ್ತನೆಗೊಳ್ಳಬಹುದು. ಇದರ ಅಂತಿಮ ಪರಿಣಾಮ ಏನೆಂದು ಸರಕಾರ ಯೋಚಿಸಬೇಕು.

■ ಸುರೇಶ್ ಭಟ್ ಬಾಕ್ರಬೈಲ್




ಪರಿಷತ್ ಚುನಾವಣೆ: ಕೊಂಡಯ್ಯನಿಗೆ ಬಳ್ಳಾರಿ 'ಸೂರ್ಯ'ನ ಝು


ಕೊಂಡಯ್ಯ



ಬಳ್ಳಾರಿಯ ರಾಜಕಾರಣದಲ್ಲಿ ಪರಿಷತ್ ಚುನಾವಣೆಯ ಝುಳ ಜೋರುಗತಿಯಲ್ಲಿ ಝುಳಪಿಸುತ್ತಿದೆ. ಒಂದುಕಡೆ ಇಡೀ ಜಿಲ್ಲೆ ಬರಗಾಲಕ್ಕೆ ತುತ್ತಾಗಿ ರೈತರು ಗುಳೆಹೋಗಲು ದೂರದ ಗೋವಾ, ಬೆಂಗಳೂರು, ಮುಂಬೈನತ್ತ ಮುಖ ಮಾಡಿ ಕುಳಿತಿದ್ದರೆ, ಮತ್ತೊಂದು ಕಡೆ ರಾಜಕಾರಣಿಗಳು ಪರಿಷತ್ ಚುನಾವಣೆಯ ಟಿಕೆಟ್ ಲೆಕ್ಕಾಚಾರದಲ್ಲಿ ಬ್ಯುಸಿಯಾಗಿರೋದು ವಿಪರ್ಯಾಸ. ಬಿಜೆಪಿ, ಜೆಡಿಎಸ್, ಕಾಂಗ್ರೆಸ್ ಈ ಮೂರು ಪಾರ್ಟಿಗಳಲ್ಲೂ ಆಕಾಂಕ್ಷಿಗಳ ಟಿಕೆಟ್ ತಾಲೀಮು ಜೋರಾಗಿದೆಯಾದರೂ ಕೈ ಪಾರ್ಟಿಯಲ್ಲಿ ಈ ಕದನ ತುಸು ಹೆಚ್ಚೇ ಅಂತೆನ್ನಬಹುದು. ರಾಜ್ಯದಲ್ಲಿ ಹೇಗೂ ತಮ್ಮದೇ ಸರ್ಕಾರ ಅಧಿಕಾರದಲ್ಲಿರುವುದರಿಂದ ಟಿಕೆಟ್ ಸಿಕ್ಕರೆ ಗೆದ್ದಂತೆಯೇ ಲೆಕ್ಕ ಎಂಬ ವಿಚಾರ ತಲೆಹೊಕ್ಕಿರುವುದೇ ಇದಕ್ಕೆ ಕಾರಣ. ಹಾಗಾಗಿ ಟಿಕೇಟು ಖಾತ್ರಿಗೊಳ್ಳುವ ಮೊದಲೇ ಆಕಾಂಕ್ಷಿಗಳು ಗ್ರಾಮ ಪಂಚಾಯ್ತಿ ಸದಸ್ಯರಿಗೆ ಗಾಳಹಾಕಲು ಶುರುವಿಟ್ಟುಕೊಂಡಿದ್ದಾರೆ. ಜೆಡಿಎಸ್-ಬಿಜೆಪಿ ಪಾರ್ಟಿಗಳಲ್ಲೂ ಇಂತಹ ಕದಲಿಕೆಗಳು ಕಾಣಬರುತ್ತಿವೆಯಾದರೂ ಬಹಿರಂಗಗೊಳ್ಳುವಷ್ಟು ಮಟ್ಟಕ್ಕೆ ಇಳಿದಿಲ್ಲ.

ಸದ್ಯದಲ್ಲೇ ಜಿಲ್ಲಾ ಪಂಚಾಯ್ತಿ, ತಾಲ್ಲೂಕು ಪಂಚಾಯ್ತಿಗಳ ಅಧಿಕಾರ ಮುಗಿಯಲಿದ್ದು ಆವೆರಡು ಸ್ಥಳೀಯ ಸಂಸ್ಥೆಗಳ ಚುನಾವಣೆ ಡಿಸೆಂಬರ್‌ನಲ್ಲಿ ನಡೆಯುವ ಸಾಧ್ಯತೆಗಳಿವೆ. ಇಂಥಾ ಚುನಾವಣಾ ರಾಜಕೀಯ ಪರಿಸ್ಥಿತಿ ಇರುವಾಗಲೇ, ಬಳ್ಳಾರಿ ಕಾಂಗ್ರೆ ಪಾರ್ಟಿಯ ಕೊಂಡಯ್ಯ ಮತ್ತು ಸೂರ್ಯನಾರಾಯಣ ರೆಡ್ಡಿ ಬೀದಿಗಿಳಿದು ರಾಜಕೀಯ ರಂಪಾಟ ಶುರುಚ್ಚಿದ್ದಾರೆ. ಸದ್ಯ ಇವರಿಬ್ಬರೂ ಬಳ್ಳಾರಿ ಜಿಲ್ಲೆಯಲ್ಲಿ ಕೈಪಾರ್ಟಿಯನ್ನೇ ಎರಡು ಹೋಳು ಮಾಡಿದ್ದಾರೆ. ಕೊಂಡಯ್ಯನ ಹೆಸರು ಬಳ್ಳಾರಿ ರಾಜಕಾರಣದಲ್ಲಿ ಕೇವಲ ಕುತಂತ್ರಕ್ಕೆ ಮಾತ್ರವಲ್ಲ ಸಮಯಸಾಧಕ ರಾಜಕಾರಣಕ್ಕೂ ಸೈಎನಿಸಿಕೊಂಡಿದೆ. ಆದಾಗ್ಯೂ ಕೊಂಡಯ್ಯ ಜಿಲ್ಲೆಯ ಮಟ್ಟಿಗೆ ಕೈ ಪಾರ್ಟಿಯ ಸೀನಿಯರ್ ಲೀಡರೆಂಬುದನ್ನು ತಳ್ಳಿಹಾಕುವಂತಿಲ್ಲ. ತಳಮಟ್ಟದ ರಾಜಕಾರಣದಿಂದ ಹೈಕಮಾಂಡ್‌ವರೆಗೂ ಅನುಕೂಲಸಿಂಧು ರಾಜಕೀಯ ಮಾಡುತ್ತಲೇ ಅಧಿಕಾರ ಅನುಭವಿಸಿದವರು. **1996** ಹಾಗೂ **98**ರಲ್ಲಿ ಬಳ್ಳಾರಿ ಸಂಸದನಾಗಿ ಗೆದ್ದಿದ್ದ ಕೊಂಡಯ್ಯ **1999**ರಲ್ಲಿ ಸೋನಿಯಾ ಗಾಂಧಿಗಾಗಿ ಕ್ಷೇತ್ರವನ್ನು ತ್ಯಾಗ ಮಾಡಿ ಮೇಡಂ ಗಮನ ಸೆಳೆದಿದ್ದರು. ಇದಕ್ಕೆ ಪ್ರತಿಯಾಗಿ ಎಸ್.ಎಂ. ಕೃಷ್ಣರಿಂದ ತೆರವಾದ ರಾಜ್ಯಸಭಾ ಸದಸ್ಯತ್ವ ಕೊಂಡಯ್ಯ ಪಾಲಾದದ್ದು ಬೇರೆ ವಿಷಯ. ಅಲ್ಲಿಂದ ಕೊಂಡಯ್ಯನ ರಾಜಕೀಯ ಪರಿಸ್ಥಿತಿಯೇ ಬದಲಾಗಿ ಹೋಯಿತು. ಸೋನಿಯಾ ಗಾಂಧಿಯ ನಾಮಬಲದಿಂದಲೇ ಕೃಷ್ಣ ಸರ್ಕಾರದಲ್ಲಿ ಒಂದೊಂದೇ ಎಡವಟ್ಟುಗಳನ್ನು ಮಾಡಿಕೊಳ್ಳುತ್ತಾ ಬಂದ ಕೊಂಡಯ್ಯನನ್ನು ವರಿಷ್ಠರು ದೂರವಿಡುವ ಪ್ರಯತ್ನ ಮಾಡಿದರು. ಯಾವಾಗ ಕೊಂಡಯ್ಯ **2014**ರಲ್ಲಿ ಬಳ್ಳಾರಿ ಕಾಂಗ್ರೆ ಪಕ್ಷದ ಕಚೇರಿಯ ಬೆಲೆಬಾಳುವ ನಿವೇಶನವನ್ನೇ ತನ್ನ ಕೈವಶ ಮಾಡಿಕೊಳ್ಳುವ ದುಸ್ಸಾಹಸಕ್ಕೆ ಕೈಹಾಕಿದರೋ ಆವಾಗಲೇ ಬಳ್ಳಾರಿ ಕಾಂಗ್ರೆಸಿನ ಸಾಮಾನ್ಯ ಕಾರ್ಯಕರ್ತನಿಗೂ ಕೊಂಡಯ್ಯನ ಮೇಲೆ ಇನ್ನಿಲ್ಲದ ಬೇಸರವಾಗಿತ್ತು, ಈ ರಾದ್ಧಾಂತ ರಾಷ್ಟ್ರೀಯ ಸುದ್ದಿಯಾದದ್ದೇ ತಡ, ಸೋನಿಯಾ ಗಾಂಧಿ ಕೂಡ ಕೊಂಡಯ್ಯನನ್ನು ತಮ್ಮ ಆಪ್ತ ವಲಯದಿಂದ ಹೊರಕ್ಕೆ ಗದುಮಿದ್ದರು. ಅಲ್ಲಿಂದಾಚೆಗೆ ಕೊಂಡಯ್ಯ ಬಳ್ಳಾರಿ ಕಾಂಗ್ರೆ ಪಾಳಿಯದಲ್ಲಿ ಚಲಾವಣೆಯಲ್ಲಿಲ್ಲದ ನಾಣ್ಯದಂತಾದರು. ಹಾಗೆ ನೋಡಿದರೆ ಕೊಂಡಯ್ಯನಿಂದ ಕೈ ಪಾರ್ಟಿಗೆ ಲಾಭ ಆಗಿದ್ದಕ್ಕಿಂತ ಪಾರ್ಟಿಯಿಂದ ಕೊಂಡಯ್ಯನಿಗಾದ ಪ್ರಾಫಿಟ್ಟೇ ಜಾಸ್ತಿ. ಕೊಂಡಯ್ಯನ ಇಂತಹ ರಾಜಕೀಯ ನಡಾವಳಿಯಿಂದಾಗಿಯೇ ಅಸ್ತಿತ್ವದಲ್ಲೇ ಇರದಿದ್ದ ಜನಾರ್ದನ ರೆಡ್ಡಿ, ಶ್ರೀರಾಮುಲುರಂಥಾ ಗಣಿಕಳ್ಳರು ಎದ್ದು ಬಂದಿದ್ದು ಬಳ್ಳಾರಿಯನ್ನು ಕೇಸರಿ ಕೋಟೆಯನ್ನಾಗಿಸಿದ್ದು. ಕೈ ಪಾರ್ಟಿಯ ಸಾಮಾನ್ಯ ಕಾರ್ಯಕರ್ತರ ಕೈಗೂ ಸಿಗದಂತೆ ನಾಟ್ ರೀಚಬಲ್ ಆಗಿದ್ದ ಕೊಂಡಯ್ಯ ಪರಿಷತ್ ಚುನಾವಣೆಯ ಹಿನ್ನೆಲೆಯಲ್ಲಿ ಈಗ ಮತ್ತೆ ಚಲಾವಣೆಗೆ ಬರಲು ಹವಣಿಸುತ್ತಿದ್ದಾರೆ. ಹೊಸದಾಗಿ ಗೆದ್ದುಬಂದ ಗ್ರಾಮ ಪಂಚಾಯ್ತಿ ಸದಸ್ಯರುಗಳಿಗೆ ಈಗಿನಿಂದಲೇ ಗಾಳ ಹಾಕಲು ಶುರು ಮಾಡಿರುವ ಕೊಂಡಯ್ಯ ಬೆಳ್ಳಿನಾಣ್ಯ ಅಭಿನಂದನಾ ಪತ್ರಗಳು ಸದಸ್ಯರ ಮನೆಬಾಗಿಲಿಗೆ ತಲುಪುವ ವ್ಯವಸ್ಥೆ ಮಾಡಿದ್ದಾರೆ. ಇನ್ನು ಕಾರ್ಮಿಕ ಮಂತ್ರಿ ಕಮ್ ಹಡಗಲಿಯ ಶಾಸಕ ಪಿ.ಟಿ. ಪರಮೇಶ್ವರ್ ನಾಯ್ಕ್ ಕೂಡಾ ತನ್ನ ರಾಜಕೀಯ ಗುರು ಕೊಂಡಯ್ಯನ ಪರ ಬ್ಯಾಟಿಂಗ್ ಆರಂಭಿಸಿಯಾಗಿದೆ. ಪಕ್ಷದ ಅಧಿಕೃತ ಅಭ್ಯರ್ಥಿ ಘೋಷಣೆಯಾಗುವ ಮೊದಲೇ ಗುರುಶಿಷ್ಯರ ಎಲೆಕ್ಷನ್ ಎಪಿಸೋಡು ಶುರುವಾಗಿದೆ.







ಈ ಬಾರಿ ಕೊಂಡಯ್ಯನ ಹಾದಿ ಅಂದುಕೊಂಡಷ್ಟು ಸುಲಭ ಸಾಧ್ಯವಾಗಲಿಕ್ಕಿಲ್ಲ, ಏಕೆಂದರೆ ಹರಪನಹಳ್ಳಿ ಶಾಸಕ ಎಂಪಿ ರವೀಂದ್ರನೇ ಕೊಂಡಯ್ಯನ ದಾರಿಗೆ ಮೊದಲ ಮುಳ್ಳಾಗುವ ಸಾಧ್ಯತೆ ಇದೆ. ಸದ್ಯ ಹರಪನಹಳ್ಳಿ ದಾವಣಗೆರೆ ಜಿಲ್ಲೆಗೆ ಸೇರಿದ್ದರೂ ಬಳ್ಳಾರಿ ರಾಜಕಾರಣದ ಮೇಲೆ ಹರಪನಹಳ್ಳಿಯ ಛಾಯೆ ಮತ್ತು ನಂಟು ಸಂಪೂರ್ಣ ಕಡಿದುಹೋಗಿಲ್ಲ, ಎಂ.ಪಿ. ರವೀಂದ್ರನಿಗೂ ಕೊಂಡಯ... ವೈಷಮ್ಯ ಇರೋದು ಹೊಸ ವಿಷಯವೇನಲ್ಲ. ... ಕಾರಣಕ್ಕೆ ಪರಮೇಶ್ವರ ನಾಯ್ಕ ಮತ್ತು ಎಂ.ಪಿ. ರ... ರಾಜಕೀಯ ವೈರಿಗಳಾಗಿ ರೂಪ ತಾಳಿದ್ದಾರೆ.

ಇನ್ನು ಕಳೆದ ಎಂಎಲ್‌ಸಿ ಚುನಾವಣೆಯಲ್ಲಿ ... ಕೊಂಡಯ್ಯ ಮತ್ತು ಪಿ.ಟಿ. ಪರಮೇಶ್ವರ ನಾಯ್ಕನ ಜ... ತಮ್ಮ ಸ್ವಾರ್ಥಕ್ಕೋಸ್ಕರ ಕಾಂಗ್ರೆಸಿನ ಅಧಿಕೃತ ಅ... ವೆಂಕಟರಾವ್ ಘೋರ್ಪಡೆಯನ್ನು ಸೋಲಿಸಿ ಬಿಜೆ... ಮೃತ್ಯುಂಜಯ ಜಿನಗನ ಗೆಲುವಿಗೆ ನೆರವಾಗಿದ್ದರು ... ಆರೋಪ ಕೈ ಪಾಳಯದಲ್ಲೇ ದಟ್ಟವಾಗಿ ಕೇಳಿಬರ... ಬಳ್ಳಾರಿ ರಾಜಕಾರಣದಲ್ಲಿ ಕೊಂಡಯ್ಯ ಈ ನ... ರಾಜಕಾರಣ ಶುರು ಮಾಡಿದಾಗಲೇ ಜಿಲ್ಲೆಯಲ... ಪಾರ್ಟಿಯ ಎರಡು ಬಣಗಳು ಸೃಷ್ಟಿಯಾಗಿವೆ. ... ವೀರಭದ್ರಪ್ಪರದ್ದು ಒಂದು ಗುಂಪಾದರೆ, ಮಾಜಿ ... ಕೋಳೂರು ಬಸವನಗೌಡರದ್ದು ಮತ್ತೊಂದು ಗು... ಅಲ್ಲಂ ಪಟಾಲಂನಲ್ಲಿ ಶಾಸಕ ದಿವಾಕರಬಾಬು, ವ... ರವೀಂದ್ರ, ಮೊದಲಾದವರಿದ್ದರೆ ಕೊಂಡ... ರಾಮಾಂಜನೇಯ, ಪರಮೇಶ್ವರ್ ನಾಯ್ಕ್ ಮೊದಲಾದ... ಕೋಳೂರು ಬಸವನಗೌಡರ ಟೀಮಿನಲ್ಲಿದ್ದಾರೆ. ಕೊಂ... ಭಾನ್ಗಡಿಗಳನ್ನೇ ಅಸ್ತ್ರ ಮಾಡಿಕೊಂಡಿರುವ ವಿರೋಧಿ... ಕೊಂಡಯ್ಯನಿಗೆ ಟಿಕೆಟ್ ತಪ್ಪಿಸುವ ಸಾಹಸಕ್ಕೂ ಕೈಹ... ಹಾಗೊಮ್ಮೆ ಬಫಾರಂ ಕೊಂಡಯ್ಯನಿಗೆ ಸಿಕ್ಕರೂ ... ಬಣ ಕೊಂಡಯ್ಯನ ಗೆಲುವಿಗೆ ಶ್ರಮಿಸುವುದು ಡ...

ಚಿತ್ರದುರ್ಗ: ಬರಗೇರಮ್ಮನ ಹುಂಡಿಗೆ ಬರಗೆಟ್ಟ ಚೋರದ್ವಯರ

ಬರದ ನಾಡು ಚಿತ್ರದುರ್ಗದ ಜನರಲ್ಲಿ ಭಯಮಿಶ್ರಿತ ಭಕ್ತಿ ಹುಟ್ಟಿಸಿಕೊಳ್ಳುವಲ್ಲಿ ಸಂಪಿಗೆ ಸಿದ್ದೇಶ್ವರ, ಉಚ್ಚಂಗಿ ಎಲ್ಲಮ್ಮನಂತಹ ಐತಿಹಾಸಿಕ ದೇವರುಗಳನ್ನೂ ಬರಗೇರಮ್ಮ ಎಂಬ ದೇವತೆ ಓವರ್‌ಟೇಕ್ ಮಾಡಿದ್ದಾಳೆ. ಹೌದು, ಬರಗೇರಮ್ಮ ಅಂದರೆ ಚಿತ್ರದುರ್ಗದ ಜನಕ್ಕೆ ಅದೆಂತದ್ದೋ ಭಯ. ಆ ಭಯದ ಕಾರಣಕ್ಕೇ ಬರಗೇರಮ್ಮನಿಗೆ ಭಕ್ತರೂ ಭಯಂಕರ ಸಂಖ್ಯೆಯಲ್ಲಿದ್ದಾರೆ. ಅದರಲ್ಲೂ ಮಾರ್ವಾಡಿಗಳು, ಶೆಟ್ಟರಂತಹ ಧನಿಕ ಭಕ್ತಾದಿಗಳೇ ಜಾಸ್ತಿ. ನಗರದ ಹೊರವಲಯದ ಹೊಳಲ್ಕೆರೆ ರಸ್ತೆಯ ಐದು ಎಕರೆ ವಿಸ್ತಾರದ ಜಮೀನಿನಲ್ಲಿರುವ ದೇವಸ್ಥಾನದ ಬರಗೇರಮ್ಮನಿಗೆ ಇಡೀ ಚಿತ್ರದುರ್ಗವೇ ಹೆದರಿದರೂ ಇಬ್ಬರು ಮಾತ್ರ ಆಕೆಯನ್ನು ತಮ್ಮ ಬಿಸಿನೆಸ್ ಬಂಡವಾಳ ಮಾಡಿಕೊಂಡು ಕಳೆದ ಇಪ್ಪತ್ತು ವರ್ಷಗಳಿಂದ ಭರ್ಜರಿಯಾಗಿ ಬಾಚುತ್ತಿದ್ದಾರೆ. ಒಬ್ಬ ದೇವಸ್ಥಾನದ ಸಂಚಾಲಕ ನಾಗರಾಜ, ಮತ್ತೊಬ್ಬ ಅಧ್ಯಕ್ಷ ಸಿದ್ಲಿಂಗ. ಅಂದಹಾಗೆ, ಈ ಎರಡು ಹುದ್ದೆಗಳನ್ನು ಇವರಿಬ್ಬರಿಗೆ ದೇವಸ್ಥಾನದ ಟ್ರಸ್ಟ್ ಅಥವಾ ಸಾರ್ವಜನಿಕರು ನೀಡಿದ್ದಲ್ಲ. ತಮ್ಮಷ್ಟಕ್ಕೆ ತಾವೇ ಸ್ವಯಂಘೋಷಿತ ಸಂಚಾಲಕ, ಅಧ್ಯಕ್ಷ ಆಗಿ ಬರಗೇರಮ್ಮನ ಹುಂಡಿಯನ್ನು ಎರಡೂ ಕೈಗಳಲ್ಲೂ ಬಾಚಿ ಮುಕ್ಕುತ್ತಿದ್ದಾರೆ.



ಸಿದ್ಲಿಂಗ


ನಾಗರಾಜ

ಈ ಬರಗೇರಮ್ಮ ಶೂದ್ರದೇವತೆ. ಅಷ್ಟೇ ಅಲ್ಲ, ಮೂಢನಂಬಿಕೆಯ ವಿರೋಧಿ ದೇವರಾಗಿಯೂ ಗುರುತಿಸಿಕೊಂಡಿದ್ದಾಳೆ. ಒಟ್ಟಿನಲ್ಲಿ ದುರ್ಗದ ಮಂದಿಗೆ ಪವರ್‌ಫುಲ್ ದೇವತೆ. ಹಾಗಾಗಿಯೇ ಭಕ್ತರು ಇಷ್ಟಾರ್ಥ ಸಿದ್ಧಿಗಾಗಿ ತಮ್ಮ ಕೈಲಿದ್ದ ಕಾಸನ್ನೆಲ್ಲ ಬರಗೇರಮ್ಮನ ಹುಂಡಿಗೆ ಹಾಕಿ ಅಡ್ಡ ಬಿದ್ದು 'ಕೃತಾರ್ಥ'ರಾಗುತ್ತಾರೆ. ಈ ದೇವತೆಯ ಆದಾಯದ ಗಾತ್ರ ನೋಡಿ ಮಾರುಹೋಗಿ ವಕ್ಕರಿಸಿಕೊಂಡ ವಸೇ ನಾಗರಾಜ. ಈ ಮೊದಲು ಈತ ಕೆ.ಇ.ಬಿ.ಯಲ್ಲಿ ಅಕೌಂಟೆಂಟ್ ಆಗಿದ್ದ, ನಿವೃತ್ತಿ ನಂತರ ಬರಗೇರಮ್ಮನ ಗುಡಿಗೆ ಗರ ಬಡಿದವನಂತೆ ಮೆತ್ತಿಕೊಂಡಿದ್ದಾನೆ. ಇದೇ ದುರ್ಗದ ಶಿಕ್ಷಣ ಇಲಾಖೆಯಲ್ಲಿ ಡಿಡಿಪಿಐ ಆಗಿದ್ದ ಸಿದ್ಲಿಂಗಪ್ಪ ಕೀಇಬ ನಾಗರಾಜನ ಪಾತಕ ಪಾರ್ಟ್ನರ್.

ಅಸಲಿಗೆ ಬರಗೇರಮ್ಮನ ದೇವಸ್ಥಾನಕ್ಕೆಂದು ನೀಡಲಾಗಿರುವ ಐದೆಕರೆ ಜಮೀನು ನಾಯಕ ಜನಾಂಗದ ಪೂಜಾರಿ ಮನೆತನದವರದ್ದು. ಸುಮಾರು ವರ್ಷಗಳ ಹಿಂದೆಯೇ ದೇವಸ್ಥಾನಕ್ಕೆಂದು ದಾನ ನೀಡಿದ್ದರು. ದಾನಪತ್ರದಲ್ಲಿ 'ಜಮೀನು ದಾನ ನೀಡಿದ ವಂಶದವರೇ ಎಂದೆಂದೂ ಪೂಜಾರಿಕೆ ಕಾಯಕ ಮಾಡತಕ್ಕದ್ದು' ಅಂತ ಕರಾರು ನಮೂದಾಗಿದೆ. ಈಗಲೂ ಅದು ಹಾಗೇ ನಡೆದುಕೊಂಡು ಬಂದಿದೆ. ಆದರೆ ನಾಗರಾಜ, ಸಿದ್ಲಿಂಗರ ಅರ್ಭಟದ ಮುಂದೆ ದಾನಕೊಟ್ಟ ಪೂಜಾರಿ ಮನೆತನ ನೇಪಥ್ಯಕ್ಕೆ ಸರಿದು ಇವರಿಬ್ಬರೇ ದಾನಶೂರರಂತೆ ವಿಜೃಂಭಿಸುತ್ತಿದ್ದಾರೆ.

ಸ್ವಯಂಘೋಷಿತ **`some'** ಚಾಲಕ ನಾಗರಾಜ ಬಲು ಚಾಣಾಕ್ಷ ಆಸಾಮಿ. ಮೊದಲೇ ಅಕೌಂಟೆಂಟಾಗಿ ಸರ್ಕಾರಿ ನೌಕರಿಯಲ್ಲಿ ಲೆಕ್ಕಪತ್ರದ ಮೂಲ ಕಸುಬು ಕಲಿತು ಬಂದವನಿಗೆ ಹೇಳೋರು-ಕೇಳೋರು ಇಲ್ಲದ ಬರಗೇರಮ್ಮನ ಹುಂಡಿ ಬಾಚುವುದನ್ನು ಕಲಿಸಿಕೊಡಬೇಕೆ? ಅದಕ್ಕೆ ಆತ ಆಯ್ಕೆ ಮಾಡಿಕೊಂಡದ್ದು ಕಲ್ಯಾಣ ಮಂಟಪದ ಸ್ಕೀಮನ್ನು. ದೇವಸ್ಥಾನದ ಪಕ್ಕದಲ್ಲೇ ಖಾಲಿಬಿದ್ದಿರುವ ಜಮೀನಿನಲ್ಲಿ ಕಲ್ಯಾಣಮಂಟಪ ಕಟ್ಟಿಸಿ ಬಡಭಕ್ತರ ಸಮಾರಂಭಗಳಿಗೆ ಕೊಡೋಣ ಅಂತ ನೀಲನಕ್ಷೆ ಸಿದ್ಧಪಡಿಸಿದ ನಾಗರಾಜ-ಸಿದ್ಲಿಂಗರ ಜೋಡಿ ಬರಗೇರಮ್ಮನ ರೊಕ್ಕಸ್ಥ ಭಕ್ತರನ್ನೆಲ್ಲ ಎಡತಾಕಿ ಹಣ ವಸೂಲಿ ಮಾಡಿದ್ದರು. ಶ್ರೀಮಂತ ರಿಯಲ್ ಎಸ್ಟೇಟ್ ಏಜೆಂಟ್ ಸೈಟ್ ಬಾಬು ಕಲ್ಯಾಣಮಂಟಪದ ನಿರ್ಮಾಣಕ್ಕೆಂದು ಸಿಮೆಂಟು ಕೊಡಿಸಿದ್ದರೆ, ಆಯಿಲ್ ದಂಧೆಯ ಕುಳ ವಿ.ಜಿ. ಶೆಟ್ರು ಕಬ್ಬಿಣ-ಸಿಮೆಂಟು ನೀಡಿದ್ದರು. ಭೀಮಸಮುದ್ರ, ಮೆದಕೇರಿಪುರದ ಮೈನಿಂಗ್ ಲಾರಿಗಳು ಬಿಟ್ಟಿಯಾಗಿ ಮರಳು ತಂದು ಸುರಿದಿದ್ದವು. ಇನ್ನು ಮಾರ್ವಾಡಿಗಳು ಹಾಗೂ ಸಾಮಾನ್ಯ ಭಕ್ತರೆಲ್ಲಾ ಸೇರಿ ಕಲ್ಯಾಣ ಮಂಟಪಕ್ಕೆಂದು ಭರ್ಜರಿ ಸಂಪನ್ಮೂಲಗಳನ್ನೇ ಒದಗಿಸಿಕೊಟ್ಟಿದ್ದರು. ಹೀಗೆ ಒಟ್ಟುಗೂಡಿದ ಹಣದಲ್ಲಿ ಯಾವುದಕ್ಕೆ ಎಷ್ಟೆಷ್ಟು ಖರ್ಚಾಯಿತೊ, ಉಳಿದದ್ದು ಏನಾಯಿತೊ, ಒ... ಕಲ್ಯಾಣ ಮಂಟಪವೊಂದು ತಲೆ ಎತ್ತಿ ನಿಂತಿತು.



ಬಡವರ ನೆರವಿಗೆಂದು ಕಟ್ಟಿದ್ದ ಕಲ್ಯಾಣಮಂ... ಬಾಡಿಗೆ ರೇಟು ಆರಂಭದಲ್ಲಿ **500** ರೂಪಾಯಿ ... ಇತ್ತು. ಆದರೀಗ ಅದು **25,000** ಕ್ಕೆ ಬಂದು ನಿ... ಅಸಲಿಗೆ ಈ **25** ಸಾವಿರದಲ್ಲಿ ಕಲ್ಯಾಣ ಮಂ... ಬಾಬ್ತು ಕೇವಲ **10,000** ರೂಪಾಯಿ ಮಾತ್ರ. ಇ... **15** ಸಾವಿರ ರೂಪಾಯಿ ನೇರವಾಗಿ ನಾಗರಾಜನ ... ಹೊಕ್ಕುತ್ತದೆ. ಯಾಕೆಂದರೆ, ಆ ಹದಿನೈದು ಸಾವಿರ... ಲೈಟು ಇತ್ಯಾದಿಗಳ ಬಾಡಿಗೆಗಂತೆ ಮತ್ತು ಅವೆಲ್ಲ ನಾಗ... ಸ್ವಂತದ್ದವುಗಳಂತೆ. ನಾಗರಾಜ **20** ವರ್ಷಗಳಿಂದ ಯ... ನಯಾಪೈಸೆಯ ಲೆಕ್ಕ ತೋರಿಸಿದವನಲ್ಲ. ಹಾಗೆ ... ಬಂದವರಿಗೆಲ್ಲ ಧಮಕಿ ಹಾಕಿಯೋ ಧಮಕಿಗೆ ಹೆದ... ಕೈಬೆಚ್ಚಗೆ ಮಾಡಿಯೋ ಬಾಯಿಮುಚ್ಚಿಸುತ್ತಾನೆ.

ಇನ್ನು ಅಧ್ಯಕ್ಷ ಸಿದ್ಲಿಂಗ ಏನು ಕಮ್ಮಿ ಆಸಾಮಿ... ಈ ನಿವೃತ್ತ ಡಿಡಿಪಿಐ ಸಿದ್ಲಿಂಗ, ಬರಗೇರಮ್ಮನ ... ಶಿಕ್ಷಣ ಮಾರಾಟದ ಸಂಸ್ಥೆ ತೆರೆದು ಸರ್ಕಾರದ ಅ... ಬಾಚುವುದಲ್ಲದೇ ಡೊನೇಷನ್ ಎತ್ತುತ್ತಿದ್ದಾನೆ. ಇನ್ನು ... ಹೆಸರಿನ ಶಿಕ್ಷಣ ಸಂಸ್ಥೆಗೆಂದು ಶ್ರೀಮಂತ ಭಕ್ತರು ... ದಾನರೂಪದ ಹಣದಲ್ಲಿ ಸಿದ್ಲಿಂಗ ಭರ... ದುಂಡಗಾಗಿದ್ದಾನೆ.

ಇಷ್ಟುದಿನ ಈ ಇಬ್ಬರ ಆಟ ಆತಂಕ... ನಡೆದುಕೊಂಡು ಬಂದಿತ್ತು. ಆದರೆ ... ನಾಗರಾಜ-ಸಿದ್ಲಿಂಗರ ನಕಲಿ ಟ್ರಸ್ಟಿನ ಹನ್ನೊಂದ... ಸದಸ್ಯರೇ ತಿರುಗಿಬಿದ್ದಿದ್ದಾರೆ. ಚಿನ್ನಪ್ಪ, ತಿಮ್ಮಪ್ಪ ಸೇ... ಹಲವು ಸದಸ್ಯರು ನಾಗರಾಜ-ಸಿದ್ಲಿಂಗ ಜೋಡಿ ... ಹೆಸರಿನ ಕಲ್ಯಾಣಮಂಟಪ ನೆಪದಲ್ಲಿ ಲಕ್ಷಾಂತರ... ಲೂಟಿ ಹೊಡೆಯುತ್ತಿದ್ದಾರೆ ಅಂತ ಖುದ್ದು ಜಿಲ್ಲಾಧಿ... ದೂರು ನೀಡಿದ್ದಾರೆ. ಈ ಬಗ್ಗೆ ಕೂಲಂಕಷವಾದ ವಿ... ನಡೆಸಿ ವರದಿ ನೀಡುವಂತೆ ತನಿಖೆ ಹೊಣ... ತಹಸೀಲ್ದಾರ ಕಾಂತರಾಜ ಹೆಗಲಿಗೆ ಹೊರಿ... ಸಾಹೇಬರು ಆದೇಶ ನೀಡಿದ್ದಾರೆ.

ತಹಸೀಲ್ದಾರರ ತನಿಖೆ ಶುರುವಾಗುತ್ತಿದ್ದಂತೆಯೇ...

ಂಡಯ್ಯನ ವೇಗಕ್ಕೆ ಬ್ರೇಕ್ ಹಾಕಲು ಮತ್ತೊಂದು ಹಂಪ್ಸ್ ಕೂಡಾ ಾಗಿದೆ. ಅದು ಸಕಲಪಕ್ಷಪಲ್ಲಟ ಸೂರ್ಯನಾರಾಯಣ ರೆಡ್ಡಿ. ಈತನು ಂಡಯ್ಯನಷ್ಟೇ ಖತರ್ನಾಕ್ ಸಮಯಸಾಧಕ. ಕಳೆದ ಇಪ್ಪತ್ತು ವರ್ಷಗಳಿಂದ ಾಯ ಎದುರಾಳಿಯಂತೆಯೇ ರಾಜಕಾರಣ ಮಾಡಿಕೊಂಡು ಬಂದಿದ್ದವ ಈಗ ಕೈ ಪಾರ್ಟಿಯ ಜೀರ್ಣೋದ್ಧಾರಕನಂತೆ ರಾರಾಜಿಸುತ್ತಿದ್ದಾನೆ. ಸೂರ್ಯನಾರಾಯಣ ರೆಡ್ಡಿ ಮತ್ತು ತಮ್ಮ ಪ್ರತಾಪ ರೆಡ್ಡಿ ಇಬ್ಬರಿಗೂ ಾರಣ ಅನ್ನೋದು ಪಕ್ಕಾ ಬಿಸಿನೆಸ್ ಇದ್ದಂತೆ. ಯಾವ ಪಕ್ಷ ಸೇರಿದರೂ ತಮ್ಮ ವಹಿವಾಟಿಗೆ ತೊಂದರೆ ಆಗಬಾರದೆನ್ನುವ ಕಾರಣಕ್ಕೆ ಂದು ಪಕ್ಷದಲ್ಲಿದ್ದರೆ ತಮ್ಮ ಅದರ ವಿರೋಧಿ ಪಕ್ಷದಲ್ಲಿ ತಳವೂರಿರುತ್ತಾನೆ. ಕೆಲ ಸಂಚಿಕೆಗಳ ಹಿಂದಷ್ಟೇ ಬಳ್ಳಾರಿ ನಗರಾಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷನಾಗಿರುವ ಈತನ ತಮ್ಮ ಪ್ರತಾಪ್ ರೆಡ್ಡಿ ಬಡವರ ಜಮೀನುಗಳಿಗೆ ಾಕಿ ಕೂತಿರೋದನ್ನು 'ಪತ್ರಿಕೆ' ಬಹಿರಂಗಗೊಳಿಸಿತ್ತು.

ಸೂರ್ಯನಾರಾಯಣ ರೆಡ್ಡಿ ಆರಂಭದಲ್ಲಿ ಬಿಜೆಪಿಯಲ್ಲಿ ಗುರುತಿಸಿಕೊಂಡಿದ್ದ ಲ್ಲಿ ಬಿಜೆಪಿ ಅಭ್ಯರ್ಥಿಯಾಗಿ ಕುರುಗೋಡು ವಿಧಾನಸಭಾ ಕ್ಷೇತ್ರದಿಂದ ದು ಮಣ್ಣುಮುಕ್ಕಿದ್ದ. ನಂತರ ಕೇಸರಿ ಕ್ಯಾಂಪು ತೊರೆದು ಜೆಡಿಎಸ್ ಕಡೆ ಬದಲಾಯಿಸಿದ ಸೂರ್ಯನಾರಾಯಣ ರೆಡ್ಡಿ 2004ರಲ್ಲಿ ಅದೇ ಕುರುಗೋಡು ದ ಜೆಡಿಎಸ್ ಅಭ್ಯರ್ಥಿಯಾಗಿ ಸ್ಪರ್ಧಿಸಿದ. ಆಗ ಈತ ಕಾಂಗ್ರೆಸ್‌ನ ಅಲ್ಲಂ ಪ್ಪನನ್ನು ಮಣಿಸಿ ಶಾಸಕನಾದ. ಎಚ್.ಡಿ ಕುಮಾರಸ್ವಾಮಿ ಮುಖ್ಯಮಂತ್ರಿಯಾದಾಗ ಸೂರ್ಯನಾರಾಯಣ ರೆಡ್ಡಿಯನ್ನು ಕುಮ್ಮಿ ತನ್ನ ರಾಜಕೀಯ ಕಾರ್ಯದರ್ಶಿಯಾಗಿ ಮಾಡಿಕೊಂಡಿದ್ದರು. ಜೆಡಿಎಸ್ ಅಧಿಕಾರ ಕಳೆದುಕೊಂಡು, ಬಿಜೆಪಿ ಅಸ್ತಿತ್ವವನ್ನೇ ಕಳ್ಳುವಂತಹ ಸ್ಥಿತಿ ಬಂದಾಗ ಈತ ಮುಖ ಮಾಡಿದ್ದು ಕಾಂಗ್ರೆಸ್‌ನತ್ತ. ಗ್ರಾಮಾಂತರ ವಿಧಾನಸಭಾ ಶಾಸಕ ಸ್ಥಾನಕ್ಕೆ ಶ್ರೀರಾಮುಲು ರಾಜೀನಾಮೆ ಂಸದನಾದದ್ದೇ ತಡ ಅಲ್ಲೊಂದು ಎಪಿಸೋಡ್ ಸುತ್ತುವ ಸಲುವಾಗಿ ಕೈ ಜಂಪಾಗಿದ್ದ ಸೂರ್ಯನಾರಾಯಣ ಟಿಕೆಟ್ ಕಸರತ್ತು ನಡೆಸಿದನಾದರೂ ಲ್ಲೂರು ಮಾಜಿ ಶಾಸಕ ವೇಣುಗೋಪಾಲರ ಪರವಾಗಿ ಹೈಕಮಾಂಡ್ ಂದಿತ್ತು. ಆದರೂ ಕೈ ಪಾರ್ಟಿಯಲ್ಲೇ ಉಳಿದುಕೊಂಡಿರುವ ಸೂರ್ಯ ಣ ರೆಡ್ಡಿ ಈಗ ಎದುರಾಗಿರುವ ವಿಧಾನ ಪರಿಷತ್ ಚುನಾವಣೆಯ ತಯಾರಿ ನಡೆಸಿದ್ದಾನೆ. ಸೂರ್ಯನಾರಾಯಣ ರೆಡ್ಡಿಗೆ ಹರಪನಹಳ್ಳಿ ಶಾಸಕ ವೀಂದ್ರ ಬೆಂಬಲವೂ ಇರುವುದರಿಂದ ಕೊಂಡಯ್ಯನಿಗೆ ತಕ್ಲೀಫ್ ತಪ್ಪಿದ್ದಲ್ಲ. ಾರ್ದನ ರೆಡ್ಡಿಯ ಜೈಲುವಾಸದಿಂದ ಬಳ್ಳಾರಿಯಲ್ಲಿ ಬಿಜೆಪಿ ಸಂಪೂರ್ಣ ದ್ದು ತನ್ನ ಪಾರುಪತ್ಯವನ್ನು ಪುನರ್‌ಸ್ಥಾಪಿಸಲು ಕಾಂಗ್ರೆಸ್‌ಗೆ ಉತ್ತಮ ವೇ ತೆರೆದುಕೊಂಡಿದೆ. ಆದರೆ ಬಣ ರಾಜಕಾರಣಗಳ ಮೇಲಾಟದಿಂದ ಕಾಶವನ್ನು ಕಾಂಗ್ರೆಸ್ ಸಮರ್ಪಕವಾಗಿ ಬಳಸಿಕೊಳ್ಳುತ್ತಿಲ್ಲ ಎಂಬ ಕೊರಗು ಕಾರ್ಯಕರ್ತರನ್ನೇ ಕಾಡುತ್ತಿದೆ. ಇಂತಹ ಸಂದರ್ಭದಲ್ಲಿ ಪರಿಷತ್ ಣೆಯ ಪೈಪೋಟಿಗೆ ಕೊಂಡಯ್ಯ ಮತ್ತು ಸೂರ್ಯನಾರಾಯಣ ಂತಹ ಸಮಯಸಾಧಕರೇ ಗಂಟುಬಿದ್ದಿರುವುದರಿಂದ ಪಕ್ಷದ ಪಾಲಿಗೆ ಿ, ಇತ್ತ ಪುಲಿ ಎಂಬ ಸಂಕಟಕ್ಕಿಟ್ಟುಕೊಂಡಿದೆ. ಪಕ್ಷದ ದೀರ್ಘಕಾಲೀನ ಲತೆಯ ದೃಷ್ಟಿಯಿಂದ ಇವರಿಬ್ಬರನ್ನೂ ಸೈಡ್‌ವಿಂಗ್‌ಗೆ ತಳ್ಳಿ, ಪಕ್ಷದ ನ್ನು ಹೆಚ್ಚಿಸುವಂತಹ ಮೂರನೇ ಮುಖಕ್ಕೆ ಮಣೆ ಹಾಕುವ ಗಟ್ಟಿತನವನ್ನು ಷ್ಠರು ತೋರಿಸಬೇಕಿದೆ. ಅದು ಸಾಧ್ಯವಾಗುತ್ತಾ? ಕಾದು ನೋಡಬೇಕು...

■ ಟಿ.ಎನ್.ಷಣ್ಮುಖ



ದ್ದಯರ ಒಂದೊಂದೇ ಅಪರಾತಪರಾಗಳು ಬಯಲಾಗುತ್ತಿವೆ. ಪ-ಸಿದ್ದಿಂಗರು ಕಲ್ಯಾಣಮಂಟಪದ ವ್ಯವಹಾರದಲ್ಲಿ ನಡೆಸಿರುವ ಭರ್ಜರಿ ಕಂಡು ತಹಸೀಲ್ದಾರರೇ ದಂಗು ಬಡಿದುಹೋಗಿದ್ದಾರೆ. ಕಳೆದ 22 ಂದ ದೇವಾಲಯದ ಆದಾಯದ (ಹುಂಡಿ) ಲೆಕ್ಕ ಇಲ್ಲ; ಈ 22 ಲ್ಲಿ ಒಮ್ಮೆಯೂ ಸದಸ್ಯರ ಸಭೆ ಕರೆದಿಲ್ಲ; ಕಲ್ಯಾಣಮಂಟಪದ ಬಾಡಿಗೆ ದಿ ಯಾವುದೂ ಇಲ್ಲ!

ಲ್ಲನೆಂದರೂ ಅಜಮಾಸು ಎರಡೂವರೆ ಕೋಟಿಯಷ್ಟು ಅವ್ಯವಹಾರ ಬಂದಿದೆ. ಸುಸ್ತಾದ ತಹಸೀಲ್ದಾರರು 22 ವರ್ಷದ ಲೆಕ್ಕ ಬೇಡ, ಕಳೆದ ಮೂರು ವರ್ಷಗಳ ಲೆಕ್ಕವನ್ನಾದರೂ ಕೊಡಯ್ಯ ಅಂತ ಸಂಚಾಲಕ ನಾಗರಾಜನ ಬಳಿ ಯಾವ ರಸೀದಿಯೂ ಇಲ್ಲ, ಇನ್ನು ಸ್ವಾಮಿ ಹುಂಡಿಗೆ ಬೀಳುವ ಹೂವೂ ಸ್ವಲ್ಪ ಮೊತ್ತದ್ದೇನಲ್ಲ. ಯಾವುದಕ್ಕೂ ರೂಪದ ದಾಖಲೆಗಳಿಲ್ಲದೇ ಕುಂತುಂಡು ಎದ್ದ ನಾಗರಾಜ ಮತ್ತು ನನ್ನು ತನಿಖೆಯ ಕುಣಿಕೆ ಮುಂದೆ ಎದುಸಿರುಬಿಡುತ್ತಿದ್ದಾರೆ. ಹೇಗಾದರು ವರಿಂದ ಬಚಾವಾಗಲು ಹವಣಿಸಿದ್ದ ನಾಗರಾಜ ತಹಸೀಲ್ದಾರ್ ಯವರಿಗೇ ಲಂಚ ನೀಡಲು ಹೋಗಿ ಮುಖದ ಮೇಲೆ ನೀರಿಳಿಸಿಕೊಂಡಿದ್ದೂ ದು ತಿಂಗಳಿಂದ ಕಲ್ಯಾಣ ಮಂಟಪದ ಗೇಟಿಗೆ ಬೀಗ ಜಡಿಯಲಾಗಿದೆ. ವಿನೂ ನಾಗರಾಜ-ಸಿದ್ದಿಂಗ ಜೋಡಿಗೆ ಬರಗೇರಪ್ಪನ ಕಾಸಿನ ಮೇಲಿನ ಕಳಚಿ ಬಿದ್ದಂತೆ ಕಾಣಿಸುತ್ತಿಲ್ಲ, ಏಕೆಂದರೆ ತನಿಖೆ ಪ್ರಗತಿಯ ದಿದ್ದು ತಮ್ಮ ತಪ್ಪುಗಳು ಸಾಬೀತಾಗುವ ಸಾಧ್ಯತೆಗಳು ದಟ್ಟವಾಗಿದ್ದರೂ 06.06.2015ರಂದು ಸಂಚಾಲಕ ಮತ್ತು ಅಧ್ಯಕ್ಷರ ಜಂಟಿ ದ್ದ 7.88 ಲಕ್ಷವನ್ನು (ಮರ್ಚೆಂಟ್ಸ್ ಬ್ಯಾಂಕಿನ ಖಾತೆ ನಂಬರ್) ಮಾಡಿಕೊಂಡು ನುಂಗಿದ್ದಾರೆ. ಇವರಿಬ್ಬರೂ ಈ ಮುಕ್ತಾಟವನ್ನು ನೋಡಿ ಬರಗೇರಪ್ಪನಿಗೇ ಚಳಿಜ್ವರ ಬಂದಿದ್ದರೂ ಅಚ್ಚರಿಯಿಲ್ಲ!

■ ಟಿ.ಎನ್.ಷಣ್ಮುಖ

ಧಾರವಾಡದ ಟ್ರಸ್ಟುಗಳಲ್ಲಿ ವಿಪ್ರೋತ್ತಮರ ಭೋಜನ!

ಥೂತ್ತೇರಿ

▸ ಯಾಹೂ

ಧಾರವಾಡ ಪ್ರಾಂತ್ಯದಲ್ಲಿ ತುಂಬಾ ಟ್ರಸ್ಟುಗಳಿವೆ. ಅತ್ತ ಗೋಕಾಕರ ಟ್ರಸ್ಟ್‌ನಿಂದ ಹಿಡಿದು ಇತ್ತ ಬಸವರಾಜ ಕಟ್ಟೀಮನಿ ಟ್ರಸ್ಟ್‌ವರೆಗೂ ಏಳೆಂಟು ಟ್ರಸ್ಟುಗಳು ಸಕ್ರಿಯವಾಗಿ ಭೋಜನ ಕಾರ್ಯಕ್ರಮಗಳನ್ನು ನಡೆಸಿಕೊಂಡು ಬರುತ್ತಿವೆ. ಅಚ್ಚರಿ ಎಂದರೆ, ಎಲ್ಲಾ ಟ್ರಸ್ಟುಗಳಲ್ಲೂ ಭೋಜನಪ್ರಿಯ ವಿಪ್ರೋತ್ತಮರೇ ತುಂಬಿಕೊಂಡಿದ್ದಾರೆ. ಪ್ರತಿವರ್ಷ ಸರಕಾರದಿಂದ ಬರೋಬ್ಬರಿ ಹನ್ನೆರಡು ಲಕ್ಷ ಸಂದಾಯವಾಗುವ ಕಾರಣಕ್ಕೆ ಆ ಟ್ರಸ್ಟುಗಳಲ್ಲಿ ವಿಪ್ರೋತ್ತಮರ ಜೊತೆಗೆ ಶರಣರೂ ಸೇರಿಕೊಂಡಿದ್ದಾರೆ. ಅಹಿಂದ ಸರಕಾರವೆಂದು ಕೂಗಿಕೊಳ್ಳುವ ಸದರಿ ಸರಕಾರದ ಘೋಷಣೆಯನ್ನು ಕೇಳಿ ನಗುತ್ತಿರುವ ಅವರೆಲ್ಲರೂ "ಸದ್ಯ ಈ ಸರ್ಕಾರ ನಮ್ಮ ತಂಟೆಗೆ ಬಂದಿಲ್ಲ" ಎಂಬ ನೆಮ್ಮದಿಯಲ್ಲೂ ಇದ್ದಾರೆ.

ಆದರೆ ಎಂ.ಎಂ.ಕಲಬುರ್ಗಿಯವರ ಕೊಲೆಯ ನಂತರ ಇಲ್ಲಿನ ಹಲವು ಟ್ರಸ್ಟ್‌ನ ವ್ಯಕ್ತಿಗಳು ಸಣ್ಣ ತನಿಖೆಗೆ ತುತ್ತಾಗಿದ್ದಾರೆ. ಹಿಂದೊಮ್ಮೆ ಇಂತಹ ಒಂದು ಟ್ರಸ್ಟ್‌ನ ಸದಸ್ಯೆಯಾಗಿದ್ದ ಸರ್ಕಾರಿ ಅಧಿಕಾರಿಣಿಯೊಬ್ಬರು ಕಾರ್ ಡ್ರೈವರ್ ಜೊತೆ ವಿಶ್ರಾಂತಿ ಪಡೆಯುತ್ತಿರುವ ಸಮಯದಲ್ಲೇ ಕಲಬುರ್ಗಿಯವರಿಗೆ ಸಿಕ್ಕಿಬಿದ್ದಿದ್ದರಂತೆ. ಮಾನವತಾವಾದಿಗಳ ಹೆಸರಿನಲ್ಲಿರುವ ಇಂತಹ ಟ್ರಸ್ಟ್‌ಗಳಲ್ಲಿ ಸೇರಿಕೊಂಡಿರುವ ಈ ಮೇಲ್ಜಾತಿ ಹೆಗ್ಗಣಗಳನ್ನು ಕಲಬುರ್ಗಿ ಒದ್ದೋಡಿಸಿದ್ದರಂತೆ. ಅನೈತಿಕತೆ ಕಂಡು ಅಸಮಾಧಾನಗೊಳ್ಳುತ್ತಿದ್ದ ಕಲಬುರ್ಗಿ ಆತ್ಮಕ್ಕೆ ಶಾಂತಿ ಸಿಗಬೇಕಾದರೆ ಮೊದಲು ಇಂತಹ ಟ್ರಸ್ಟ್‌ಗಳನ್ನು ಸರಿಪಡಿಸಬೇಕೆಂಬುದು ಚಂಪಾ ಕಡೆಯವರ ಅಭಿಪ್ರಾಯವಾಗಿದೆಯಲ್ಲಾ, ಥೂತ್ತೇರಿ!

* * *

ವಚನಗಳ ಮೂಲಕ ಬಸವಣ್ಣ ಕ್ರಾಂತಿ ಮಾಡಿದ್ದರು. ಅದರಂತೆ ವಚನಗಳ ಅಧ್ಯಯನ ಮಾಡಿ ಪುರೋಹಿತಶಾಹಿಗಳ ಗುಲಾಮರಾಗಿರುವವರಿಗೆ ನಿಜವಾದ ಬಸವಧರ್ಮ ಹೇಳಲು ಹೊರಟಿದ್ದ ಎಂ.ಎಂ.ಕಲಬುರ್ಗಿಯವರ ಹತ್ಯೆ ನಡೆದಿದೆ. ಕಲಬುರ್ಗಿಯವರು ಯಾರಿಗೆ ಹೊರೆಯಾಗಿದ್ದರೆಂದು ತನಿಖೆ ನಡೆಸಲು ಹೊರಟ ಪೊಲೀಸರಿಗೆ ಕಲಬುರ್ಗಿಯವರ ಸಾಹಿತ್ಯ ಮತ್ತು ಅದರ ವಿರುದ್ಧ ಸೇಡು ತೀರಿಸಿಕೊಳ್ಳಲು ಹೊರಟಿರುವ ಪುರೋಹಿತ ಪಿಂಡಗಳು ಕಾಣುತ್ತಿವೆಯಂತಲ್ಲಾ. ಆದರೇನು, ಅಗೋಚರ ಜಾಗದಲ್ಲಿ ನಡೆದಿರುವ ಷಡ್ಯಂತ್ರದಿಂದ, ಅಗೋಚರ ವ್ಯಕ್ತಿಯೊಂದು ಹಠಾತ್ತನೆ ಹದ್ದಿನಂತೆ ಎರಗಿ ಶ್ರೇಷ್ಠ ಶರಣನ ಹಣೆಗೆ ಗುಂಡಿಕ್ಕಿ ಪರಾರಿಯಾಗಿರುವುದು ಕಗ್ಗಂಟಾಗಿ ಪರಿಣಮಿಸಿದೆಯಂತಲ್ಲಾ. ಈಗ ನಮ್ಮ ಮುಂದಿರುವುದು, ಕಲಬುರ್ಗಿ ಅವರ ಸಾಹಿತ್ಯವನ್ನು ಪ್ರತಿಷ್ಠಾಪಿಸಿ ಅದರ ಐಡಿಯಾಗಳನ್ನೇ ಹಾಸುಹೊಕ್ಕಾಗಿಸಿಕೊಳ್ಳುವುದು. ಆಗ ನಿಜವಾದ ಅಪರಾಧಿ ಹಡೆ ಬೀದಿಗೆ ಬರುವುದರಲ್ಲಿ ಸಂಶಯವಿಲ್ಲವಂತಲ್ಲಾ, ಥೂತ್ತೇರಿ!!


* * *

ನಮ್ಮ ಗೌರವಾನ್ವಿತ ಕೋರ್ಟಿನಿಂದ ಮತ್ತೊಮ್ಮೆ ನಾವೆಲ್ಲಾ ನ್ಯಾಯಾಂಗದ ಬಗ್ಗೆ ಇನ್ನೂ ಹೆಚ್ಚು ಗೌರವ ಬೆಳೆಸಿಕೊಳ್ಳುವಂತಹ ತೀರ್ಪು ಹೊರಬಿದ್ದಿದೆಯಂತಲ್ಲಾ. ಅತ್ಯಾಚಾರ ಆರೋಪದಿಂದ ಕಂಗಾಲಾಗಿದ್ದ ಚಿತ್ರದುರ್ಗ ಜಿಲ್ಲೆಯ ಲಂಬಾಣಿ ಸ್ವಾಮಿಯನ್ನು ದನವನ್ನು ದೊಡ್ಡಿಗೆ ದಬ್ಬಿದಂತೆ ದೂಡಿದ್ದ ಘನ ನ್ಯಾಯಾಲಯ, ಅಂತದೇ ಆರೋಪ ಹೊತ್ತ ಶ್ರೀಶ್ರೀಶ್ರೀ ರಾಘವೇಶ್ವರ ಸ್ವಾಮಿಗಳಿಗೆ ಎರಡನೇ ಬಾರಿಯೂ ಜಾಮೀನು ಮಂಜೂರು ಮಾಡಿದೆಯಂತಲ್ಲಾ. ಇದನ್ನು ಕಂಡು ಕುಣಿದು ಕುಪ್ಪಳಿಸಿದ ಕೆಲ ಹವ್ಯಕ ಯುವಕರು "ಅಷ್ಟಕ್ಕೂ ಇಲ್ಲಿರುವ ಯಾವ ಕಾನೂನುಗಳೂ ನಮಗೆ ಅನ್ವಯಿಸುವುದಿಲ್ಲ, ಸಂವಿಧಾನ ಕೂಡ. ಈಗ ಇರುವ ನ್ಯಾಯಾಲಯಗಳ ವಿರುದ್ಧವೇ ಚಿಲ್ಲಿಯಂನಿಂದ ನಮ್ಮ ಬಾಲಗಂಗಾಧರ ಬಂದು ಸೆಮಿನಾರು ಮಾಡಿದ್ದು" ಎಂದು ಹೆಮ್ಮೆಯಿಂದ ಹೇಳುತ್ತಿವೆಯಂತಲ್ಲಾ. ಇಂತಹ ಸಮಯದಲ್ಲೇ ಹರಕುಬಾಯಿ ಪ್ರಮೀಳೆಯೊಬ್ಬಳು ಮತ್ತವಳ ಗೆಳತಿ ಅತ್ಯಾಚಾರಕ್ಕೊಳಗಾದ ಹೆಣ್ಣುಮಕ್ಕಳನ್ನೇ ಶೂರ್ಪನಖಿಯರೆಂದು ಜರಿದರಂತಲ್ಲಾ. "ನಮ್ಮ ರಾಘವೇಶ್ವರರು ರಾಮನಿದ್ದಂತೆ. ಅವರು ಯಾವತ್ತಿಗೂ ಏಕಪತ್ನಿ ವ್ರತಸ್ಥರು! ಅವರ ವಿರುದ್ಧ ದೂರುತ್ತಿರುವವಳು ನಿಜಕ್ಕೂ ಶೂರ್ಪನಖಿ" ಎಂದು ಮಂಥರೆ ಮತ್ತು ಕೈಕೆಯಂತೆ ಒಟ್ಟಾಗಿ ಕೂಗಿದರಂತಲ್ಲಾ, ಥೂತ್ತೇರಿ!!

* * *

ಇತ್ತ ನಮ್ಮ ಬೆಂಗಳೂರಿನ ಕಾರ್ಪೊರೇಷನ್ ಸಂಗತಿಗಳು ಶಾನೆ ಮಜವಾಗಿವೆಯಲ್ಲಾ. 'ಹಂದಿ ಇರುವ ಚಂದಕ್ಕೆ ಹಾಳುಗೋಡೆ ಜರಿಯಿತು' ಎಂಬ ಹಳ್ಳಿ ಗಾದೆಮಾತಿನಂತೆ ತಾನಿರುವ ಸ್ಥಿತಿಯನ್ನು ಮರೆತುಬಿಟ್ಟ ಜಗ್ಗೇಶ್ ಎಂಬ ನಟ, ಕಾಂಗ್ರೆಸ್ ಪಕ್ಷವನ್ನು ಬಿಟ್ಟಮ್ಮ ಸ್ನಾ ಲಿಯೋನ್‌ಗೆ ಹೋಲಿಸಿದನಂತಲ್ಲಾ. ಈ ಮಹಾನ್ ನಟನ ಫ್ಲಾಶ್‌ಬ್ಯಾಕ್ ಭಲೇ ಮಜವಾಗಿದೆಯಲ್ಲಾ! ತುರುವೇಕೆರೆಗೆ ಕಾಂಗ್ರೆಸ್ ಟಿಕೆಟ್ ಕೊಡಲಿಲ್ಲ ಎಂದು ಸಂತೆಯಲ್ಲಿ ಎಮ್ಮೆ ಕರುವಿನಂತೆ ಈತ ಅತ್ತುಕರೆದಿದ್ದ. ಅದನ್ನು ನೋಡಲಾಗದ ಕಾಂಗ್ರೆಸ್ ಕಡೆಗೂ ಟಿಕೆಟ್ ಕೊಟ್ಟಿತ್ತು. ಚುನಾವಣೆಯಲ್ಲಿ ಗೆದ್ದ ಜಗ್ಗೇಶ್ ಆನಂತರ ಆಪರೇಷನ್ ಕಮಲಕ್ಕೆ ತುತ್ತಾಗಿ ಮನೆಯಲ್ಲಿ ಅವಿತುಕೊಂಡಿದ್ದನಲ್ಲ. ಈ ಸುದ್ದಿ ಕೇಳಿದ ಕಾಗೋಡು ತಿಮ್ಮಪ್ಪನವರ ಟೀಮು ಜಗ್ಗೇಶ್ ಮನೆಯ ಹತ್ತಿರಕ್ಕೆ ಹೋದಾಗ, ಜಗ್ಗೇಶ್ ಮುಸಿಯನಂತೆ ಗೋಡೆ ಹಾರಿದ್ದನಂತಲ್ಲ. ಅಲ್ಲಿಂದ ಮನೆಯಿಂದ ಮನೆಗೆ ಹಾರುತ್ತ ಹೋದ ಈತ ಕಡೆಗೂ ಸಿಕ್ಕಿದ್ದು ಅಶೋಕ್ ಮನೆಯಲ್ಲಿ. ಈತ ಬಂದರೆ ಸಾಕು ಅನಾಗರಿಕನ ದರ್ಶನವಾದಂತೆ ಡಾ. ರಾಜ್‌ಕುಮಾರ್ ಬೆಚ್ಚುತ್ತಿದ್ದರು. ಅಂಬರೀಶ್‌ನಂತೂ ಇದನ್ನು 'ಲೇ ಸ್ಲಮ್ಮು' ಎಂದೇ ಕರೆಯುತ್ತಿದ್ದನ್ನು. ಅಂತಹವನು ಕಾಂಗ್ರೆಸನವರನ್ನು ಸನ್ನಿ ಲಿಯೋನ್‌ಗೆ ಹೋಲಿಸಿದ್ದಾನಲ್ಲ, ಇದಲ್ಲವೆ ತಮಾಷೆ, ಥೂತ್ತೇರಿ!!

* * *



ಹದಿನಾಲ್ಕು ಸೀಟು ಪಡೆದು ಬಿಬಿಎಂಪಿಯಲ್ಲಿ ಪಾಲು ಪಡೆಯುತ್ತಿರುವ ಕುಮಾರಣ್ಣನನ್ನು ಮಾತನಾಡಿಸಿದರೆ ಹೇಗೆ ಅನ್ನಿಸಿತು. ಆ ಕೂಡಲೇ ಫೋನ್ ಮಾಡಿದರೆ ರಿಂಗಾಯ್ತು.

ರಿಂಗ್ ಟೋನ್: "ಭಲೆ ಚಾನ್ಸಿದೆ ಲಕ್ಕಿ ಚಾನ್ಸಿದೆ.... ಲಲ್ಲಲಾವ್... ಲಲ್ಲಲಾವ್.... ಲಕ್ಕಿ ಚಾನ್ಸಿದೆ."

"ಹಲೋ ಯಾರೂ?"

"ಕುಮಾರಣ್ಣಾರೆ, ನಾನು ಯಾಹೂ."

"ಹೇಳಿ ಯಾಹು ಅವ್ರೆ ಏನ್ ಸಮಾಚಾರ?"

"ಯಲ್ಲಾ ನೀವೇ ಹೇಳಬೇಕು ಸಾರ್. ಚಿಕ್ಕಮಗಳೂರು ರೆಸಾರ್ಟು ಯಂಗಿತ್ತು?"

"ಚನ್ನಾಗಿತ್ತು, ನಮ್ಮ ಭೋಜೇಗೌಡ ಚನ್ನಾಗಿ ಅರೇಂಜ್ ಮಾಡಿದ್ದ."

"ಅವುನಿರದೆ ಅದಕಲವ ಸಾರ್. ಅಂತೂ ಚಿಕ್ಕಮಗಳೂರು ವಾಸ್ತವ್ಯದಿಂದ ನಿಮ್ಮ ಕೆನ್ನೆ ಮಿಂಚತಾ ಅವೆ."

"ನೀವೇನು ರಾಧಿಕನ ತರ ಹೇಳ್ತಿರಲ್ರಿ."

"ಮನಸಿನೊಳಗಡೆ ಖುಷಿ ಇದ್ದಾಗ ಕೆನ್ನೆ ಮಿಂಚತವೆ ಸಾರ್."

"ಹಾಗಂತಿರ?"

"ಹೌದು ಮತ್ತೆ, ಒಬ್ಬ ಮಾಜಿ ಪ್ರಧಾನಿ ಮತ್ತು ಮಾಜಿ ಮುಖ್ಯಮಂತ್ರಿ ಸೇರಿಕೊಂಡು ನಡೆಸಿದ ಬಿಬಿಎಂಪಿ ಚುನಾವಣೇಲಿ ಕೇವಲ 14 ಸೀಟು ಬಂತು ಅಂದ್ರೆ ಯಾರಿಗಾದ್ರು ಶಾಕ್ ಆಗುತ್ತೆ ಸಾರ್. ಆದ್ರು ನೀವು ಅಧಿಕಾರದ ಹತ್ರ ಬಂದ್ರಿ. ಅದ್ಕೆ ಕೆನ್ನೆ ಮಿಂಚೋದು."

"ನಾವೇನು ಅವರ ತಂಟೆಗೋಗಿರಲಿಲ್ಲ ಕಂಡ್ರಿ. ಅವ್ರೆ ಬಂದ್ರು."

"ಯಾರೇ ಬಂದ್ರೂ ಇಬ್ರೂ ಸೇರಿಕೊಬೇಕಲ್ಲವ ಸಾರ್. ಆ ಮನೆಹಾಳ ಬಿಜೆಪಿ ದೂರ ಇಟ್ಟಿದ್ದಕ್ಕೆ ಥ್ಯಾಂಕ್ಸ್."

"ಅವ್ರುರು ಮನೆಹಾಳ್ರ?"

"ಇದೇನು ಸಾರ್ ಹಿಂಕೇಳ್ತಿರಿ? ಆ ಪಾರ್ಟಿ ಓಟರ್ಸ್ ಕೂಡ ಅಂಗೇ ಆಗ್ಯವ್ರೆ. ಅವ್ರ ಜೊತೆ ಇದ್ದೂ ನೀವು ಅವ್ರೇನು ಅಂತ ತಿಳಕೊಂಡಿಲ್ಲ."

"ತಿಳಕೊಂಡಿದ್ದಿನಿ ಕಂಡ್ರಿ. ಅದ್ಕೆ ಅಲವ ಕಾಂಗ್ರೆಸ್‌ಗೆ ಐದೋರ್ಷ ಅನ್‌ಕಂಡೀಷನ್ ಸಪೋರ್ಟ್ ಕೊಟ್ಟಿದ್ದು."

"ಇಷ್ಟು ಕೆಟ್ಟದಾಗಿ ಯಂಗೆ ಸೋತ್ರಿ ಸಾರ್?"

"ಕ್ಯಟ್ಟದಾಗೇನು ಸೋತಿಲ್ಲ ಕಂಡ್ರಿ. ನಮ್ಮ ಕ್ಯಾಂಡೇಟ್‌ಗಳಿಗೆ ನಾವು ದುಡ್ಡು ಕೊಡ್ಲಿಲ್ಲ, ಸೋತೊ."

"ಹೌದಾ ಸಾರ್?"

"ಹೌದು ಕಂಡ್ರಿ. ನೀವೆಷ್ಟು ಜನಗಳಾದ್ರು ಇರಿ, ನಿಮ್ಮ ಮನೆಗೆ ನಾವು ಒಂದೂವರೆ ಸಾವಿರ ಕೊಡ್ತೀವಿ ಅಂತ ಬಿಜೆಪಿಗಳು ಅದೇ ರೀತಿ ತಂದು ಹಣ ಕೊಟ್ರು. ಕಾಂಗ್ರೆಸ್‌ನವರೂ ಕೊಟ್ರು. ನಾವು ಏನೂ ಕೊಡ್ಲಿಲ್ಲ, ಅದ್ಕೆ 14 ಸೀಟು ಬಂದೊ."

"ನಿಮ್ಮವರು ಕೊಟ್ಟಿದ್ದಕ್ಕೆ ನನ್ನತ್ರ ದಾಖಲೆ ಇದೆ ಸಾರ್."

"ಯಾರೊ ಒಬ್ರು ಇಬ್ರು ಕೊಟ್ಟಿರಬಹುದು."

"ಯಲ್ರು ಕೊಟ್ಟವ್ರೆ ಸಾರ್. ಆದ್ರು ನನ್ನ ಲೆಕ್ಕಾಚಾರದ ಪ್ರಕಾರ ಬೆಂಗಳೂರಲ್ಲಿ ಇರೋ ಒಕ್ಕಲಿಗರ ಸಂಖ್ಯೆ ನೋಡಿದ್ರೆ ನಿಮಗೆ ಕನಿಷ್ಠ 40 ಸೀಟು ಬರಬೇಕಾಗಿತ್ತು. ಆದ್ರೆ 14 ಸೀಟು ಬಂತು ಅಂದ್ರೆ ಬೆಂಗಳೂರಿನ ಒಕ್ಕಲಿಗರು ಅಶೋಕನ ಹಿಂದೆ ಹೋಗಿದಾರೆ ಸಾರ್."

"ಹಾಗಂತಿರ?"

"ಹೌದು ಸಾರ್. ನಿಮ್ಮ ಜೆಡಿಎಸ್ ಜನ ಯಾವುದೇ ಕೆಲಸ ಆಗಬೇಕಾದ್ರೂ ಅಶೋಕಣ್ಣನತ್ರ ಹೋಯ್ತಿವಿ ಅಂತರೆ. ಅಲ್ಲಿಗೆ ಹೋಗಿ ತಮ್ಮ ಕೆಲಸ ಮಾಡಿಸಿಗ್ತರೆ. ಇದನ್ನ ನಾನೇ ನೋಡಿದ್ದೀನಿ."

"ಅದು ನಮ್ಮ ತಂದೆಯವರಿಗೂ ಗೊತ್ತು. ಅದ್ಕೆ ಅಶೋಕನ ಆಟಾನ ನಿಲ್ಲಿಸೋದಕ್ಕೆ ಕಾಂಗ್ರೆಸ್ಸಿಗೆ ಸಪೋರ್ಟು ಮಾಡು ಅಂದ್ರು."

"ಥೂತ್ತೇರಿ!"



ಕೆಕ್ಕಾರ ಮಠದಲ್ಲಿ ವಾಮಾಚಾರ?

ರಾಮಚಂದ್ರಾಪುರ ಮಠದ ಬಿರ್ನಾಸ್ ಸ್ವಾಮಿ ಈಗ ಪೆದ್ದು ಹವ್ಯಕ ಸಮೂಹಕಷ್ಟೇ ಗುರುವಾಗಿ ಉಳಿದಿದ್ದಾನೆ. ಪ್ರೇಮಲತಾ ಮಾನಭಂಗ ಪುರಾಣ ರಾಘುನ ರಾಕ್ಷಸ ರತಿರಹಸ್ಯವನ್ನು ಸಾಕ್ಷ್ಯಾಧಾರ ಸಮೇತ ಬಿಚ್ಚಿಟ್ಟಾಗಲೂ "ನಮ್ಮ ಗುರು ಅಂಥೋರಲ್ಲ..." ಎಂದವರೇ 'ಪ್ರಬಲಾ' ಅತ್ಯಾಚಾರ ಪಾತಕ ಬಯಲಿಗೆ ಬೀಳುತ್ತಿದ್ದಂತೆಯೇ "ಸ್ವಾಮಿಯೇ ಸರಿಯಿಲ್ಲ..." ಎಂದು ಬಾಯ್ಬಾಯಿ ಬಡಿದು ಕೊಳ್ಳುತ್ತಿದ್ದಾರೆ. ಹವ್ಯಕರು ಹೆಂಗಸರು-ಬಾಲಕಿಯರನ್ನು ರಾಘು ದರ್ಶನಕ್ಕೆ ಕಳಿಸಲು ಹೆದರುತ್ತಿದ್ದಾರೆ. ಕಾನೂನು ಕತ್ತೆಯಾಗಿಸಿ ರೇಪ್ ಕೇಸ್‌ಗಳನ್ನು ಠುಸ್ ಮಾಡಲು ರಾಘು ಅದೆಷ್ಟೇ ತಿಪ್ಪರಲಾಗ ಹಾಕಿದರೂ ಹವ್ಯಕ ವಲಯದಲ್ಲಿ ಮಾತ್ರ ಆತನ ಮಾನ ಹರಾಜಾಗುತ್ತಿದೆ....

ಸಾಮ-ಭೇದ-ದಂಡಗಳಿಂದ ವಿರೋಧಿಗಳ ಮಟ್ಟ ಹಾಕಲು ಮಸಲತ್ತು ಮಾಡುವ ರಾಘುಗೆ ಶತ್ರುನಿಗ್ರಹ



ರಾಘು ಸ್ವಾಮಿ

ವಾಮಾಚಾರ, ಪೂರ್ಣಾಹುತಿ ಹೋಮ-ಹವನಗಳಲ್ಲಿ ನಂಬಿಕೆ ಯಾವಾಗಲೂ ಜಾಸ್ತಿ. ಸಾಗರದ ಚದರಳ್ಳಿಯ ಪುಂಡ ಪೋರ ಹರೀಶ್‌ಶರ್ಮ ರಾಘವೇಶ್ವರ ಭಾರತಿಯಾಗಿ ಸಾತ್ವಿಕ ಬ್ರಾಹ್ಮಣರ ಮಠಾಧೀಶನಾದ ನಂತರವೂ ಪೂರ್ವಾಶ್ರಮದ ಪರಾಕ್ರಮ ನಿಲ್ಲಿಸಲಿಲ್ಲ! ಕಾವಿ ತೊಟ್ಟ ನಂತರ ಕಡಿಮೆಯಾಗಬೇಕಿದ್ದ ಅಡ್ಡ ದಾರಿ ಆಕರ್ಷಣೆ ಹರೀಶಪ್ಪನಿಗೆ ಹೆಚ್ಚೇ ಆಯ್ತು, ಸ್ವಾಮಿಯಾಗಿ ಅವತರಿಸಿದ ಕೆಲವೇ ದಿನದಲ್ಲಿ ಕುರಿ ಸಿಗಿದು ಯಜ್ಞ ಕುಂಡಕ್ಕೆ ಹಾಕಿ ಅದರ ಬೂದಿ ಮುಕ್ಕಿದ್ದ ರಾಘು ವರ್ಚಸ್ಸು ವೃದ್ಧಿಗೆ ಆಗಾಗ ಮಾಟ-ಮಂತ್ರ-ತಂತ್ರಗಳಲ್ಲಿ ತೊಡಗಿಸಿಕೊಳ್ಳೋದು ಸರ್ವೇಸಾಮಾನ್ಯ ಆಗಿಹೋಯ್ತು.

ಶತ್ರುಸಂಹಾರ ಹೋಮ

ಬರೋಬ್ಬರಿ ಒಂದು ವರ್ಷದ ಹಿಂದೆ ರಾಘುನ ಸ್ತ್ರೀ ಸ್ವಾಹಾ ಕಥಾ ಅಸ್ಫೋಟಿಸಿತ್ತಲ್ಲ! ಆಗಾತ ನ್ಯಾಯಾಲಯಗಳನ್ನೇ ದಿಕ್ಕುಗೆಡಿಸಿದ್ದ; ಮಠದ ಹುಂಡಿ ಖಾಲಿಯಾಗುವಷ್ಟು ಕರಾಮತ್ತು ಎಲ್ಲೆಲ್ಲಿ ಬೇಕೋ ಅಲ್ಲೆಲ್ಲ ಮಾಡಿದ್ದ. ಆಳುವವರು, ಸಿಐಡಿ, ಪೊಲೀಸರು, ಕೇಡಿ ಪತ್ರಕರ್ತರನ್ನೆಲ್ಲ ಬಳಸಿಕೊಂಡು ಬಂಧನದಿಂದ ಬಚಾವಾಗಲು ತಿಪ್ಪರಲಾಗ ಹಾಕಿದ್ದ. ರಾಘುನ ರಾಮಾವತಾರ ದಾಳಿ ಸಂತ್ರಸ್ತೆಯ ಗಂಡನ ತಮ್ಮನನ್ನೇ ಕೊಂದು ಮಠಕ್ಕೆ ರಕ್ತತರ್ಪಣ ನೀಡಿದ್ದ; ಇದ್ಯಾವುದರಿಂದಲೂ ನೆಮ್ಮದಿಯ ನಿದ್ರೆ ಬರಲಿಲ್ಲ, ಆಗಾತ ವಾಮಾಚಾರಕ್ಕೆ ಮೊರೆ ಹೋಗಿದ್ದ. ಅದವನ ಮೂಲ ಗುಣಧರ್ಮ! ಕೋರ್ಟು-ಸಿಐಡಿ ಕಚೇರಿಗಳಲ್ಲಿ ಜಯ ಸಿಗಲಿ, ಕೇಸ್ ಹಳ್ಳ ಹಿಡಿದು ತಾನು ಸುಬಗ ಸನ್ಯಾಸಿಯೆಂದು ಜನ ನಂಬಲಿ ಎಂದು ರಾಘು ಕೇರಳ, ತಮಿಳುನಾಡು, ಉತ್ತರ ಕನ್ನಡ ಮತ್ತು ದಕ್ಷಿಣ ಕನ್ನಡದ ಕಾಡು-ದೇವಸ್ಥಾನಗಳಲ್ಲಿ ಮಾಟ-ಮಂತ್ರ ಮಾಡಿಸಿದ್ದ. ಲಕ್ಷಾಂತರ ರೂ. ವ್ಯಯಿಸಿ ರಾಘು ಮಾಡಿಸಿದ್ದ ವಾಮಾಚಾರ ಹೊಗೆ ಮಾತ್ರ ಆತನ ನಿಷ್ಠಾವಂತ ತಾಲಿಬಾನಿ ಮಾಣಿಗಳಿಂದ ಮುಚ್ಚಿಡಲಾಗಲೇ ಇಲ್ಲ...

ಭಟ್ಕಳ-ಸಾಗರ ಗಡಿಯ ಕಿತ್ರೆ ದುರ್ಗಾ ಪರಮೇಶ್ವರಿ ದೇವಸ್ಥಾನದಲ್ಲಿ ಶತ್ರು ಸಂಹಾರ, ಸಿಐಡಿ ಅಧಿಕಾರಿಗಳ ವಶೀಕರಣ, ನ್ಯಾಯಾಲಯಗಳಲ್ಲಿ ಜಯದ ಸಂಕಲ್ಪ ಇಟ್ಟುಕೊಂಡು ರಾಘು ಬಳಗ ದೊಡ್ಡ ಹೋಮ-ಹವನ ರಾತ್ರಿ-ಹಗಲು ಮಾಡಿತ್ತು, ಹೈಕೋರ್ಟ್ ವಿಭಾಗೀಯ ಪೀಠ ರಾಘುನ ರೇಪ್ ಪ್ರಕರಣ ವಜಾ ಮಾಡಲು ನಿರಾಕರಿಸು ತ್ತಿದ್ದಂತೆಯೇ ಮತ್ತೊಂದು ವಾಮಾಚಾರದ ಸ್ಕೆಚ್ ಹಾಕ ಲಾಗಿತ್ತು, ಬಂಧನದ ಭೀತಿಯಿಂದ ಕಂಗಾಲಾಗಿದ್ದ ರಾಘು ಭೂಗತನಾಗಿಬಿಟ್ಟಿದ್ದ, ಆತ ಆಗ ತಲೆ ಮರೆಸಿಕೊಂಡಿದ್ದ, ಪುತ್ತೂರಿನ ರಹಸ್ಯ ಸ್ಥಳದಲ್ಲಿ ಅಲ್ಲಾತ 'ಬಗಲ್ ಮುಕ್ತಿ ಹೋಮ' ಹೆಸರಿನ ಮಾಟ-ಮಂತ್ರ-ತಂತ್ರದಲ್ಲಿ ನಿರತನಾಗಿದ್ದ.

ರಾಘುಗೆ ಮಂತ್ರವಾದ ಹೇಳಿಕೊಡುತ್ತಿದ್ದ ಉಡುಪಿ ಮಲೆ ಗೋಪಾಲ-ಕೃಷ್ಣಭಟ್ಟ ಎಂಬ 'ಮಹಾ ತಂತ್ರಿ' ನೇತೃತ್ವದಲ್ಲಿ ಸದ್ರಿ ವಾಮಾಚಾರ ನಡೆದಿತ್ತೆಂದು ಗುಲ್ಲಾಗಿತ್ತು. ಈ ಕೇರಳದ ಮಂತ್ರವಾದಿ ತಂಡ ಅಥರ್ವಣ ವೇದದಲ್ಲಿ ಪಾರಂಗತರೆಂಬ ಕುಖ್ಯಾತಿಯೂ ಇದೆ. ರಾಘುನ ಮೇಲೆ ಪ್ರಬಲಾ ಪೊಲೀಸ್ ಕಂಪ್ಲೇಂಟು ಕೊಡುತ್ತಿದ್ದಂತೆಯೇ ಆತನ ಬಳಗ ಕೇರಳದ ಕೊಲ್ಲಂಗಾಣದ ಮಂತ್ರವಾದಿಗಳ ಮೊರೆ ಹೋಗಿದೆ. ಹೊನ್ನಾವರದ ಕೆಕ್ಕಾರ ಎಂಬಲ್ಲಿರುವ ರಾಘುನ ರಘೋತ್ತಮ ಮಠವೆಂಬ ಬ್ರಾಂಚಾಫೀಸಿನಲ್ಲಿ ಹೋಮ-ಆಹುತಿಗಳು ನಡೆದಿದೆ. ಪ್ರೇಮಲತಾ




ಪ್ರಬಲಾ



ಪ್ರೇಮಲತಾ ದಂಪತಿ

ಪ್ರಕರಣ ಸಿಐಡಿಗೆ ವಹಿಸಿದ ಕ್ಷಣದಿಂದಲೇ ರಾಘುಗೆ ತಾನು ಬಡ ಹುಡುಗಿ ಪ್ರಬಲಾಳಿಗೆ ಮಾಡಿದ ಅನ್ಯಾಯ-ಅತ್ಯಾಚಾರದ ಭಯ ಕಾಡತೊಡಗಿತ್ತು, ಆಕೆ ಎಲ್ಲಿ ಸಿಐಡಿಗೆ ತನ್ನ ಕಾಮಾವತಾರ-ಜಾತಕ ದೋಷದ ಮಹಾತ್ಮೆ ತಿಳಿಸುವಳೋ ಎಂಬ ಆತಂಕ ಬಾಧಿಸಲಾರಂಭಿಸಿತ್ತು.



ಪ್ರೇಮಲತಾ ಕೇಸ್ ಹಳ್ಳ ಹಿಡಿಸಿದ ಸಂಭ್ರಮದಲ್ಲಿದ್ದ ರಾಘು ಮತ್ತಾತನ ಮಠ ಮಾಫಿಯಾಕ್ಕೆ ಒಂದು ವರ್ಷದ ನಂತರ ಪ್ರಬಲಾ ತಿರುಗಿ ಬೀಳಬಹುದೆಂಬ ಸಣ್ಣ ಸೂಚನೆಯೂ ಇರಲಿಲ್ಲ, ಅಂಥ ಅನುಮಾನವೇನಾದರೂ ಇದ್ದಿದ್ದರೆ ಪ್ರಬಲಾಳ ಮೇಲೂ ಸುಳ್ಳು ಕೇಸ್-ಕಾನೂನಿನ ಸಂಕಷ್ಟದಲ್ಲಿ ಸಿಲುಕಿಸದೇ ಬಿಡುತ್ತಿರಲಿಲ್ಲ ಪಾಪಿ ರಾಘು ಪಟಾಲಮ್. ಪ್ರೇಮಲತಾ ದಂಪತಿಗಳ ಮೇಲೆ ಸುಳ್ಳು ಬ್ಲಾಕ್‌ಮೇಲ್ ಕೇಸ್ ಹಾಕಿಸಿದ್ದ ರಾಘುಗೆ ಅಸಹಾಯಕ ಪ್ರಬಲಾಳ ಕಂಗೆಡಿಸೋದು ದೊಡ್ಡ ಸಂಗತಿಯೇನಾಗಿರಲಿಲ್ಲ.

ಕಾರ್ತವೀರ್ಯಾರ್ಜುನ ಹೋಮ!!

ಪ್ರಬಲಾ ಗಿರಿನಗರ ಪೊಲೀಸರಿಗೆ ರಾಘುನಿಂದಾದ ಅನ್ಯಾಯ ಮಾನಭಂಗದ ಬಗ್ಗೆ ದೂರು ಕೊಡುತ್ತಿರುವಂತೆಯೇ ಮಠದ ಮಾಣಿಗಳ ಒಂದು ಗ್ಯಾಂಗು ನಿರೀಕ್ಷಣಾ ಜಾಮೀನು, ಮತ್ತಿತರ ಕಾನೂನಿನ ಕರಾಮತ್ತಿನಲ್ಲಿ ತೊಡಗಿಕೊಂಡರೆ, ಮತ್ತೊಂದು ತಾಲಿಬಾನಿ ಪಡೆ ಮಾಟ-ಮಂತ್ರ-ತಂತ್ರಕ್ಕೆ ಅಣಿಯಾಗಿತ್ತು, ಕೇರಳದ ಕೊಲ್ಲಂಗಾಣದ 'ಮ ಭಟ್ಟ'

ಭಟ್ಕಳ-ಸಾಗರ ಗಡಿಯ ಕಿತ್ರೆ
ದುರ್ಗಾ ಪರಮೇಶ್ವರಿ
ದೇವಸ್ಥಾನದಲ್ಲಿ ಶತ್ರು ಸಂಹಾ
ಸಿಐಡಿ ಅಧಿಕಾರಿಗಳ ವಶೀಕರ
ನ್ಯಾಯಾಲಯಗಳಲ್ಲಿ ಜಯದ
ಸಂಕಲ್ಪ ಇಟ್ಟುಕೊಂಡು ರಾಘ
ಬಳಗ ದೊಡ್ಡ ಹೋಮ-ಹವ
ರಾತ್ರಿ-ಹಗಲು ಮಾಡಿತ್ತು,
ಹೈಕೋರ್ಟ್ ವಿಭಾಗೀಯ ಪೀ
ರಾಘುನ ರೇಪ್ ಪ್ರಕರಣ ವಜ
ಮಾಡಲು ನಿರಾಕರಿಸು
ತ್ತಿದ್ದಂತೆಯೇ ಮತ್ತೊಂದು
ವಾಮಾಚಾರದ ಸ್ಕೆಚ್ ಹಾಕ
ಲಾಗಿತ್ತು, ಬಂಧನದ ಭೀತಿಯಿ
ಕಂಗಾಲಾಗಿದ್ದ ರಾಘು
ಭೂಗತನಾಗಿಬಿಟ್ಟಿದ್ದ, ಆತ ಆ
ತಲೆ ಮರೆಸಿಕೊಂಡಿದ್ದ, ಪುತ್ತೂ
ರಹಸ್ಯ ಸ್ಥಳದಲ್ಲಿ ಆತ 'ಬಗಲ
ಮುಕ್ತಿ ಹೋಮ' ಹೆಸರಿನ
ಮಾಟ-ಮಂತ್ರ-ತಂತ್ರದಲ್ಲಿ
ನಿರತನಾಗಿದ್ದ.

ಎಂಬ ಮಹಾ ಮಾಟಗಾರನ ತಂಡವನ್ನು ಹೊನ್ನಾವರದ ಕೆಕ್ಕಾರ ಮಠಕ್ಕೆ ಈ ತಾಲಿಬಾನಿ ಪ... ಕರೆದುಕೊಂಡು ಬಂದಿತ್ತು, ಮೂರು ಹಗಲು-ಎರ... ರಾತ್ರಿ 'ರಕ್ಷಾಕವಚ' ಹೋಮ, ಶತ್ರುಸಂಹಾರ ಯಾ... ಕೊಲ್ಲಂಗಾಣದ ಮಂತ್ರವಾದಿಗಳು ಮಾಡಿದ್ದಾರೆ.

ಪ್ರಬಲಾಗೆ ಆಕೆಯ ಕೇಸು ತಿರುಗುಬಾಣ ಆಗಬೇಕು; ಆಕೆ ಸಮಾಜದಲ್ಲಿ ಮಾನಗೆಟ್ಟವಳೆಂದಾಗಬೇಕು. ಸಿಐಡಿಗಳು ಸ್ವಾಮಿ ತಂಟೆಗೆ ಬರಬಾರದು. ನ್ಯಾಯಾಲಯದಲ್ಲಿ ಅದಿ... ಗಡಿಗೂ ಜಯವಾಗಬೇಕು. ರಾಘು ಜೈಲು ಪಾಲ... ಬಾರದೆಂಬ ಸಂಕಲ್ಪದ ಈ ವಾಮಾಚಾರಕ್ಕೆ ಇಪ್ಪತ್ತೈ... ಲಕ್ಷಕ್ಕಿಂತ ಹೆಚ್ಚು ಖರ್ಚಾಗಿರುವ ಅನುಮಾನ ಕೆಕ್ಕಾ... ಸುತ್ತಲಿನವರಿಗೆ ಬಂದಿದೆ. ಈ ಹೋಮ-ಹವನ ಯಶಸ್ವಿಯಾದರೆ ಇನ್ನೂ ದುಬಾರಿಯಾದ ಕಾರ್ತ ವೀರ್ಯಾರ್ಜುನ ಹೋಮ ಮಾಡಿಸುವ ಆಮಿಷ ಕ್ಷು... ಶಕ್ತಿಗಳಿಗೆ ರಾಘು ಒಡ್ಡಿದ್ದಾನಂತೆ! ರಾಘುನ ಜಾತಕ... ದೋಷ ಇರುವುದರಿಂದಲೇ ಹಿಂಗೆಲ್ಲಾ ಸ್ತ್ರೀ ಕಂಟಕ... ಆತನಿಗೆ ಬರುತ್ತಿದೆಯೆಂದು ತಂತ್ರಿಗಳು 'ಪ್ರಶ್ನೆ'ಯಲ್ಲಿ... ಕಂಡುಕೊಂಡಿದ್ದಾರಂತೆ.

ಮಜಾ ಎಂದರೆ, ಈ 'ರಕ್ಷಾ ಕವಚ' ಹೋಮ... ಹವನ ಮುಗಿದ ದಿನವೇ ರಾಘುಗೆ ಪ್ರಬಲಾ ಕೇಸ... 30 ದಿನಗಳ ಮಧ್ಯಂತರ ಜಾಮೀನು ಸಿಕ್ಕಿದೆ. ಕೆಕ್ಕಾರಿನಲ್ಲಿ ಮಾಡಿಸಲಾದ ವಾಮಾಚಾರದಿಂದಾಗಿಯೇ... ಗುರುಗಳಿಗೆ ಜಾಮೀನು ಸಿಕ್ಕಿದೆ ಎಂದು ಈಗ ಮ... ಮಳ್ಳು ಮಾಣಿಗಳು ಹೇಳಿಕೊಂಡು ಓಡಾಡುತ್ತಿದ್ದಾ... ಪ್ರಬಲಾಳ 'ಜನ್ಮಾಂತರ'ವೇ ಸರಿಯಿಲ್ಲ ಎಂದು ಅವಹೇಳನಕಾರಿಯಾಗಿ ಬೊಗಳುತ್ತಿದ್ದಾರೆ. ಸಾಮಾ... ಜಾಲತಾಣಗಳಲ್ಲಿ ತಾಲಿಬಾನಿಗಳು ಪ್ರಬಲಾಳ ಚಾರಿತ್ರ್ಯವಧೆ ಮಾಡುವ ನೀಚಮಟ್ಟಕ್ಕೆ ಇಳಿದಿದ್ದಾರೆ... ಇದು ರಾಘು ಶಿಷ್ಯ ಕೋಟಿಗೆ ಕಲಿಸಿದ 'ಕೊಳಕು... ಸಂಸ್ಕೃತಿ'!!

ಗಂಡಾಂತರದಲ್ಲಿ ಪ್ರಬಲಾ

ರಾಘುನ ಕಾವಿಯಡಿ ಅಡಗಿರುವ ವಿಕೃತ ತೆವಲನ್ನು ಪ್ರೇಮಲತಾ ಬಯಲಿಗೆಳೆದಾಗ ಆಕೆ ಮ... ಆಕೆಯ ಬೆಳೆದುನಿಂತ ಎರಡು ಹೆಣ್ಮಕ್ಕಳ ಚಾರಿತ್ರ್ಯ... ಮಠಾಂಧ ಪಾಪಿಗಳು ಯಾವ ರೀತಿ ಮಾಡಿದ್ದರೋ... ಅದೇ ಥರದ ಸ್ಕೆಚ್ ಪ್ರಬಲಾಳನ್ನು ಕಾಡಲು ಹಾಕಿಕೊಂಡಿದೆ. ಪ್ರಬಲಾಗೆ ಎಡವಟ್ಟು ಗಂಡನಿಂದ... ಡೈವೋರ್ಸ್, ಜೀವನಾಂಶ ಸಿಗದಂತೆ ಮಾಡಿದ್ದ ರ... ಈಗ ಆಕೆಯನ್ನು ಬೀದಿಪಾಲು ಮಾಡಲು ತನ್ನ ಗೂಂಡಾಗಳನ್ನು ಛೂಬಿಟ್ಟಿದ್ದಾನೆ. ಕಳೆದ ಒಂದು ವರ್ಷವಿಡೀ ಪ್ರಬಲಾ ಸಿಐಡಿ ಎದುರು ಪ್ರತಿಕೂಲ... ಸಾಕ್ಷಿ ಹೇಳದಂತೆ, ಡೈವೋರ್ಸ್ ಕೇಸ್ ನಡೆಸದಂ... ಮತ್ತೆ ಮಠದಲ್ಲಿ ಜೀತಕ್ಕೆ ಉಳಿವಂತೆ ಬೆನ್ನಿಗೆ ಬಿ...



ಸಿಎಂ ಸಿದ್ದು

...ಸಿದ್ದ ರಾಘು ರೌಡಿಗಳು ಮಾಡಬಾರದ್ದೆಲ್ಲ ...ತ್ತಿದ್ದಾರೆ.

...ಲಾಳನ್ನು ಬಾಡಿಗೆ ಮನೆಯಿಂದ ...ಹಾಕುವ ಘೋರ ಪಾತಕ ರಾಘುನ ತಾಲಿಬಾನಿ ...ಮಾಡಿದೆ. ಆಕೆಯ ಬಾಡಿಗೆ ಮನೆ ಮಾಲೀಕರ ... ಒತ್ತಡ ಹಾಕಿ ಮನೆ ಖಾಲಿ ಮಾಡಿಸಿದೆ. ...ಯಕ ಪ್ರಬಲಾ ಈಗ ನಡುಬೀದಿಯಲ್ಲಿ ...ಂಥ ಭಯಾನಕ ದುಃಸ್ಥಿತಿ ಬಂದಿದೆ. ...ಬತಾರ ಗಂಡನ ಸಹೋದರ ಆತ್ಮಹತ್ಯೆ ...ಕೊಳ್ಳುವಂಥ ಪರಿಸ್ಥಿತಿ ನಿರ್ಮಿಸಿದ್ದ ರಾಘು ... ಮುಠ್ಠಾಳರು ಆ ಸಾವನ್ನು ಸಂಭ್ರಮಿಸಿದ್ದರು.

...ದ್ದಂತೆಯೇ ರಘು ಕಾವಿಯೊಳಗೇ ಗಡಗಡ ನಡುಗಿ ಹೋಗಿದ್ದಾನೆ. ಪ್ರೇಮಲತಾ ಕೇಸನ್ನು ಎಲ್ಲ ಒತ್ತಡ, ಮಠದ ಕಡೆಯ ವಶೀಲಿಗೆ ಸರ್ಕಾರ ನಡೆಸುವವರ ಸೋಗಲಾಡಿತನ ನಿರ್ದೇಶನದ ನಡುವೆಯೂ ಸಿಐಡಿಯ ಡಿವೈಎಸ್‌ಪಿ ಪುರುಷೋತ್ತಮ ಆದಷ್ಟು ನಿಷ್ಠೂರ, ಪ್ರಾಮಾಣಿಕವಾಗಿ ತನಿಖೆ ನಡೆಸಿದ್ದಾರೆ. ರಾಘುನನ್ನು ವೈದ್ಯಕೀಯ ಪರೀಕ್ಷೆಗೆ ಎಳೆದೊಯ್ದಿದ್ದೇ ಈ ಅಧಿಕಾರಿ. ಅಲ್ಲದೆ ರಾಘು ಪಾದಪೂಜೆಯ ನೆಪದಲ್ಲಿ ಯಾವ್ಯಾವ ಗೃಹಿಣಿಯರ ಮನೆಯಲ್ಲಿ ಎಷ್ಟೆಷ್ಟು ದಿನ ಕ್ಯಾಂಪು ಮಾಡಿ ಮೋಜು ಮಾಡಿದ್ದ, ಪ್ರಬಲಾಳಂಥ ಇನ್ನೆಷ್ಟು ಅಮಾಯಕ ಹುಡುಗೀರ ಶೀಲಗೆಡಿಸಿ ಸುಖಿಸಿದ್ದ ಎಂಬ ತನಿಖೆಗೂ ಆತ ಕೈಹಾಕಿದ್ದರು.

ಹೀಗಾಗಿ ರಾಘು ಈ ಡಿವೈಎಸ್ಪಿ ಎಂದರೆ ನಿದ್ದೆಯಲ್ಲೂ ಹಾಸಿಗೆ ಒದ್ದೆ ಮಾಡುತ್ತಾನೆ. ಇಂಥವನ ಕೈಗೆ ಪ್ರಬಲಾ ಕೇಸು ಸಿಗಲೇಬಾರದೆಂಬ ಹಠಕ್ಕೆ ಬಿದ್ದಿದ್ದಾನೆ. ಹಾಗಾಗಿ ಮಠದ ಮಾಣಿಗಳು ಪುರುಷೋತ್ತಮ್ ವಿರುದ್ಧ ಅಪಪ್ರಚಾರ ನಡೆಸಿದ್ದಾರೆ. ಪ್ರಬಲಾಳ ಪರ ಹುಯಿಲೆಬ್ಬಿಸುವ ಕಿತಾಪತಿ ಮಾಡಿದ್ದಾರೆ. ಪ್ರೇಮಲತಾ ಪ್ರಕರಣದಲ್ಲಿ ಸಾಕ್ಷಿಯಾಗಿದ್ದ ಪ್ರಬಲಾಳ ಜತೆ ಈ ಅಧಿಕಾರಿ ಅನುಚಿತವಾಗಿ ವರ್ತಿಸಿದ್ದ.... ಆಕೆ ಮೇಲೆ ಆತನಿಗೆ ಸಿಟ್ಟಿದೆ..... ಹೀಗಾಗಿ ಇನ್‌ವೆಸ್ಟಿಗೇಶನ್‌ನಲ್ಲಿ ಪುರುಷೋತ್ತಮ್ ಇದ್ದರೆ ಪ್ರಬಲಾಗೆ ನ್ಯಾಯ ಸಿಗದು ಎಂದು ಬೊಬ್ಬೆ ಹೊಡೆಯುತ್ತಿದ್ದಾರೆ. ಜಾಲತಾಣಗಳಲ್ಲಿ ಇಂಥದೇ ಅಪಪ್ರಚಾರ ನಡೆಸಲು ರೆಡಿಯಾಗಿದ್ದಾರೆ. ಹೇಗಾದರೂ ಮಾಡಿ ಪ್ರಬಲಾ ಪ್ರಕರಣ ಪುರುಷೋತ್ತಮ್ ಕೈಗೆ ಸಿಗದಂತೆ ಮಾಡುವ ಹುನ್ನಾರವಿದು.



...ನ್ ಕಲ್ಲಡ್ಕ ಭಟ್ಟ ರಾಘುನಿಂದ ಪಡೆದ ...ಕ್ಕೆ ಪ್ರತಿಯಾಗಿ ಶ್ಯಾಮಶಾಸ್ತ್ರಿಯನ್ನು ಕಾಡಿದ್ದ. ...ಸ್ತ್ರಿಯ ಶವಸಂಸ್ಕಾರಕ್ಕೂ ಹವ್ಯಕರು ಬಹಿಷ್ಕಾರ ...ವಂತೆ ರಾಘು ಪ್ರಚೋದಿಸಿದ್ದ. ಆ ದುರಂತದ ... ಶ್ಯಾಮಶಾಸ್ತ್ರಿ ಕುಟುಂಬ ಪುತ್ತೂರು ಸೀಮೆಯಲ್ಲಿ ...ಸಿದ ರೌರವ ನರಕಯಾತನೆ ಹೇಳತೀರದು. ...ಗೆ ಹಾಲು ಕೂಡ ಯಾರೂ ಹಾಕದಂತೆ, ... ಆ ಕುಟುಂಬದ ಜೊತೆ ಮಾತಾಡದಂತೆ ... ಮಾಡಿದ್ದ. ಪ್ರಬಲಾಳ ಬೆನ್ನಿಗೆ ಬಿದ್ದಿರುವ ... ತಾಲಿಬಾನಿಗಳು ಆಕೆಯ ಟಿವಿ ...ಗಳಿಗೂ ಸಂಚಕಾರ ತರುವ ಪ್ಲಾನ್ ... ಒಂದಂತೂ ಖರೆ; ರಾಘು ...ವಾಗದಿದ್ದರೆ ಪ್ರಬಲಾಳ ಮಾನ-ಪ್ರಾಣಕ್ಕೆರಡಕ್ಕೂ ... ಖಂಡಿತ!!

...ಎಸ್‌ಪಿ ಪುರುಷೋತ್ತಮ್

...ಬಲಾ ಅತ್ಯಾಚಾರ ಪ್ರಕರಣ ಸಿಐಡಿಗೆ ವಹಿಸುತ್ತಿ...

ರಾಘು ರಾಜಕೀಯ

ರೇಪಿಸ್ಟ್ ರಾಘು ಈಗ ಬಚಾವಿಗೆ ಕಾವಿ ರಾಜಕಾರಣ ತುಂಬ ವ್ಯವಸ್ಥಿತವಾಗಿ ನಡೆಸಿದ್ದಾನೆ. ಕೇಂದ್ರದ ಬಿಜೆಪಿ ಸರ್ಕಾರದ ಮೇಲೆ ನಿಯಂತ್ರಣ ಸಾಧಿಸಿರುವ ಆರೆಸೆಸ್‌ನ ದೊಡ್ಡ ತಲೆಗಳು ರಾಘು ಜೈಲು ಪಾಲಾಗಲೆಂದು ಬಯಸಿದ್ದಾರೆ. ರಾಘುನ ರಾಸಲೀಲಾ ಧರ್ಮ ಗೊತ್ತಿರುವ ಸೊರಬದ ದತ್ತಾತ್ರೇಯ ಹೊಸಬಾಳೆ, ಆರೆಸೆಸ್‌ನ ಪ್ರಮುಖ ವಿಭಾಗವೊಂದರ ಮುಖ್ಯಸ್ಥರಾಗಿರುವ ಚು.ಮ. ಕೃಷ್ಣ ಶಾಸ್ತ್ರಿಯಂಥವರು ದಿಲ್ಲಿಯಲ್ಲಿ ರಾಘು ವಿರುದ್ಧ ಕಾರ್ಯಾಚರಣೆ ಮಾಡುತ್ತಿದ್ದಾರೆ. ಹೀಗಾಗಿಯೇ ಕೇಂದ್ರ ಮಹಿಳಾ ಆಯೋಗದ ಅಧ್ಯಕ್ಷೆ ಲಲಿತಾ ಕುಮಾರಮಂಗಳಂ ಬೆಂಗಳೂರಿಗೆ ಬಂದು ನಿಧಾನಗತಿಯಲ್ಲಿ ಸಾಗಿರುವ ಸಿಐಡಿ ಪ್ರಭೃತಿಗಳ ಕಿವಿ...







ಕಿಮ್ಮನೆ ರತ್ನಾಕರ್



ದೇಶಪಾಂಡೆ

...ಹಿಂಡಿ ಹೋಗಿದ್ದಾರೆಂದು ರಾಘುನ ಅನುಯಾಯಿಗಳು ಕೂಗಾಡುತ್ತಿದ್ದಾರೆ.

ರಾಜ್ಯದ ಬಿಜೆಪಿ ಪ್ರಮುಖರಾದ ಯಡ್ಡಿ, ಕಾಗೇರಿ, ಎಂಪಿ ಅನಂತ್ಕುಮಾರ್‌ಣೆ, ಶೋಭಕ್ಕ... ಮುಂತಾದವರು ರಾಘುನ ಉಸಾಬರಿಯೇ ಬೇಡವೆಂದು ತಟಸ್ಥರಾಗಿದ್ದಾರೆ. ಇಂಥ ಸನಾತನಿಗಳೂ-ಬಲಪಂಥಿಯರೂ ರಾಘುನ ಸಹವಾಸ ಬೇಡವೆಂದು ಕೊಂಡಿರುವಾಗ ಎಡಪಂಥೀಯ ಚಿಂತನೆಯ ಸಿಎಂ ಸಿದ್ದು ಮತ್ತಾತನ ಸರ್ಕಾರದ ಘನಂದಾರಿ ಮಂತ್ರಿಗಳನೇಕರು ರಾಘುನ ರಕ್ಷಣೆಯ ನಿಗಾ ವಹಿಸಿದಂತಿದೆ. ಕೈಗಾರಿಗಾ ಮಂತ್ರಿ ಗೆಟಪ್ಪಿನಲ್ಲಿರುವ ಖತರ್‌ನಾಕ್ ಕೈಗಾರಿಕೋದ್ಯಮಿ ಆರ್.ವಿ. ದೇಶಪಾಂಡೆ ಹವ್ಯಕರ ಕಚ್ಚಿ ರಾಘು ಸ್ವಾಮಿ ಕಾನೂನಿನ ಕೈಗೆ ಸಿಗದಂತೆ ತಪ್ಪಿಸುತ್ತಿದ್ದಾರೆ. ಜೊತೆಗೆ ಇತರೆ ಮಂತ್ರಿಗಳಿಗೂ ಮಠದಿಂದ ಭರ್ಪೂರ್ ಕಾಣಿಕೆ ಸಂದಾಯವಾಗಿರುವುದರಿಂದಲೇ ನಮ್ಮ ಗುರುಗಳು ಸುರಕ್ಷಿತವಾಗಿದ್ದಾರೆಂದು ಮಠದ ತಾಲಿಬಾನಿಗಳು ಸುದ್ದಿ ಹಬ್ಬಿಸಿದ್ದಾರೆ.

ರಾಘುನನ್ನು ರಕ್ಷಿಸಿದರೆ ಉತ್ತರ ಕನ್ನಡ, ಶಿವಮೊಗ್ಗ, ದಕ್ಷಿಣ ಕನ್ನಡದಲ್ಲಿರುವ ಹವ್ಯಕ ಬ್ರಾಹ್ಮಣರು ಕಾಂಗ್ರೆಸ್‌ಗೆ ಬೆಂಬಲಿಸುತ್ತಾರೆಂದು ಎಡಬಿಡಂಗಿ ದೇಶಪಾಂಡೆ ಲೆಕ್ಕ ಹಾಕಿದ್ದಾರೆ. ಇದೇ ಜಾತಿ ರಾಜಕಾರಣದ ಸಮೀಕರಣ ಸಿಎಂ ಸಿದ್ದೂ ತಲೆಗೂ ತುಂಬಿದ್ದಾರೆ. ಭಟ್ಕಳ, ಕುಮಟಾ, ಪುತ್ತೂರು, ಬಂಟ್ವಾಳ, ಯಲ್ಲಾಪುರ, ಸಾಗರ, ತೀರ್ಥಹಳ್ಳಿ..... ಮುಂತಾದೆಡೆ ಹವ್ಯಕ ಬ್ರಾಹ್ಮಣ ಪ್ರಾಬಲ್ಯದ ಕ್ಷೇತ್ರದ ಕಾಂಗ್ರೆಸ್ ಶಾಸಕರು ಕಂಡೂಕಾಣದಂತೆ ರಾಘುನ ಪರ ವಹಿಸುತ್ತಿದ್ದಾರೆ.

ವಾಸ್ತವವೆಂದರೆ, ಈ ರಾಘು ಹೇಳಿದರೂ ದಕ್ಷಿಣ ಕನ್ನಡ, ಉತ್ತರ ಕನ್ನಡ, ಶಿವಮೊಗ್ಗ ಕಡೆಯ ಹವ್ಯಕರು ಕಾಂಗ್ರೆಸ್‌ಗೆ ಮತ ಹಾಕಲು ಸಾಧ್ಯವೇ ಇಲ್ಲ. ಇವರಲ್ಲಿ ಶೇ. 90 ಬಿಜೆಪಿ ಮತದಾರರು. ರಾಘು ಕಾಂಗ್ರೆಸ್‌ನ ಹಿರಿತಲೆಗಳಿಗೆ ತಾನು ಮುಂದಿನ ಇಲೆಕ್ಷನ್‌ನಲ್ಲಿ ಕಾಂಗ್ರೆಸ್ ಪರ ಫತ್ವಾ ಹೊರಡಿಸುತ್ತೇನೆಂದು ನಂಬಿಸಿದ್ದಾನೆ. "ದಿಲ್ಲಿಯಲ್ಲಿರುವ ಚೆಡ್ಡಿಗಳು ನಂಗೆ ಕಂಟಕಕಾರಿಯಾಗಿದ್ದಾರೆ. ಇವರ ಹೆದರಿಕೆಯಿಂದಲೇ ನಾನು ಸುಪ್ರೀಂಕೋರ್ಟ್‌ನಿಂದ ಅರ್ಜಿ ವಾಪಸ್ ಪಡೆದುಕೊಂಡು ಬಂದಿದ್ದೇನೆ. ಬಿಜೆಪಿಗೆ ಬುದ್ಧಿ ಕಲಿಸದೇ ಬಿಡೋದಿಲ್ಲ" ಎಂದು ಕಾಂಗ್ರೆಸ್ ಲೀಡರ್‌ಗಳ ಮೊಣ ಕೈಗೆ ತುಪ್ಪ ಸವರಿದ್ದಾನೆ.

ಇತ್ತ ಬಿಜೆಪಿ ಮುಖಂಡರಿಗೂ ಪೂಸಿ ಹೊಡೆಯುತ್ತಿದ್ದಾನೆ. "ಸರ್ಕಾರ ಕಾಂಗ್ರೆಸಿನದು... ಅವ್ರಿಗೆ ಖುಷಿ ಮಾಡದಿದ್ರೆ ನಾವು ಜೈಲು ಪಾಲಾಗ್ತೇವೆ... ಹವ್ಯಕರು ಎಂದಿದ್ದರೂ ಬಿಜೆಪಿಗೆ ಓಟು ಹಾಕ್ತಾರೆ..." ಎಂದು ಡಬಲ್‌ಗೇಮ್ ಆಡುತ್ತಿದ್ದಾನೆ. ತನ್ನ ಮಗನನ್ನು ಹೇಗಾದರೂ ಎಂಪಿ ಮಾಡಬೇಕೆಂಬ ಚಟದಲ್ಲಿರುವ ದೇಶಪಾಂಡೆಗೆ ಉತ್ತರ ಕನ್ನಡದ ಬಹುಸಂಖ್ಯಾತ ಹವ್ಯಕರ ಓಟು ಬೇಕಾಗಿದೆ. ಹೀಗಾಗಿ ಆತ ರಾಘುನ ಬಚಾಯಿಸುವ ಭಂಡರ ತಂಡದ ನೇತೃತ್ವ ವಹಿಸಿದ್ದಾರೆ. ಈ ದೇಶಪಾಂಡೆ ಅದೆಂಥ ಮೂರ್ಖನೆಂದರೆ, ಮೂವ್ವತ್ತು ವರ್ಷ ರಾಜಕೀಯ ಮಾಡಿದರೂ ಹವ್ಯಕರ ರಾಜಕೀಯ ನಾಡಿಮಿಡಿತ ಅರ್ಥ ಮಾಡಿಕೊಳ್ಳಲಾಗಿಲ್ಲ. ಕಳೆದ ಬಾರಿ ಲೋಕಸಭಾ ಚುನಾವಣೆಯಲ್ಲಿ ಈ ಹವ್ಯಕರು ದೇಶಪಾಂಡೆ ಮಗನನ್ನು ಸಾರಾಸಗಟಾಗಿ ತಿರಸ್ಕರಿಸಿದ್ದಾರೆ. ರಾಘುನೇ ಕಾವಿ ತೊಟ್ಟು ಕೊಂಡು ಬಹಿರಂಗ ಪ್ರಚಾರಕ್ಕೆ ಬಂದರೂ ಹವ್ಯಕರ ಮತ ಕಾಂಗ್ರೆಸ್ ಅಥವಾ ದೇಶಪಾಂಡೆ ಮಗನಿಗೆ ಬರಲು ಸಾಧ್ಯವೇ ಇಲ್ಲ. ಉತ್ತರ ಕನ್ನಡದ ರಾಜಕೀಯದ ಜಾತಿ ಸಮೀಕರಣವೇ ಅಂಥದ್ದು. ದೇಶಪಾಂಡೆ-ಕಾಂಗ್ರೆಸ್ ವಿರೋಧಿ ನಿಲುವು ಹವ್ಯಕರದು. ರಾಘು ರಕ್ಷಣೆಯಿಂದ ಕಾಂಗ್ರೆಸ್‌ಗೆ ಲಾಭವೇನೂ ಇಲ್ಲ; ರಾಘು ವಿರೋಧದಿಂದ ಬಿಜೆಪಿಗೂ ಹಾನಿಯಿಲ್ಲ!

ಅಸಾರಾಮ್ ಬಾಪೂಗಿಂತ ಕೀಳು!

ಇದು ಅರ್ಥ ಆಗಬೇಕಾಗಿರುವುದು ಸಿಎಂ ಸಿದ್ದುಗೆ. ಒಂದಲ್ಲ ಎರಡೆರಡು ರೇಪ್‌ಕೇಸ್‌ನಲ್ಲಿ ಸಿಕ್ಕಿಬಿದ್ದಿರುವ ರಾಘುನ ಕೈಗೆ ಕೊಳ ತೊಡಿಸದಷ್ಟು ದುರ್ಬಲವಾಗಿದೆಯಾ ಕಾನೂನು? ಪ್ರಬಲಾ ದೂರು ಕೊಟ್ಟಾಗ ಬಂಧಿಸಲು ಹಲವು ಅವಕಾಶ ಇತ್ತು. ಈ ಸಂದರ್ಭ ಬೇಕಂತಲೇ ಸಿದ್ದು ಸರ್ಕಾರ ಬಳಸಿಕೊಳ್ಳಲಿಲ್ಲ. ಲಂಬಾಣಿಗಳ ಸೇವಾಲಾಲ್ ಸ್ವಾಮಿ, ಅಸಾರಾಮ್ ಬಾಪೂ, ನಿತ್ಯಾನಂದ..... ಇತ್ಯಾದಿ



ಅಸಾರಾಮ್ ಬಾಪೂ

ಸ್ವಾಮಿಗಳನ್ನು ಬಂಧಿಸಲು ಸಾಧ್ಯವಾಗುವುದಿದ್ದರೆ, ಇವರಿಗಿಂತ ದೊಡ್ಡ ಮತ್ತು ಹೆಚ್ಚು ಲೈಂಗಿಕ ಅಪರಾಧ ಮಾಡಿರುವ ರಾಘುನನ್ನೇಕೆ ಜೈಲಿಗೆ ತಳ್ಳಲು ಆಗುವುದಿಲ್ಲ?! ಹತ್ತಾರು ವರ್ಷದ ಹಿಂದಿನ ಲೈಂಗಿಕ ದೌರ್ಜನ್ಯ ಅತ್ಯಾಚಾರಕ್ಕಾಗಿ ವೃದ್ಧ ಅಸಾರಾಮ್ ಬಾಪೂನನ್ನು ಕಾರಾಗೃಹಕ್ಕೆ ತಳ್ಳಲಾಗಿದೆ. ಪ್ರಬಲಾಳ ಕೇಸು ಅಷ್ಟು ದುರ್ಬಲವಾ? ಇದೆಂಥ ಸಾಮಾಜಿಕ ನ್ಯಾಯದ ಪರಿ?!

ಆಳುವವರ ಬೆಂಬಲದಿಂದಲೇ ರಾಘು ಇವತ್ತು ಕಾವಿ ಡಾನ್‌ನಂತಾಗಿದ್ದಾನೆ. ತನ್ನ ಕೇಸ್‌ನ ಪ್ರತಿಕೂಲ ಸಾಕ್ಷಿಗಳನ್ನು ಬೆದರಿಸುತ್ತಿದ್ದಾನೆ. ತನ್ನ ಪಾಪಕೃತ್ಯ ಹೊರಹಾಕುವ 'ಪತ್ರಿಕೆ' ಮೇಲೆ ರೌಡಿ ಅನುಯಾಯಿಗಳು ದಾಳಿ ಮಾಡುವಂತೆ ಕುಮ್ಮಕ್ಕು ಕೊಡುತ್ತಿದ್ದಾನೆ. ಶ್ಯಾಮಶಾಸ್ತ್ರಿಯಂಥ ಅಮಾಯಕರನ್ನು ಕೊಲ್ಲುತ್ತಿದ್ದಾನೆ. ಬಡ-ಪಾಪದ ಹವ್ಯಕ ಕುಟುಂಬಗಳ ಆಪೋಷನ ಪಡೆಯುತ್ತಿದ್ದಾನೆ. ಬಹಿಷ್ಕಾರದಂಥ ಕ್ರಿಮಿನಲ್ ಕಿತಾಪತಿ ನಡೆಸುತ್ತಿದ್ದಾನೆ. ಪ್ರಬಲಾಳಂಥ ನಿಷ್ಪಾಪಿ ಹುಡುಗೀರ ಪಾಲಿಗೆ ಕೀಚಕನಂತಾಗಿದ್ದಾನೆ.

ರಾಘು ಮಠದಲ್ಲಿ ಕುಳಿತು ಬಗಿಯುವ ಪ್ರಚೋದನಾಕಾರಿ ಪ್ರವಚನವೊಂದೇ ಸಾಕು, ಆತನಿಗೆ ಕೊಟ್ಟಿರುವ ಜಾಮೀನು ರದ್ದು ಮಾಡಲು. ಆತ 'ಪತ್ರಿಕೆ' ವಿರುದ್ಧ ಮತ್ತು ತನ್ನ ಬಯಲಾಗಿಸುವವರ ವಿರುದ್ಧ ದಾಳಿ ಮಾಡಲು ಕೊಟ್ಟಿರುವ ಕುಮ್ಮಕ್ಕಿನ ಆಡಿಯೋದ 'ಧ್ವನಿ'ಯೇ ಸಾಕು ಒದ್ದು ಜೈಲಿಗೆ ಹಾಕಲು! ರಾಘು ಮತ್ತಾತನ ರೌಡಿ ಪಟಾಲಮ್‌ನ ಆಟ ನೋಡುತ್ತಿರುವ ಹವ್ಯಕರೀಗ ಅಸಹ್ಯಪಡುತ್ತಿದ್ದಾರೆ. ಕಂಡ-ಕಂಡ ಹೆಂಗಸರ ಗುಳುಂ ಮಾಡಿರುವ ಗಲೀಜು ರಾಘು ಇನ್ನೂ ಪೀಠದಲ್ಲಿ ಗುರುವಾಗಿರುವುದು ಪ್ರಜ್ಞಾವಂತ ಹವ್ಯಕರ ನೈತಿಕತೆಯನ್ನು ಚುಚ್ಚುತ್ತಿದೆ.

ಜನ ತಿರುಗಿಬೀಳುವ ಮೊದಲೇ ಸಿದ್ದು ಸರ್ಕಾರ ಎಚ್ಚೆತ್ತುಕೊಳ್ಳುವುದಾ?

■ ಸುಯೋಧನ


ನರೇಂದ್ರ ಮೋದಿಯ ಬಗ್ಗೆ ಮತ್ತೆ ಬರೆಯಬೇಕಾಗಿದೆ.

ತನ್ನದೇ ಆದ ಮಾದರಿಯನ್ನು ಬಿಟ್ಟು, ಪೈಪೋಟಿಯಿಂದೆಂಬಂತೆ, ಅಮೆರಿಕದ್ದೋ, ಚೀನಾದ್ದೋ, ಇನ್ಯಾವುದೋ ದೇಶದ್ದೋ ಮಾದರಿಯನ್ನು ಅನುಸರಿಸಿ ಪ್ರಗತಿ ಸಾಧಿಸಲು ಹೊರಟರೆ ಭಾರತದಂತಹ ದೇಶಕ್ಕೇ ಎಂತೆಂತಹ ಅನಾಹುತಗಳು ಉಂಟಾಗಬಹುದೆಂಬುದನ್ನು ಸಕಾರಣ ವಿವರಿಸಿ ಕೆಲ ತಿಂಗಳ ಹಿಂದೆ ಇದೇ ಪತ್ರಿಕೆಯಲ್ಲಿ ನಾನು ಲೇಖನ ಬರೆದಿದ್ದೆನಷ್ಟೆ. ನನ್ನ ಆ ಲೇಖನಕ್ಕೆ ಸಮರ್ಥನೆಯಾಗಿ ಇಂದು ಚೀನಾದ ದುರವಸ್ಥೆ ನಮ್ಮ ಕಣ್ಣ ಮುಂದಿದೆ.

ಅಮೆರಿಕಾ, ಜಪಾನ್, ದಕ್ಷಿಣ ಕೊರಿಯಾ ದೇಶಗಳನ್ನೂ ಮೀರಿ ಮೇಲೇರುತ್ತೇನೆಂದು ಆ ನಿಟ್ಟಿನಲ್ಲಿ ಯದ್ವಾತದ್ವಾ ಸಾಗಿದ ಚೀನಾ ಈಗ ದಿಕ್ಕಾಪಾಲಾಗಿ ಕುಳಿತಿದೆ! ಭಾರೀ ಉದ್ಯಮಗಳು ಮತ್ತು ಅಗಾಧ ರಫ್ತು ಇವೇ ದೇಶದ ಅಭಿವೃದ್ಧಿಯ ಮೂಲಮಂತ್ರಗಳು ಎಂದು ಭಾವಿಸಿ ಆ ದಿಸೆಯಲ್ಲಿ ಭರ್ಜರಿಯಾಗಿ ಕಾರ್ಯಪ್ರವೃತ್ತವಾದುದರ ಫಲವಾಗಿ ಚೀನಾ ಇಂದು ತನ್ನ ಜಿಡಿಪಿಯ ಶೇಕಡಾ 282ರಷ್ಟು ಸಾಲವನ್ನು ತನ್ನಮೇಲೆ ಹೇರಿಕೊಂಡಿದೆ. ಅಭಿವೃದ್ಧಿಯ ಹುಚ್ಚಿನಲ್ಲಿ ಆ ದೇಶವು ಕಳೆದ ಏಳು ವರ್ಷಗಳಲ್ಲಿ ತನ್ನ ಸಾಲ ಋಣವನ್ನು ದುಪ್ಪಟ್ಟು ಮಾಡಿಕೊಂಡಿದೆ! ರಫ್ತಿನ ಹುಚ್ಚಿನಲ್ಲಿ ಚೀನಾವು ಹೆಚ್ಚಿಸಿಕೊಂಡ ರಫ್ತು ಸಾಮರ್ಥ್ಯವೇ ಆ ದೇಶಕ್ಕೀಗ ಕಂಟಕವಾಗಿದೆ; ಏಕೆಂದರೆ ಅಷ್ಟು ಭಾರಿ ಪ್ರಮಾಣದಲ್ಲಿ 'ಚೀನಾ ಮೇಡ್' ವಸ್ತುಗಳಿಗೆ ವಿಶ್ವದಲ್ಲಿ ಬೇಡಿಕೆಯೇ ಇಲ್ಲವಾಗಿದೆ! ಅಗತ್ಯಕ್ಕಿಂತ ಹೆಚ್ಚು ದೇಶೀಯ ಹೂಡಿಕೆ ಮಾಡಿದುದರ ಪರಿಣಾಮವಾಗಿ ಚೀನಾಕ್ಕೆ ಇಂದು ಸಾರ್ವಜನಿಕ ಯೋಜನೆಗಳಿಗೆ ಇನ್ನಷ್ಟು ಹೂಡಿಕೆ ಮಾಡಲು- ಜಿಡಿಪಿಯ ಶೇಕಡಾವಾರು ಸುರಕ್ಷತಾ ಮಿತಿಯನುಸಾರ- ಅವಕಾಶ ಕ್ಷೀಣಿಸಿದೆ. ಈ ವಿಪತ್ತುಗಳಿಂದ ಪಾರಾಗಲು ಆ ದೇಶವು ತನ್ನ ಕರೆನ್ಸಿಯ ಅಪಮೌಲ್ಯವೇ ಮೊದಲಾದ ಅಸ್ವಾಭಾವಿಕ ಕ್ರಮಗಳನ್ನು ಕೈಗೊಂಡು, ತಾನೂ ಇನ್ನಷ್ಟು ಕುಸಿಯತೊಡಗಿದೆ, ಮಾತ್ರವಲ್ಲ, ವಿಶ್ವದ ಆರ್ಥಿಕತೆಗೇ ಅಪಾಯ ತಂದೊಡ್ಡಿದೆ! ವಿವಿಧ ದೇಶಗಳ ಷೇರು ಮಾರುಕಟ್ಟೆಗಳು ಅಲುಗಾಡುತ್ತಿವೆ! ವಿವಿಧ ದೇಶಗಳ ಕರೆನ್ಸಿಗಳ ಮೌಲ್ಯಗಳಲ್ಲಿ ದಿಢೀರ್ ಏರುಪೇರುಗಳು ಉಂಟಾಗುತ್ತಿವೆ! ವಿವಿಧ ದೇಶಗಳಲ್ಲಿ ಬಂಡವಾಳ ಹೂಡಿಕೆಗಳು ಅಸ್ತವ್ಯಸ್ತವಾಗುತ್ತಿವೆ! ಆಮದು, ರಫ್ತುಗಳಿಂದ ಹಿಡಿದು ಬ್ಯಾಂಕ್ ಬಡ್ಡಿದರಗಳವರೆಗೆ ವಿಶ್ವದ ಎಲ್ಲ ಆರ್ಥಿಕ ಆಗುಹೋಗುಗಳು ಚೀನಾದ ಈ ಉಪದ್ವ್ಯಾಪದಿಂದಾಗಿ ಪೆಟ್ಟು ತಿನ್ನುತ್ತಿವೆ. ಸ್ವಯಂ ಚೀನಾ ದೇಶವಂತೂ ಮಂಕಾಗಿಬಿಟ್ಟಿದೆ.

ಭಾರತವಾಸಿಗಳಾದ ನಾವಿಂದು ಗಾಬರಿಗೀಡಾಗಬೇಕಾದ ಸಂಗತಿಯೇನೆಂದರೆ, ನರೇಂದ್ರ ಮೋದಿಯ ಸರ್ಕಾರವೂ, ಅಲ್ಲ, ಏಕಚಕ್ರಾಧಿಪತ್ಯವೂ ಇಂದು ಚೀನಾ ದೇಶದ ಹಾದಿಯಲ್ಲೇ ಸಾಗುತ್ತಿದೆ! ಜಾಗತೀಕರಣ, ಉದಾರೀಕರಣ, ಬೃಹತ್ ಉದ್ಯಮ, ಭಾರೀ ಬಂಡವಾಳ, ಖಾಸಗಿ ವಲಯ, ರಫ್ತು, ಪೈಪೋಟಿ, ಡಿಜಿಟಲ್ ಇಂಡಿಯಾ, ಲಂಗುಲಸ್ಸುಗಳ ಪಿತ್ಥ ಏರಿಸಿಕೊಳ್ಳುತ್ತಿರುವ ಮೋದಿ ಸರ್ಕಾರವು, ಇದೇ ಪಿತ್ಥದಲ್ಲೇ ತಲೆ ತಿರುಗಿದವರಂತೆ ಮುಂದುವರಿದರೆ, ಭಾರತವು ಚೀನಾಕ್ಕಿಂತ ಘೋರ ವಿನಾಶವನ್ನು ಕಾಣುವುದು ಖಂಡಿತ. ಚೀನಾಕ್ಕಾದರೋ ಬೇಗನೆ ಬುದ್ಧಿ ಬಂದಿದೆ. ಆದರೆ

ಅನ್ನವನ್ನೂ ಅನ್ನದಾತನನ್ನೂ ಕಡೆಗಣಿಸಿದರೆ, ಅಚ್ಛೇ ದಿನ್‌ಗೆ ಹಾದಿ ಎಲ್ಲಿದೆ ಮಿಸ್ಟರ್ ಮೋದಿ?



ಮೋದಿ ಹೋಗುತ್ತಿರುವ ದಿಕ್ಕು ಮತ್ತು ವೇಗ ಗಮನಿಸಿದರೆ ಆತನಿಗೆ ಬುದ್ಧಿ ಬರುವ ಲಕ್ಷಣಗಳು ಕಾಣುತ್ತಿಲ್ಲ! 'ತನ್ನ ಆಡಳಿತಕ್ಕಿಂತ ಮೊದಲು ಭಾರತಕ್ಕೆ ವಿಶ್ವದಲ್ಲೆಲ್ಲೂ ಒಳ್ಳೆಯ ಹೆಸರೇ ಇರಲಿಲ್ಲ; ಭಾರತ ದರಿದ್ರ ದೇಶವಾಗಿತ್ತು; ಭ್ರಷ್ಟತೆಯ ಕೂಪವಾಗಿತ್ತು; ವಿದೇಶಗಳ ನಜರಿನಲ್ಲೇ ಇರಲಿಲ್ಲ ದೇಶ; ಆತ್ಮಾಭಿಮಾನವನ್ನೇ ಹೊಂದಿರಲಿಲ್ಲ; ಹಿಂದಿನ ಸರ್ಕಾರಗಳಿಂದಾಗಿ ಸತ್ಯನಾಶ ಹೊಂದಿಬಿಟ್ಟಿತು; ತನ್ನ ಆಡಳಿತ ಶುರು ವಾದ ಒಂದು ವರ್ಷದಲ್ಲೇ ಎಲ್ಲಾ ಬದಲಾಗಿಬಿಟ್ಟಿತು' ಎಂದು- ಅತ್ಯಂತ ಚಾಣಾಕ್ಷ ರೀತಿಯಲ್ಲಿ- ಕೊಚ್ಚಿಕೊಳ್ಳುವ ಮೋದಿಗೆ ಎಂದಾದರೂ ಬುದ್ಧಿ ಬಂದೀತೇ? ಖಂಡಿತ ಇಲ್ಲ.

ಭಾರೀ ಉದ್ಯಮಗಳಿಗೆ ಪ್ರೋತ್ಸಾಹ ಕೊಡುವ ಕಾರ್ಯದಲ್ಲಿ ನಿರತವಾಗಿದೆ ಮೋದಿ ಸರ್ಕಾರ. ತನ್ಮೂಲಕ ಸಣ್ಣ ಉದ್ದಿಮೆಗಳನ್ನು, ಗೃಹಕೈಗಾರಿಕೆಗಳನ್ನು ವಿನಾಶದ ಅಂಚಿಗೆ ತಲುಪಿಸಲಿದೆ, ಮಾತ್ರವಲ್ಲ, ಉಳ್ಳವರ (ಅಂದರೆ, ಬೃಹತ್ ಉದ್ದಿಮೆದಾರರ ಮತ್ತು ಸಂಬಂಧಿತ ವಹಿವಾಟುಗಳವರ) ಮತ್ತು ಇಲ್ಲದವರ (ಅಂದರೆ ಸಣ್ಣ ಉದ್ದಿಮೆದಾರರ, ಗೃಹ ಕೈಗಾರಿಕೆಗಳವರ, ಕುಶಲಕರ್ಮಿಗಳ, ಸಾಮಾನ್ಯ ಬಳಕೆದಾರರ, ಬಡವರ ಮತ್ತು ಕೂಲಿನಾಲಿ ಮಾಡುವವರ) ನಡುವಿನ ಕಂದಕವನ್ನು ಹೆಚ್ಚಿಸಲಿದೆ. ಇದು ಕ್ರಮೇಣ ದೇಶದಲ್ಲಿ ಅಶಾಂತಿ, ಅಸಹನೆ, ಕ್ಷೋಭೆ ಮತ್ತು ದಂಗೆಗಳಿಗೆ ಕಾರಣವಾಗುತ್ತದೆ. ಮುಂದಿನ ದುರಂತವೇ ದೇಶದ ಮಹಾ ಕುಸಿತ!

ಪೈಪೋಟಿ ಹಾಗೂ ಅಗಾಧ ರಫ್ತಿನ ಉದ್ದೇಶದಿಂದ ಖಾಸಗಿ ವಲಯಕ್ಕೆ ದೇಶವನ್ನು ಧಾರೆಯೆರೆದು ಕೊಡಲು ಹೊರಟಿದೆ ಮೋದಿ ಸರ್ಕಾರ. ಪರಿಣಾಮ ಸ್ವಹಿತಾಸಕ್ತಿ ಬಿಟ್ಟು ಇನ್ನಾವ ದೃಷ್ಟಿಯನ್ನೂ ಹೊಂದಿರದ ಮತ್ತು ಲವಲೇಶವೂ ಸಾಮಾಜಿಕ ಕಳಕಳಿ ಇಲ್ಲದ ದೇಶೀ ಮತ್ತು ವಿದೇಶೀ ಬೂರ್ಜ್ವಾ ಬಂಡವಾಳಶಾಹಿಗಳ ಕೈಗೆ ಸಿಲುಕಿ ಹಿಂಡಲ್ಪಟ್ಟು ಹಿಪ್ಪೆಯಾಗಿ ಹೋಗುತ್ತದೆ ಭಾರತ ದೇಶ. ಪುನಃ ಇಲ್ಲಿ ಎರಡು ಹೊತ್ತಿನ ಕೂಳಿಗೆ ಹೆಣಗಾಡಬೇಕಾದ ದುರವಸ್ಥೆ ತಲುಪುವವರು ಮೆಜಾರಿಟಿ ಸಂಖ್ಯೆಯಲ್ಲಿರುವ ಬಡಜನರು. ಕೆಲವೇ ಬೃಟಿಷರು ಕೋಟ್ಯಂತರ ಬಡ ಭಾರತೀಯರನ್ನು, ಹೌದು, ಬಡ ಭಾರತೀಯರನ್ನು ಮಾತ್ರ, ಶ್ರೀಮಂತ ಭಾರತೀಯರನ್ನಲ್ಲ, ಗುಲಾಮರನ್ನಾಗಿ ನಡೆಸಿಕೊಂಡು ಶೋಷಿಸಿದ ರೀತಿ ಈ ಖಾಸಗಿ ಬಂಡವಾಳಶಾಹಿಗಳು ಕೋಟ್ಯಂತರ ಬಡಜನತೆಯನ್ನು ಆಮೂಲಾಗ್ರ ದೋಚಿ, ನಾಜೂಕಾಗಿ ಕಾನೂನಿನ ಪರಿಧಿಯಲ್ಲೇ, ಆರ್ಥಿಕವಾಗಿಯೂ ಸಾಮಾಜಿಕವಾಗಿಯೂ ತಮ್ಮ ಗುಲಾಮರನ್ನಾಗಿಸಿಕೊಂಡು ಬಿಡುತ್ತಾರೆ!

ಅನ್ನ ಕೊಡುವ ರೈತರನ್ನು ಬದಿಗೆ ತಳ್ಳಿ 'ಡಿಜಿಟಲ್ ಇಂಡಿಯಾ'ದತ್ತ ಹೊರಟಿದೆ ಮೋದಿ ಸರ್ಕಾರ. ಯಾವುದೇ ದೇಶ, ಅನ್ನ ತಿಂದು ಬದುಕುತ್ತದೆಯೇ ಹೊರತು, ಕಂಪ್ಯೂಟರ್‌ನ ಹಾರ್ಡ್‌ವೇರ್ ತಿಂದು ಬದುಕಲಾರದು. ನೀರು ಕುಡಿದು ಬದುಕುತ್ತದೆಯೇ ಹೊರತು ಸಾಫ್ಟ್‌ವೇರ್ ಎಂಬ ಸಾಫ್ಟ್ ಡ್ರಿಂಕ್ ಕುಡಿದು ಬದುಕಲಾರದು. ಇನ್ನು ಷೇರು, ಬಾಂಡು, ಸಾಲ, ಸೂಚ್ಯಂಕ, ಅಂತರ್ಜಾಲದ (ಅತಿ ಅವಲಂಬನೆ), ಇಂಥವೇ ಎಲ್ಲ ಹೆಚ್ಚಾದಷ್ಟೂ, ಬ್ರೆಜಿಲ್, ಗ್ರೀಸ್, ಚೀನಾಗಳಂತೆ ದೇಶದ ದಿಢೀರ್ ಕುಸಿತದ ಸಾಧ್ಯತೆ ಹೆಚ್ಚುತ್ತದೆ. ಕೊನೆಗೂ ಗಟ್ಟಿ ನಿಲ್ಲುವುದೆಂದರೆ ಅನ್ನ ಒಂದೇ. ಅನ್ನವೇ ಪ್ರಾಣ. ಪ್ರಜೆಯದ್ದೂ ದೇಶದ್ದೂ. ಚಿನ್ನವೂ ಅಲ್ಲ, ಪೆಟ್ರೋಲೂ ಅಲ್ಲ. ಹೀಗಿರುವಾಗ ಅನ್ನದ ಬಗ್ಗೆ ಮತ್ತು ಅನ್ನದಾತ ರೈತನ ಬಗ್ಗೆ ಮೋದಿ ಸರ್ಕಾರಕ್ಕೆ ಎಷ್ಟು ಕಾ[...] ಇದೆ ಎಂಬುದು ಇಲ್ಲಿ ಪ್ರಸ್ತುತವಾಗುತ್ತದೆ ಮ[...] ಮುಖ್ಯವಾಗುತ್ತದೆ.

ಬಾಯಲ್ಲಿ ರೈತರ ಬಗ್ಗೆ ಒಳ್ಳೊಳ್ಳೆ ಮಾತುಗಳನ್ನಾಡಿದ[...] ಸಾಲದು; ರೈತರ ಮತ್ತು ರೈತಾಪಿವರ್ಗದ ಸುರಕ್ಷೆಗೆ ಮ[...] ಏಳಿಗೆಗೆ ಏನೆಲ್ಲ ಅಗತ್ಯವೋ ಆ ಎಲ್ಲ ಕೆಲಸಗಳ[...] ಸರ್ಕಾರವು ಮಾಡಿದರೆ ಮಾತ್ರ ಒಂದು ದೇಶವು [...] ತಿಂದು ಜೀವ ಹಿಡಿದುಕೊಂಡಿರಲು ಸಾಧ್ಯ. ಭಾರ[...] ರೈತರಿಗಿಂದು ಅಗತ್ಯವಿರುವುದು

1) ಬೀಜ ಮತ್ತು ರಸಗೊಬ್ಬರ ಕಂಪನಿ[...] ಶೋಷಣೆಯಿಂದ ಮುಕ್ತಿ

2) ಅಧಿಕಾರಶಾಹಿ ಮತ್ತು ಬಂಡವಾಳಶಾಹಿ[...] ಕಪಿಮುಷ್ಟಿಯಿಂದ ಬಿಡುಗಡೆ

3) ಕೃಷಿ ಭೂಮಿಮೇಲಿನ ಹಕ್ಕಿನ ರಕ್ಷಣೆ, ಸಾವಯ[...] ಕೃಷಿಗೆ ಪ್ರೋತ್ಸಾಹ, ಬೆಳೆ ನಷ್ಟ ಪರಿಹಾರ ಮೊದಲ[...] ರೈತಸ್ನೇಹಿ ನಡೆ

4) ಬೆಂಬಲ ಬೆಲೆ

5) ಮಧ್ಯವರ್ತಿಗಳ ಮತ್ತು ಸಾಲ ನೀಡುವ[...] ಶೋಷಣೆಯಿಂದ ಮುಕ್ತಿ

6) ಉತ್ತಮ ಮತ್ತು ನೇರ ಮಾರುಕಟ್ಟೆ ವ್ಯವಸ್ಥೆ[...]

ಇವೆಲ್ಲವನ್ನೂ ಮೂಲೆಗೆ ತಳ್ಳಿ ಮೋ[...] ಮಹಾನುಭಾವನು, ರೈತರ ಬ್ಯಾಂಕ್ ಅಕೌಂಟ್ ತೆರೆಯ[...] ಇನ್ಸೂರೆನ್ಸ್ ಆಸೆ ತೋರಿಸುವ, ಕಂಪ್ಯೂಟರ್ ವಿದ್ಯೆ ಕಲಿ[...] ಯೋಜನೆಗಳನ್ನೇ, ರೈತರಿಗೆ ಅವೇ ಸರ್ವಸ್ವ ಎಂಬ[...] ಬಿಂಬಿಸತೊಡಗಿದ್ದಾನೆ. ದೀರ್ಘಕಾಲದಲ್ಲಿ ಇ[...] ನಿಷ್ಪ್ರಯೋಜಕವಾಗುವುದು ಖಂಡಿತ. ಮೋದಿಯ [...] 'ಬಂಬಾಟ್' ಐಡಿಯಾಗಳು ಮುಂದೊಂದು ದಿನ [...] ದೇಶದ ಸಣ್ಣ ಹಿಡುವಳಿದಾರರನ್ನು ಮತ್ತು ಕೃಷಿಕಾರ್ಮಿಕ[...] ಪಾತಾಳಕ್ಕೆ ತಳ್ಳಿ, ಇತಿಹಾಸ ಕೊಟ್ಟಿದ್ದಕ್ಕಿಂತ ಘೋರವ[...] ಚತುರವಾದ ಜಮೀನ್ದಾರಿ ಪದ್ಧತಿಯನ್ನು ಸೃಷ್ಟಿಸಿ[...] ಆಶ್ಚರ್ಯವಿಲ್ಲ. ಬೀದಿ ಬದಿಯ ಮಾರಾಟಗಾರರ[...] ಚರಂಡಿಗೆ ತಳ್ಳಿದ್ದಲ್ಲದೆ ಮಾಲೀಕರು ಮೋದಿಯ 'ಬೃಹ[...] ಎಂಬ ಯೋಜನೆಯ ಲಾಭ ಪಡೆದು ರೈತರ[...] ಗಟಾರಕ್ಕೆಸೆದು, ತಾವೇ 'ಬೆಳೆದು' (ಅಥಾ[...] ಗುಲಾಮಗಿರಿಯಿಂದ ಕೃಷಿ ನಡೆಸಿ), ತಮ್ಮಿಷ್ಟದಂತೆ [...] ಹೆಚ್ಚಿಸುತ್ತ ಗ್ರಾಹಕರನ್ನು (ಆಫರ್, ಡಿಸ್ಕೌಂಟ್‌ಗಳ ಮೋ[...] ಜಾಲ ಬೀಸಿ) ಶೋಷಿಸತೊಡಗಿದರೆಂದರೆ ಭಾರತದ [...] ಮುಗಿಯಿತು. ಆಗ ಬಹುಸಂಖ್ಯಾತ ಬಡ ಜನ[...] ಮೋದಿಯು, 'ಅನ್ನ ಶಾರ್ಟೇಜ್ ಆದರೆ (ಕಂಪ್ಯೂಟ[...] ಚಿಪ್ಸ್ ತಿನ್ನಿರಿ; ಬ್ಯಾಂಕ್ ಪಾಸ್‌ಬುಕ್ ತಿನ್ನಿರಿ; ಇನ್ಸೂ[...] ಬಾಂಡ್ ತಿನ್ನಿರಿ; ಷೇರ್ ಸರ್ಟಿಫಿಕೇಟ್ ತಿನ್ನಿರಿ; ಕುಡಿಯ[...] ನೀರಿಲ್ಲದಿದ್ದರೆ (ಮಿನರಲ್ ವಾಟರ್ ಬಾಟ್ಲರ್‌ಗಳ ಕೈಗೆ, ಖ[...] ನೀರು ವ್ಯಾಪಾರಿಗಳ ಕೈಗೆ ನೀರೆಲ್ಲ ಹರಿದು, ಬಡಜನ[...] ನೀರಿಗೆ ಹಾಹಾಕಾರ ಉಂಟಾದರೆ), ಸಾಫ್ಟ್‌ಡ್ರಿಂಕ್ (ವ[...] ಸಾಫ್ಟ್‌ವೇರ್ ಎಂಬ ಡ್ರಿಂಕ್) ಕುಡಿಯಿರಿ' ಎನ್ನುತ್ತಾನೇನೆ[...]

■ ಎಚ್. ಆನಂದರಾಮ ಶ[...]

ಸಚಿವ ಜಯಚಂದ್ರರಿಗೆ ಹಲವು ಪ್ರಶ್ನೆಗಳು



ಮುಜರಾಯಿ ವ್ಯಾಪ್ತಿಗೆ ಧರ್ಮಸ್ಥಳ ಮಂಜುನಾಥ ಸ್ವಾಮಿ ದೇವಸ್ಥಾನ ಒಳಪಡಿಸುವ ಪ್ರಸ್ತಾಪ ಇಲ್ಲ ಎಂದೂ, ಶ್ರೀ ವೀರೇಂದ್ರ ಹೆಗ್ಗಡೆಯವರು ಕೋಟ್ಯಾಂತರ ಜನರಿಗೆ ಒಳಿತು ಮಾಡುವ ಒಂದು ಸಂಸ್ಥೆ ಇದ್ದಂತೆ ಎಂದೂ, ಪಟ್ಟಭದ್ರ ಹಿತಾಸಕ್ತಿಗಳು ಗೊಂದಲ-ವಿವಾದ ಸೃಷ್ಟಿಸಲು ಯತ್ನಿಸುತ್ತಿವೆ ಎಂದೂ, ಧರ್ಮಸ್ಥಳ ಕ್ಷೇತ್ರ ಮುಜರಾಯಿ ವ್ಯಾಪ್ತಿಗೆ ಬರುವುದಿಲ್ಲ ಹಾಗೂ ಈ ವಿಚಾರ ಹಿಂದೆಯೇ ಇತ್ಯರ್ಥವಾಗಿದೆ ಎಂದು ಮುಜರಾಯಿ ಸಚಿವ ಟಿ.ಬಿ. ಜಯಚಂದ್ರ ಹೇಳಿದ್ದಾರೆ. ಕಾನೂನು ಸಚಿವರೂ ಆದ ಇವರು ಈ ಹೇಳಿಕೆ ಮೂಲಕ ಸಾರ್ವಜನಿಕರಲ್ಲಿ ಗೊಂದಲ ಮೂಡಿಸುತ್ತಿದ್ದಾರೆ. ಆದ್ದರಿಂದ ಅವರು ಸ್ಪಷ್ಟನೆ ನೀಡಬೇಕೆಂದು ಆಗ್ರಹಿಸುತ್ತೇವೆ.

1. 'ರಂಜನ್ ರಾವ್‌ರ ಮನವಿಯನ್ನು ಮುಜರಾಯಿ ಇಲಾಖೆ ಕಮಿಷನರ್‌ಗೆ ಕಳಿಸಿದ್ದೆ. ಅವರು ಸಹಾಯಕ ಕಮಿಷನ್‌ರಿಗೆ ಕಳಿಸಿದ್ದಾರೆ ಇದು 'ರುಟೀನ್'. ಅಲ್ಲಿಗೆ ಮುಗಿಯಿತು' ಎಂದಿದ್ದಾರೆ! ಒಬ್ಬರು ಜವಾಬ್ದಾರಿಯುತ ಮಂತ್ರಿಸ್ಥಾನದಲ್ಲಿದ್ದವರು ಇಂತಹ ಬಾಲಿಶ ಹೇಳಿಕೆ ನೀಡಿರುವುದು ಹಾಸ್ಯಾಸ್ಪದವಾಗಿದೆ. ಸಚಿವರ ಟಿಪ್ಪಣಿಗೆ ಬೆಲೆಯೇ ಇಲ್ಲವೆಂದು ಅವರೇ ಹೇಳಿದಂತಾಯ್ತು!

2. ಕರ್ನಾಟಕದಲ್ಲಿದ್ದ 6 ಕಾಯ್ದೆಗಳನ್ನು ರದ್ದುಗೊಳಿಸಿ ಒಂದೇ ಧಾರ್ಮಿಕದತ್ತಿ ಕಾಯ್ದೆ 1997 ಮಾಡಲಾಗಿತ್ತು, ಅನಂತರ ಸುಪ್ರೀಂ ಕೋರ್ಟ್‌ನ ನಿರ್ದೇಶನ ಮತ್ತು ಹೈ ಪವರ್ ಕಮಿಟಿಯ ಶಿಫಾರಸಿನಂತೆ ಬಿಜೆಪಿ ಸರಕಾರ 2011ರಲ್ಲಿ ತಿದ್ದುಪಡಿಗಳನ್ನು ಮಾಡಿ ಈಗಿನ ಕಾಯ್ದೆ ಜಾರಿಗೆ ತಂದಿದೆ. ತಿದ್ದುಪಡಿ ಪ್ರಕಾರ ಖಾಸಗಿ ವ್ಯಕ್ತಿ ಯಾ ಸಂಸ್ಥೆ ದೇವಸ್ಥಾನದ ಹೆಸರಿನಲ್ಲಿ ಸಾರ್ವಜನಿಕರಿಂದ ಹಣ ಸಂಗ್ರಹಕ್ಕೆ ಅವಕಾಶವೇ ಇಲ್ಲ. ಹೀಗಿದ್ದರೂ ವೀರೇಂದ್ರ ಹೆಗ್ಗಡೆಯವರು ಒಂದು ಖಾಸಗಿ ದೇವಸ್ಥಾನ ಹೇಗೆ ನಡೆಸುತ್ತಾರೆ? ಆದ್ದರಿಂದಲೇ ಕಮಿಷನರ್‌ರು ನಿಯಮಾನುಸಾರ ದಾಖಲೆಗಳೊಂದಿಗೆ ಪ್ರಸ್ತಾವನೆ ಜರೂರು ಕಳಿಸುವಂತೆ ಜಿಲ್ಲಾಧಿಕಾರಿಗಳಿಗೆ ಸೂಚಿಸಿದ್ದಾರೆ. ಕಮಿಷನರ್‌ರ ಮೂಲಕ ಈ ಪ್ರಸ್ತಾವನೆ ಸರಕಾರಕ್ಕೆ ಬರುವ ಮೊದಲೇ ಇಂತಹ 'ಪ್ರಸ್ತಾವನೆ'ಯೇ ಇಲ್ಲ, ಈ ಬಗ್ಗೆ ಯೋಚನೆಯೇ ಮಾಡಿಲ್ಲ ಎಂದು ಹೇಳುವುದು ಅಧಿಕಾರಿಗಳ ಮೇಲೆ ಪ್ರಭಾವ ಬೀರುವ ಅನೈತಿಕ ಪ್ರಯತ್ನವಲ್ಲವೇ?

3. ಶ್ರೀ ವೀರೇಂದ್ರ ಹೆಗ್ಗಡೆಯವರಿಂದ ಕೋಟ್ಯಾಂತರ ಜನರಿಗೆ ಒಳಿತು ಉಂಟಾಗಿದೆ ಎಂದು ಯಾವ ಆಧಾರದಲ್ಲಿ ಹೇಳುತ್ತೀರಿ? 18% ಬಡ್ಡಿಗೆ ಸಾಲ ನೀಡುವ ಅವರ ಮೈಕ್ರೋ ಫೈನಾನ್ಸ್ ಸೇವೆಯಲ್ಲ, ಬರೀ ಬಡ್ಡಿ ವ್ಯವಹಾರ ಮತ್ತು ಬಡವರ ಶೋಷಣೆ. (2012-13ರಲ್ಲಿ ರೂ.90 ಕೋಟಿ ಲಾಭ ಮಾಡಿದ್ದಾರೆ) ದೇವಸ್ಥಾನಕ್ಕೆ ಬರುವ 400-500 ಕೋಟಿ ಆದಾಯದಲ್ಲಿ 10%ವೂ ದಾನಕ್ಕೆ ವಿನಿಯೋಗವಾಗೊಲ್ಲ. ಸರಕಾರಕ್ಕೆ ಮೋಸ ಮಾಡಿ ಸಾವಿರಾರು ಎಕ್ರೆ 'ಮಿಗತೆ ಭೂಮಿ'ಯನ್ನು ಡಿ.ಸಿ. ಮನ್ನಾ ಭೂಮಿಯನ್ನು ಅನುಭೋಗ ಮಾಡುತ್ತಿರುವ ಇವರ ಹಲವು ಅವ್ಯವಹಾರಗಳು ತನಿಖೆಯಾಗುತ್ತಿದ್ದು ರುಜುವಾತಾಗಿದೆ. ಇತ್ತೀಚೆಗೆ ಇವರ ಶಿಕ್ಷಣ ಸಂಸ್ಥೆಯ 132 ಎಕ್ರೆ ಮುಟ್ಟುಗೋಲು ಆಗಿರುವುದು ಸಚಿವರಿಗೆ ತಿಳಿದಿಲ್ಲವೇ? ಇದು ಯಾವ ಒಳಿತು? ಒಳಿತು ಮಾಡುತ್ತಿರುವುದು ಮಂಜುನಾಥಸ್ವಾಮಿಯೇ ಹೊರತು ವೀರೇಂದ್ರ ಹೆಗ್ಗಡೆಯವರಲ್ಲ.


4. ಧಾರ್ಮಿಕದತ್ತಿ ಕಾಯ್ದೆಯ ಸೆ.53ರ ಪ್ರಕಾರ ಧಾರ್ಮಿಕ ದತ್ತಿ ಇಲಾಖೆಯ ಅಧೀನದಲ್ಲಿ ಇಲ್ಲದಿರುವ ಎಲ್ಲಾ ಸಾರ್ವಜನಿಕ ದೇವಸ್ಥಾನಗಳು ಅವುಗಳ ಒಡೆತನ, ಆಸ್ತಿ ಆದಾಯ, ಆಡಳಿತ ಇತ್ಯಾದಿ ಸಮಗ್ರ ವಿವರಗಳನ್ನು ಇಲಾಖೆಗೆ ನೀಡಬೇಕು. ಧರ್ಮಾಧಿಕಾರಿ ಸ್ಥಾನದಲ್ಲಿರುವ ಹೆಗ್ಗಡೆಯವರು ಈವರೆಗೆ ಈ ವಿವರ ನೀಡಿಲ್ಲ. ಇವರಲ್ಲಿ ಪಾರದರ್ಶಕತೆ ಏನೂ ಇಲ್ಲ, ಸಚಿವರು ಈ ವಿವರ ತರಿಸಿ ಸಾರ್ವಜನಿಕರಿಗೆ ತಿಳಿಸುತ್ತಾರಾ?

5. 1976ರಲ್ಲಿ ಸುಪ್ರೀಂ ಕೋರ್ಟ್‌ನ ತೀರ್ಪು ಹೆಗ್ಗಡೆ ಕುಟುಂಬದ ಪರವಾಗಿತ್ತೆಂಬುದು ಸರಿಯಲ್ಲ, ಸಚಿವರು ಈ ಆದೇಶವನ್ನು ಪೂರ್ತಿ ಓದಿದಾಗ ವ[...] ಇದು ಅರ್ಥವಾಗುತ್ತದೆ. ಸರಕಾರದ ನಿಷ್ಕ್ರಿಯತೆಯಿಂ[...] ಈವರೆಗೆ ಈ ದೇವಸ್ಥಾನ ಹೆಗ್ಗಡೆ ಅಧಿಪತ್ಯದಲ್ಲಿದೆ. 19[...] ಆದೇಶ ಏನಿದ್ದರೂ 2011ರ ತಿದ್ದುಪಡಿಯಾದ ಕರ್ನಾ[...] ಧಾರ್ಮಿಕದತ್ತಿ ಕಾಯ್ದೆ ಅನ್ವಯವಾಗಿಸಬೇಕೇ ಹೊ[...] 'ಹಿಂದೆಯೇ ಇತ್ಯರ್ಥವಾಗಿದೆ' ಎಂದು ಸಾರ್ವಜನಿ[...] ಸುಳ್ಳು ಮಾಹಿತಿ ನೀಡಿ ಗೊಂದಲ ಸೃಷ್ಟಿಸುವುದು ಸರಿ[...]

6. ಪಟ್ಟಭದ್ರ ಹಿತಾಸಕ್ತಿಗಳು ಗೊಂದಲ-ವಿ[...] ಸೃಷ್ಟಿಸುತ್ತಿವೆ ಎಂದು ಹೇಳುವ ಸಚಿವರು ಹೆಗ್ಗಡೆಯ[...] ಮುಖವಾಣಿಯಾಗಿರುವುದು ವಿಪರ್ಯಾಸ! ಪ್ರಜೆಗಳ[...] ಆಯ್ಕೆಯಾದ ಇವರು ಶಾಸನಗಳನ್ನು ಮಾಡಿದ ಮೇ[...] ಆ ಶಾಸನಗಳನ್ನು ಜಾರಿಗೊಳಿಸಬೇಕಾದ ಕರ್ತ[...] ನಿರ್ವಹಿಸಬೇಕು. ಶಾಸನ ಸರಿಯಿಲ್ಲವೆಂದಾದಲ್ಲಿ ಅ[...] ತಿದ್ದುವ, ರದ್ದುಮಾಡುವ ಅಧಿಕಾರ ಶಾಸಕಾಂಗಕ್ಕೆ [...] ಇದೆ. ಆದರೆ ಹೆಗ್ಗಡೆಯವರು ಜಯಚಂದ್ರರಿಗೆ '[...] ಎನ್ನುವ ಕಾರಣಕ್ಕೆ ಕಾನೂನನ್ನು ಮೀರುವ ಅಧಿಕಾರ ಇ[...] ಪ್ರಾಪ್ತವಾಗುವುದಿಲ್ಲ. ಕಾನೂನನ್ನು ಹೆಗ್ಗಡೆಯವರಿ[...] ಅನ್ವಯಿಸಬೇಕೆಂದೂ, ಅವರು ಪ್ರಶ್ನಾತೀತ, ಸಂವಿಧ[...] ಕಾನೂನು ಮೀರಿದ ವ್ಯಕ್ತಿ ಅಲ್ಲವೆಂದೂ ಪ್ರತಿಪಾದಿ[...] ನಮ್ಮನ್ನು 'ಪಟಭದ್ರ ಹಿತಾಸಕ್ತಿಗಳು' ಎಂದು ನೀವು [...] ಹೇಳುತ್ತೀರಿ? ನಾವು ಸಂವಿಧಾನ-ಕಾಯ್ದೆ, ಜನಸಾಮಾ[...] ಹಿತಕಾಯುವ 'ಹಿತಾಸಕ್ತರು': ಇದು ನಮ್ಮ ಸಂವಿಧಾನ[...] ಅಧಿಕಾರವೂ ಹೌದು.

ಕೆ. ಸೋಮನಾಥ ನಾಯಕ್ (ಅಧ್ಯಕ್ಷ) [...]
ರಂಜನ್ ರಾವ್ ಯರ್ಡೂರ್ (ಸ್ಥಾಪಕ [...]
ನಾಗರಿಕ ಸೇವಾ [...]

"ಟೀಮ್ ಇಂಡಿಯಾ": ಒಂದು ಅಪಾಯಕಾರಿ ಐಡಿಯಾ



ಮೋದಿಯ ಈ ಬಾರಿಯ ಸ್ವಾತಂತ್ರ್ಯ ...ಚರಣೆಯ ಭಾಷಣ ಕಳೆದ ವರ್ಷಕ್ಕಿಂತಲೂ ...ಯಾಗಿತ್ತು. ಈ ನಟಸಾರ್ವಭೌಮನ ಅದೇ ಹಳಸಲು ...ಭಾವಗಳು ಮತ್ತು ಧ್ವನಿಯ ಏರಿಳಿತಗಳು ...ಗಳಿಂತೂ ಆಕರ್ಷಣೆ ಕಳೆದುಕೊಳ್ಳುತ್ತಾ ನಿರುತ್ಸಾಹಿ ...ನಿಂದ ಆಕಳಿಕೆಗಳನ್ನು ಆಹ್ವಾನಿಸುತ್ತಿವೆ. ಜೊಳ್ಳಿನಂತಿದ್ದ ... 85 ನಿಮಿಷಗಳ ಭಾಷಣದಲ್ಲಿ ಅದೇ ...ಯುಕ್ತಿಗಳು, ಪೊಳ್ಳು ಘೋಷಣೆಗಳು, ಚಿಡ್ಡಿವಿಶಿಷ್ಟ ... ಪದಪುಂಜಗಳಿದ್ದವೆ ಹೊರತು ಹೊಸತೇನೂ ...ಲ್ಲ. ಆದರೆ ಹಿಂದಿ ವಾಕ್ಯಗಳ ನಡುವೆ ಹಲವಾರು ...ಷ್ ಪದಗಳೂ ನುಸುಳಿರುವುದು ಮಾತ್ರ ...ರ್ಹವಾಗಿದೆ. ಅವುಗಳನ್ನು ಮೂರು ವರ್ಗಗಳಾಗಿ ...ಸಬಹುದು. ಮೊದಲನೆ ವರ್ಗದಲ್ಲಿ ಆಡುಭಾಷೆಯ ...ವಾಗಿಬಿಟ್ಟಿರುವ "ಬಿಜಿ", "ಇಂಜೆಕ್ಷನ್", "ಫ್ಯಾಷನ್" ... ಪದಗಳಿವೆ. ಎರಡನೆ ವರ್ಗದಲ್ಲಿ "ವರ್ಕ್ ಕಲ್ಚರ್", ... ಗವರ್ನೆನ್ಸ್", "ಪಿರಮಿಡ್", "ಪ್ರೊಡಕ್ಟಿವಿಟಿ" ...ಡಾದವುಗಳಿದ್ದರೆ "ಸ್ಟಾರ್ಟ್‌ಅಪ್ ಇಂಡಿಯಾ", ...ಡ್‌ಅಪ್ ಇಂಡಿಯಾ", "ಟೀಮ್ ಇಂಡಿಯಾ" ...ದ ಪದಪುಂಜಗಳು ಮೂರನೆ ವರ್ಗಕ್ಕೆ ಸೇರುತ್ತವೆ. ...ಮೆಂದರೆ ಮೋದಿ ಭಾಷಣದಲ್ಲಿ "ಟೀಮ್ ಇಂಡಿಯಾ" ... ಕನಿಷ್ಠ 32 ಸರ್ತಿ ಬಂದಿದೆ! ಹಿಂದಿಯೇ ...ಭಾಷೆಯಾಗಬೇಕೆಂದು ಹಟ ತೊಟ್ಟಿರುವ ಸಂಘ ...ರದ ಕಟ್ಟರ್ ಸ್ವಯಂಸೇವಕನಾದ ಈತನಿಗೆ ತನ್ನ ...ನೂತನ "ಟೀಮ್ ಇಂಡಿಯಾ" ಐಡಿಯಾವನ್ನು ...ಮಳೆ ಕೊಂಡೊಯ್ಯಲು ಇಂಗ್ಲಿಷ್ ಭಾಷೆಯ ಪದಗಳೇ ...ಮುದು ದೊಡ್ಡ ವಿಪರ್ಯಾಸವೇ ಸರಿ! ಸಂಘದ ...ಟಿಕೆಗೆ ಮತ್ತೊಂದು ಜ್ವಲಂತ ನಿದರ್ಶನವಿದು. ... ಮೋದಿ ಅಥವಾ ಆತನ ಸಲಹಾಗಾರರಿಗೆ "ಟೀಮ್ ...ಯಾ"ದಲ್ಲಿ ಹುದುಗಿರುವ ಸೈದ್ಧಾಂತಿಕ ಅರ್ಥ ...ಯಲ್ಲಿ ಬರಲಾರದೆಂದು ಅನಿಸಿರಬಹುದೇ? ಹಿಂದಿಯ ...ಶ್ ದಳ್" ಜನಾಕರ್ಷಕವಾಗಲಾರದೆಂದು ತೋರಿತೇ? ... ಅದು "ಟೀಮ್ ಇಂಡಿಯ"ದಷ್ಟು ಶಕ್ತಿಯುತ ...ವದು ಎಂದೆನಿಸಿತೇ? ಅಥವಾ ಆ ಹೆಸರನ್ನು ಬಜರಂಗ ...ಂದಿಗೆ ಗಂಟುಹಾಕುವ ಸಾಧ್ಯತೆಗಳಿರಬಹುದೆಂದು ...ೇ? "ಟೀಮ್ ಇಂಡಿಯಾ"ದಲ್ಲಿ ಭಾರತದ ಎಲ್ಲಾ ... ಕೋಟಿ ಜನರೂ ಇದ್ದಾರೆ ಮತ್ತು "ಟೀಮ್ ...ಯಾ" ಆಗಿರುವ ಕಾರಣಕ್ಕೇ ದೇಶ "ಮುಂಪನ್ಕ ...ದೆ" (ಪ್ರಗತಿ ಪಥದಲ್ಲಿದೆ) ಎಂದು ಮೋದಿ ಹೇಳಿದ. ...ಸತ್ಯಕ್ಕೆ ದೂರವಾದುದು ಮಾತ್ರವಲ್ಲ ಇವೆರಡೂ ...ನ್ನೊಂದು ವಿರುದ್ಧವಾಗಿವೆ. ಮೋದಿ ಬಾಯಲ್ಲಿ ಹೊಸಾ ...ಮ್ ಇಂಡಿಯಾ" ಮಂತ್ರೋಚ್ಚಾರಣೆ ಶುರುವಾಗಿರುವ ...ದಲ್ಲಿ ಕೇಳಲು ಇಂಪಾಗಿರುವ ಈ ಪರಿಕಲ್ಪನೆಯೊಳಗೆ ... ಅಪಾಯ ಅಡಗಿದೆ ಎಂದು ಹೆಚ್ಚಿನವರಿಗೆ ತಿಳಿದಿರಲಾರದು. ನಿಜಹೇಳಬೇಕೆಂದರೆ ಇದೊಂದು ಮೇಲಿನಿಂದ ಕೆಳಗೆ ಹರಿಯುವ ಪ್ರಜಾತಂತ್ರ ವಿರೋಧಿ ಐಡಿಯಾ. ಆದುದರಿಂದ ಟೀಮ್ ಅಥವಾ ತಂಡ ಅಂದರೆ ಏನು, ಇಡೀ ದೇಶವನ್ನು ಒಂದು ತಂಡವೆಂದು ಊಹಿಸಿಕೊಳ್ಳುವುದರ ಗೂಢಾರ್ಥ ಏನು ಎಂಬ ಮೂಲಭೂತ ಪ್ರಶ್ನೆಗಳನ್ನು ಹಾಕಿಕೊಂಡು ಸ್ವಲ್ಪ ವಿಶ್ಲೇಷಣೆ ಮಾಡುವುದು ಅತ್ಯಗತ್ಯ.

ಟೀಮ್ ಅಂದರೇನು? ಇದರ ನಿಘಂಟಿನ ಅರ್ಥ ಹೀಗಿದೆ: "ಪಂದ್ಯಾಟದಲ್ಲಿ ತೊಡಗಿರುವ ತಂಡಗಳ ಪೈಕಿ ಒಂದು ತಂಡದ ಸದಸ್ಯರು" ಅಥವಾ "ಒಟ್ಟುಗೂಡಿ ಕೆಲಸ ಮಾಡುವ ಜನರ ತಂಡ". ಆದುದರಿಂದ ಟೀಮ್ ಎನ್ನುವುದು ಮುಖ್ಯವಾಗಿ ಸ್ಪರ್ಧೆ, ಒಂದುಗೂಡುವಿಕೆ ಮತ್ತು ಕೆಲಸ ಎಂಬ ಮೂರು ಅಂಶಗಳನ್ನು ಒಳಗೊಂಡಿರುತ್ತದೆ. ಮ್ಯಾನೇಜ್‌ಮೆಂಟ್ ಪಠ್ಯಪುಸ್ತಕಗಳಲ್ಲಿ ಇನ್ನೂ ಎರಡು ಅಂಶಗಳನ್ನು ಸೇರಿಸಲಾಗುತ್ತದೆ: ವ್ಯವಸ್ಥಿತ ಚೌಕಟ್ಟು ಮತ್ತು ಉದ್ದೇಶ. ಆದುದರಿಂದ ಈ ಅಂಶಗಳನ್ನೆಲ್ಲ ಸೇರಿಸಿ ಟೀಮ್ ಅಂದರೆ "ನಿರ್ದಿಷ್ಟ ಉದ್ದೇಶಕ್ಕಾಗಿ ವ್ಯವಸ್ಥಿತ ಚೌಕಟ್ಟಿನೊಳಗೆ ಇತರ ಟೀಮ್‌ಗಳಿಗಿಂತ ಉತ್ತಮವಾಗಿ ಕೆಲಸ ಮಾಡುವ ಜನರ ತಂಡ" ಎಂದು ಹೇಳಬಹುದು. ಟೀಮ್‌ನ ಮುಖ್ಯಾಂಶಗಳೆಂದರೆ ಸ್ಪರ್ಧೆ ಮತ್ತು ಉದ್ದೇಶ. ಎಲ್ಲಾ ಟೀಮುಗಳೂ ಒಂದು ನಿಗದಿತ ಅವಧಿಯೊಳಗೆ ಕಾರ್ಯಾಚರಿಸಬೇಕಲ್ಲದೆ ಕೆಲಸ ಮುಗಿದ ಬಳಿಕ ತಂಡವನ್ನು ವಿಸರ್ಜಿಸಬೇಕು. ಆದರೆ ರಾಷ್ಟ್ರದ ಚಹರೆಯನ್ನು (ಐಡೆಂಟಿಟಿ) ಗಟ್ಟಿಗೊಳಿಸುವುದಕ್ಕೋಸ್ಕರ ರಾಷ್ಟ್ರವನ್ನು ಒಂದು ತಂಡವಾಗಿ ಕಟ್ಟುವುದೆಂದರೆ ಸಕಲ ಪ್ರಜೆಗಳನ್ನೊಳಗೊಂಡ ಶಾಶ್ವತ ತಂಡವನ್ನು ಕಟ್ಟಿದಂತೆ. ಹೀಗೆ ಇಡೀ ದೇಶವನ್ನು ಒಂದು ಶಾಶ್ವತ ತಂಡ ಎಂದು ಪರಿಗಣಿಸಬಹುದೇ? ಹೌದೆಂದಾದರೆ "ಟೀಮ್ ಇಂಡಿಯಾ"ದ ಉದ್ದೇಶ ಏನು?

ಜಾತೀಯತೆ, ಮತೀಯತೆ, ಜನಾಂಗೀಯತೆ, ಭಾಷೀಯತೆ, ಪ್ರಾದೇಶಿಕತೆ ಇವೇ ಮುಂತಾದ ಕಾರಣಗಳಿಗಾಗಿ ಹರಿದುಹೋಗಿರುವ ಭಾರತೀಯ ಸಮಾಜವನ್ನು ಒಂದು ಟೀಮ್ ಎನ್ನಲು ಸಾಧ್ಯವೇ? ಖಂಡಿತ ಇಲ್ಲ. ಮೋದಿಯ "ಟೀಮ್ ಇಂಡಿಯಾ" ನಮ್ಮ ನೆಲದ ವಾಸ್ತವವನ್ನು ಆಧರಿಸಿಲ್ಲ. ಒಂದು ಯೋಜನೆಯಾಗಿಯೂ ಅದು ಕಾರ್ಯಗತವಾಗಲಾರದು ಏಕೆಂದರೆ ಅದರಲ್ಲಿ ಆಳವಾದ ಸಮಸ್ಯೆಗಳಿವೆ. ಮೇಲ್ಜಾತಿಗಳು, ದಲಿತರು; ಕೋಮುವಾದಿಗಳು, ಅಲ್ಪಸಂಖ್ಯಾತರು; ಭೂಕಬಳಿಕೆದಾರರು, ರೈತರು; ಆದಿವಾಸಿಗಳು, ಗಣಿಗಳ್ಳ ಕಾರ್ಪೋರೇಟುಗಳು ಮುಂತಾದವರೆಲ್ಲ ಒಂದೇ ಟೀಮಿನ ಸಮಾನ ಸದಸ್ಯರು ಹೇಗಾಗಬಲ್ಲರು? "ಅಭಿವೃದ್ಧಿಯ ಅಮೃತ"ದ ಮೂಲಕ "ಜಾತೀಯತೆಯ ವಿಷ"ವನ್ನು ತೊಡೆದುಹಾಕುವುದು ತನ್ನ ಉದ್ದೇಶ ಎಂಬ ಮೋದಿಯ ರಂಗುರಂಗಿನ ಮಾತುಗಳನ್ನೇ ತೆಗೆದುಕೊಳ್ಳಿ. ಮೋದಿ ಹುಟ್ಟೂರಾದ ಗುಜರಾತಿನಲ್ಲಿಂದು ಹಾರ್ದಿಕ್ ಪಟೇಲ ಎಂಬೊಬ್ಬ ತರುಣ ಪಟೇಲ ಜಾತಿಗೆ ಮೀಸಲಾತಿ ಬೇಕೆಂದು ದೊಡ್ಡ ಹೋರಾಟ ನಡೆಸುತ್ತಿದ್ದಾನೆ. ಮೋದಿ ಅವನನ್ನು ಕರೆದು ಅವರಿಗೆಲ್ಲ "ಅಭಿವೃದ್ಧಿಯ ಅಮೃತ" ದೊರೆಯಲಿದೆ, ಹೋರಾಟ ಕೈಬಿಡಿ ಎಂದು ಹೇಳಿದನೇ? ಅವರೆಲ್ಲ ಇದೇ "ಅಮೃತ"ದ ಅತಿ ಪರಿಶುದ್ಧ ರೂಪವಾದ "ಗುಜರಾತ್ ಮಾದರಿ ಅಭಿವೃದ್ಧಿ"ಯ ರುಚಿಯನ್ನು ಚೆನ್ನಾಗಿ ಬಲ್ಲವರೇ ಅಲ್ಲವೇ?



ಮೋದಿ "ಟೀಮ್ ಇಂಡಿಯಾ" ಅಂದಾಕ್ಷಣ ಪರದೆಯ ಮೇಲೆ 125 ಕೋಟಿ ಭಾರತೀಯರನ್ನೊಳಗೊಂಡ ಟೀಮ್ ಇತರ ದೇಶಗಳೊಂದಿಗೆ ತೀವ್ರ ಪೈಪೋಟಿಗಿಳಿದು ಭಾರತವನ್ನು ವಿಶ್ವದ ನಂಬರ್ ವನ್ ರಾಷ್ಟ್ರವನ್ನಾಗಿಸಲು ಹೊರಟಿರುವ ಚಿತ್ರ ಮೂಡುತ್ತದೆ. ಅಲ್ಲಿ ತಂಡದ ಹಿತಾಸಕ್ತಿ ಎಂದರೆ ರಾಷ್ಟ್ರದ ಹಿತಾಸಕ್ತಿ ಎಂಬ ಬಗ್ಗೆ ಯಾವ ಸಂದೇಹವೂ ಬೇಡ. ಈ ತಂಡದ ಕೆಲಸ ರಾಷ್ಟ್ರ ನಿರ್ಮಾಣ (ಅರ್ಥಾತ್ ಸಂಘ ಪರಿವಾರದ ಪರಿಭಾಷೆಯ ರಾಷ್ಟ್ರ ಸಬಲೀಕರಣ; ಬಡವರ ಉದ್ಧಾರ ಅಲ್ಲ). ಇದೊಂದು ಅಂತ್ಯವಿಲ್ಲದ ಚಟುವಟಿಕೆ. ಏತನ್ಮಧ್ಯೆ ತಂಡದ ಸದಸ್ಯರು ಸಾಯುತ್ತಿರುತ್ತಾರೆ, ಹೊಸಬರು ಸೇರಿಕೊಳ್ಳುತ್ತಲೇ ಇರುತ್ತಾರೆ. ಈ ರೀತಿಯ "ಟೀಮ್ ಇಂಡಿಯಾ" ಪರಿಕಲ್ಪನೆಯಲ್ಲಿ ಪ್ರಜೆಯೊಬ್ಬ ಪ್ರಭುತ್ವದಿಂದ ತನ್ನ ಹಕ್ಕುಗಳನ್ನು ಕೇಳಬಲ್ಲ ರಾಜಕೀಯ ಅಸ್ಮಿತೆಯಾಗಿರದೆ ಬರೀ ವೈಭವೀಕೃತ ನೌಕರನಷ್ಟೇ ಆಗಿರುತ್ತಾನೆ. 21ನೇ ಶತಮಾನದ ಮಾದರಿ ನೌಕರನ ಹಾಗೆ ಇವನ ಪಾಲಿಗೂ ವೈಯಕ್ತಿಕ ಹಿತಾಸಕ್ತಿಗಿಂತ (ಅಥವಾ ಇನ್ಯಾವುದೇ ಆಸಕ್ತಿಗಿಂತ) ತಂಡದ ಹಿತಾಸಕ್ತಿಗಳೇ ಮುಖ್ಯ ಎಂದಾಗಲಿದೆ. ಇಂಥಾ ಟೀಮಿನಲ್ಲಿ ಖಾಸಗಿತನ ಮತ್ತು ಅಭಿವ್ಯಕ್ತಿ ಸ್ವಾತಂತ್ರ್ಯ ಮೊದಲಾದ ನಾಗರಿಕ, ಪ್ರಜಾತಂತ್ರಿಕ ಹಕ್ಕುಗಳಿಗೆ ಪ್ರಾಮುಖ್ಯತೆ ಇಲ್ಲ. ಅಲ್ಲಿ ಪ್ರಜಾಸತ್ತಾತ್ಮಕವಾದ ಹಕ್ಕುಗಳಿಗೆ ... ಭಿನ್ನಾಭಿಪ್ರಾಯ ಹೊಂದಿರುವವನು ಅಥವಾ ಕಪ್ತಾನನನ್ನು ಟೀಕಿಸುವವನು "ಕೆಟ್ಟ ಆಟಗಾರ" ಅನಿಸುತ್ತಾನೆ. ಇಂಥಾ "ಕೆಟ್ಟ ಆಟಗಾರ" ತಂಡದ ಹಿತಾಸಕ್ತಿಗೆ ಅರ್ಥಾತ್ ರಾಷ್ಟ್ರದ ಹಿತಾಸಕ್ತಿಗೆ ಹಾನಿ ತಂದೊಡ್ಡುತ್ತಾನೆ ಎಂದು ತಿಳಿಯಲಾಗುತ್ತದೆ. ರಾಷ್ಟ್ರ ಹಿತಾಸಕ್ತಿಯ ಹೆಸರಿನಲ್ಲಿ ವೈಯಕ್ತಿಕ ಹಕ್ಕುಗಳ ದಮನದ ತರುವಾಯ ನಡೆಯುವ ಸಹಜ ಬೆಳವಣಿಗೆಗಳಿವು. ಇನ್ನು ಮಾಧ್ಯಮಗಳು, ಸರಕಾರೇತರ ಸಂಸ್ಥೆಗಳು ಪ್ರಭುತ್ವದ ಮಾನವ ಹಕ್ಕು ಉಲ್ಲಂಘನೆಗಳ ಬಗ್ಗೆ ವರದಿ ಮಾಡುವುದನ್ನು ಕೂಡ ರಾಷ್ಟ್ರ ಹಿತಾಸಕ್ತಿಗೆ ವಿರುದ್ಧವೆಂದು ಪರಿಗಣಿಸಬಹುದಾಗಿದೆ. ಮೋದಿ ಸರ್ಕಾರ ಈಗಾಗಲೆ ಕೆಲವು ಎನ್‌ಜಿಒ ಮತ್ತು ಮಾಧ್ಯಮಗಳ ವಿರುದ್ಧ ನಡೆಸುತ್ತಿರುವ ದಮನಕಾರಿ ಕಾರ್ಯಾಚರಣೆಗಳನ್ನು ಈ ಬೆಳಕಿನಲ್ಲಿ ನೋಡಬೇಕು.

ವಾಸ್ತವದಲ್ಲಿ "ಟೀಮ್ ಇಂಡಿಯಾ" ಎಂಬ ಪದಗುಚ್ಛ ಹುಟ್ಟಿಕೊಂಡು ಜನಪ್ರಿಯವಾದುದು ವಿಶ್ವ ಕಪ್ ಕ್ರಿಕೆಟ್ ಪಂದ್ಯಾವಳಿಗಳ ಸಂದರ್ಭದಲ್ಲಿ. ಆಗ ಅದು ಭಾರತೀಯ ಕ್ರಿಕೆಟ್ ಅಭಿಮಾನಿಗಳಲ್ಲಿ ತೀವ್ರ ಸಮರಶೀಲ ದೇಶಭಕ್ತಿಯ ಭಾವನೆಗಳನ್ನು ಬಡಿದೆಬ್ಬಿಸಿತ್ತು. ಆದರೆ ಆ "ಟೀಮ್ ಇಂಡಿಯಾ" ಒಂದು ಜಾಗತಿಕ ಸ್ಪರ್ಧೆಯಲ್ಲಿ ಭಾರತವನ್ನು ಪ್ರತಿನಿಧಿಸಿದ 11 ನಿಪುಣ ಆಟಗಾರರ ತಂಡವಾಗಿತ್ತೆ ಹೊರತು ಭಾರತದ 125 ಕೋಟಿ ಜನರ ತಂಡವಾಗಿರಲಿಲ್ಲ. ಅಲ್ಲಿ ಆಟಗಾರರನ್ನುಳಿದು ಮಿಕ್ಕವರ ಪಾತ್ರ ಬರೀ ಬೆಂಬಲ ಮತ್ತು ಪ್ರೋತ್ಸಾಹಕ್ಕೆ ಸೀಮಿತ: "ಟೀಮ್ ಇಂಡಿಯಾ"ಗೆ ಜೈಕಾರ ಹಾಕುವುದು, ಆಟಗಾರರಂತೆ ಡ್ರೆಸ್ ಮಾಡಿಕೊಳ್ಳುವುದು, ಮುಖಕ್ಕೆ ಬಣ್ಣ ಹಚ್ಚಿಕೊಳ್ಳುವುದು ಇತ್ಯಾದಿ. ತಂಡದ ಕಪ್ತಾನ, ಸದಸ್ಯರು, ಆಟದ ತಂತ್ರದ ಆಯ್ಕೆ ಇತ್ಯಾದಿ ವಿಚಾರಗಳಲ್ಲಿ ಅವರ ಮಾತು ನಡೆಯುವುದಿಲ್ಲ; "ಟೀಮ್ ಇಂಡಿಯಾ"ದ ಸದಸ್ಯರಲ್ಲದ ಅವರು ಆಟದಲ್ಲಿ ಭಾಗವಹಿಸಲೂ ಸಾಧ್ಯವಿಲ್ಲ; ಇವೆಲ್ಲದರ ಬಗ್ಗೆ ಅವರಿಗೆ ಯಾವ ಭ್ರಮೆಯೂ ಇಲ್ಲ.

ಈಗ ಇಡೀ ದೇಶವನ್ನು ಹೀಗೆ "ಟೀಮ್ ಇಂಡಿಯಾ" ಎಂದು ಕರೆಯುವಾಗ ಮೇಲಿನಂತೆ ದೇಶಭಕ್ತಿ ಹೇಗೂ ಸಿಕ್ಕೇಸಿಗುತ್ತದೆ. ಆದರೆ ಅದರ ಜೊತೆ ಒಂದು ವಿಶೇಷ ಬೋನಸ್ ಕೂಡ ಲಭ್ಯವಾಗುತ್ತದೆ. ಅದೇನೆಂದರೆ ಇಲ್ಲಿ ಎಲ್ಲರೂ "ಟೀಮ್ ಇಂಡಿಯಾ"ದ ಸದಸ್ಯರೆಂಬ ಭ್ರಮೆಗೆ ಒಳಗಾಗುತ್ತಾರೆ. ಬಿಜೆಪಿಯನ್ನು ಗೆಲ್ಲಿಸಿದ ಮತದಾರರ ಸಂಖ್ಯೆ ಶೇಕಡಾ 31ನ್ನು ದಾಟದಿದ್ದರೂ ಎಲ್ಲಾ 125 ಕೋಟಿ ಭಾರತೀಯರ ಕಪ್ತಾನನೆಂಬಂತೆ ಮಾತಾಡುವ ಮೋದಿ ಅವರೆಲ್ಲ ಸೇರಿ "ಟೀಮ್ ಇಂಡಿಯಾ" ಕಟ್ಟಬೇಕೆಂದು ಕರೆಕೊಡುತ್ತಾನೆ. "ಟೀಮ್ ಇಂಡಿಯಾ"ದ ಯಶಸ್ಸಿಗಾಗಿ, ಅದರ ಧವಳಕೀರ್ತಿಗಾಗಿ ಜಮೀನು, ಹಕ್ಕುಗಳು, ಸಬ್ಸಿಡಿ ಮುಂತಾದುವನ್ನೆಲ್ಲಾ ಬಿಟ್ಟುಕೊಡುವಂತೆ ಆದೇಶಿಸುತ್ತಾನೆ. ಆದರೆ ವಾಸ್ತವ ಏನೆಂದರೆ ಮೋದಿಯ ತಥಾಕಥಿತ "ಟೀಮ್ ಇಂಡಿಯಾ" ಅಂದರೆ ಕೇವಲ "ಅಭಿವೃದ್ಧಿ" ಮಂತ್ರ ಜಪಿಸುವ ಮೋದಿಭಕ್ತರ ಅರ್ಥಾತ್ ಭಾರತದ ಪ್ರಭುತ್ವ ಮತ್ತು ಅದರ ವಿವಿಧ ಮೀಟುಗೋಲುಗಳ ಮೇಲೆ ನಿಯಂತ್ರಣ ಹೊಂದಿರುವ ಅಥವಾ ಅವುಗಳನ್ನು ಅಲುಗಾಡಿಸಬಲ್ಲ ಮೋದಿನಿಷ್ಠರ ತಂಡ ಮಾತ್ರ. ಉಳಿದವರೆಲ್ಲ ಬರೀ ಉಘೇ ಎನ್ನುತ್ತ 'ಯಜಮಾನ'ನ ಆದೇಶಗಳನ್ನು ಪಾಲಿಸುತ್ತ ಇರಬೇಕಾದ ನೌಕರರು. ಈಗ ಹೇಳಿ ಇಂಥಾ ಅಪಾಯಕಾರಿ "ಟೀಮ್ ಇಂಡಿಯಾ" ಬೇಕೇ?

(ಆಧಾರ: 31.8.2015ರ ದ ಹಿಂದು ಪತ್ರಿಕೆಯಲ್ಲಿ ಜೆ. ಸಂಪತ್‌ರವರ ಲೇಖನ)

ಒಬ್ಬ ಗಣಪನ ಕಥೆ

ಕತೆ



ಪ್ರಸ್ತುತ ದಿನ

ಗಣಪ ತಲೆ ಎತ್ತಿ ಮೇಲೆ ನೋಡಿದ. ದಟ್ಟವಾದ ಕಪ್ಪು ಮೋಡಗಳು ಭೂಮಿಯನ್ನು ಅಪ್ಪಳಿಸಲು ಒಂದಾಗುತ್ತಿದ್ದವು. ಎಷ್ಟೊಂದು ದಟ್ಟವಾಗಿತ್ತೆಂದರೆ ಅವುಗಳೆಲ್ಲಾ ಕರಗಿ ಒಮ್ಮೆಲೆ ಭೂಮಿಯನ್ನು ಅಪ್ಪಳಿಸಿ ಭೋರ್ಗರೆಯುತ್ತಾ ಜಲಾವೃತಗೊಳಿಸುವ ಹುನ್ನಾರ ಮಾಡುತ್ತಿವೆಯೇನೋ ಎಂಬಂತೆ. ಸ್ವಲ್ಪ ತಲೆತಗ್ಗಿಸಿ ಗಣಪ ಎದುರಿಗಿದ್ದ ಜನರನ್ನು ಒಮ್ಮೆ ನೋಡಿದ. ದುಗುಡ ತುಂಬಿದ ಜನ. ಮುಖದ ಮೇಲೆ ಸೂತಕದ ಛಾಯೆ. ಮಳೆ ಬಾರದಿರಲಿ; ನಮ್ಮ ವಿಜೃಂಭಣೆ, ಕಾರ್ಯಕ್ರಮಗಳು ಹಾಳಾಗದಿರಲಿ ಎಂದು ಮನದಲ್ಲಿ ಪ್ರಾರ್ಥಿಸುತ್ತಿದ್ದರು. ಆದರೆ ಗಣಪನಿಗೆ ಮಳೆ ಬೇಕಾಗಿತ್ತು. ರಭಸದ ಮಳೆ; ಭೋರ್ಗರೆಯುವ ಮಳೆ; ಜಲಪ್ರಳಯವಾಗಿಸುವ ಮಳೆ, ಎಲ್ಲವನ್ನು ಕೊಚ್ಚಿಕೊಂಡು ಹೋಗುವ ಮಳೆ; ಹೊಸ ಜಗತ್ತನ್ನು ಸೃಷ್ಟಿಸುವ ಮಳೆ; ಹೊಸ ಮನ್ವಂತರವನ್ನುಂಟುಮಾಡುವ ಮಳೆ.

* * *

1929

"ಅಯ್ಯೋ, ಇವ ಯಾಕ ಇವತ್ತು ಅತ್ಲಿಂದ ಇತ್ತಾಗ, ಇತ್ಲಿಂದ ಅತ್ತಾಗ ನನ್ನನ್ನ ಎಳ್ಕೊಂಡು ಓಡಾಡಕತ್ತಾನ? ನನ್ನನ್ನ ಎಲ್ಲಿ ಚೆಲ್ಲಿ ಬಿಡ್ತಾನೋ? ಎಲ್ಲಿ ಇಡಾಕ ಹೊಂಟಾನ? ಏನು ಪರೇಶಾನ್ ಬಂತಪ್ಪ ನನಗ ಇವನ ಕೈಯಾಗ!? ಯಾವಾಗ ನಾನು ಇವನಿಂದ ಸೃಷ್ಟಿಯಾದ್ನೋ, ಅವತ್ತಿಂದ ನಂಗ ನಿದ್ದೀನ ಇಲ್ಲ, ಆದ್ರ ಇವನ್ನ ನೋಡಿದ್ರ ನಂಗ ಅಯ್ಯೋ ಪಾಪ ಅನಿಸ್ತೈತಿ. ಸಾಬರ ಪೈಕಿ ಅದಾನು ಇವ. ಅದೇನು ಆತೋ ಇವನ್ಗ! ನನ್ನನ್ನ ಎಲ್ಲೋ ನೋಡಿದ್ನಂತ. ಅದಾ ರೀತಿ ಇರೋ ಹಂಗ ಮತ್ತೊಂದು ಗಣಪನನ್ನ ಸೃಷ್ಟಿ ಮಾಡ್ತೀನಂತ ಹೊಂಟ. ನಾನು ಹುಟ್ಟಿದ್ದು ಆಗ್ಲೆ, ಈ ಸಾಬನ ಕೈಯಾಗ! ಅಜ್ಲಫ್ ಖಾನ್ ಅಂತ ಇವನ ಹೆಸರು ಐತಿ. ನಾನು ಗುಂಡ, ಗುಂಡಾಗಿ, ಸುಂದರವಾಗಿ, ಚಿತ್ರ-ವಿಚಿತ್ರವಾಗಿ ಇರೋದನ್ನ ಅವ ನೋಡಿ ಅದ ರೀತಿ ನನ್ನನ್ನ ಜೇಡಿಮಣ್ಣು ಕೆಂಪು ಮಣ್ಣು ಬೆರಕಿ ಮಾಡಿ ಸೃಷ್ಟಿ ಮಾಡಿದ. ಅವನ ಕಸುಬು ಕುಂಬಾರ್ಕಿ ಇತ್ತು, ಆದರೆ ಯಾವತ್ತು ನನ್ನಂತವರನ್ನು ಮಾಡಿರ್ಲಿಲ್ಲ. ಊರ್ನಾಗ ಇರೋ ಹತ್ತಾರು ಸಾಬ್ರ ಮಂದ್ಯಾಗ ಇವನು ಒಬ್ಬ. ಊರಾಗಿರೊರೆಲ್ಲಾ ಬಾಂಬ್ರು ಮತ್ತ ಲಿಂಗಾಯತ್ರು. ಅವರು ಬಾಳ ಮಂದಿ ಅದಾರ ಈ ಹಳ್ಳ್ಯಾಗ. ಊರ ಹೊರಗ ಹೊಲೆರು ಅದಾರು. ಈ ಹೊಲೆರಿಂದ್ಲೆ ನಂಗ ಈಗ ಈ ಪಜೀತಿ. ಹೆಂಗಾತು ಅಂತ ಹೇಳ್ತಿನಿ ಕೇಳ್ರಿ!

ನಾನು ಯಾವತ್ತು ಬೀದ್ಯಾಗ ಬಂದಿರ್ಲಿಲ್ಲ, ಅದ್ಯಾರೋ ಟಿಳಕ ಅಂತ. ಅವ ನನ್ನ ಬೀದ್ಯಾಗ ಇಟ್ಟ. ಇವನನ್ನ ನೋಡಿ ಇಲ್ಲಿನ ಬಾಂಬ್ರು ಮತ್ತು ಲಿಂಗಾಯತರು ಅವನಂಗ ನನ್ನನ್ನ ಪೂಜಿ ಮಾಡಾಕ ಚಾಲು ಮಾಡಿದ್ರು. ಬಾಂಬ್ರಂತು ಮೊದಲಿಂದ್ಲು ನನ್ನಂತೋರ್ನ ಸೃಷ್ಟಿ ಮಾಡೋದು; ಅದಕ್ಕ ಒಂದಷ್ಟು ಆಚಾರ-ವಿಚಾರ, ಹೋಮ, ಹವನ, ದಾನ-ದತ್ತಿ ಕಸರಾ-ಮುಸ್ರಿ, ಅಂತ ಜೀವ ಹಿಂಡೋದು ಐತೇ ಐತಿ! ಇದರ ಜೊತಿಗೆ ಬೇರೆಯೋರ ದೇವ್ರು-ದಿಂಡ್ರನ್ನ ವಿಷ್ಣುವಿನ ಅವತಾರ ಅಂತ ಹೇಳಿ ಒಳಗ ಹಾಕ ಕೊಳ್ಳೊದು ಐತೇ ಐತಿ! ಹಂಗಾಗಿ ಟಿಳಕ ಇವರಿಗೆ ಮತ್ತೊಬ್ಬ ಬ್ರಹ್ಮನ ಹಂಗ ಕಂಡ. ನನ್ನನ್ನ ಬೀದಿಗೆ ತಂದು ಹೋಮ-ಹವನ ಶುರು ಮಾಡಿದ್ರು. ನನ್ನ ಮೈಯಾಗ ಜನಿವಾರ ಹಾಕಿದ್ರು. ಈಗ ಇವರ ಕೈಯಾಗ ಉಸಿರು ಕಟ್ಟಿದಂಗಾಗೈತಿ. ಆದ್ರ ಈ ಲಿಂಗಾಯತ್ರಿಗೆ ಏನಾಗೈತಿ! ಬಾಂಬ್ರು ನನ್ನ ಮ್ಯಾಗ ಜನಿವಾರ ಹಾಕಿದ್ರು ಅಂತ, ಇವರು ಅದನ್ನು ಕಿತ್ತೊಗೆದು, ಶಿವದಾರ ಹಾಕ್ಯಾರ! ಜೊತಿಗೆ ನನ್ನ ಕತ್ತ ಸುತ್ತ ಲಿಂಗ! ಮ್ಯಾಗ ವಿಭೂತಿ ಬೇರೆ! ಎಷ್ಟು ಬಸವಣ್ಣ ಬಂದ್ರೇನು?! ಎಷ್ಟು ಅಲ್ಲಮ ಹುಟ್ಟಿದ್ರೇನು?! ಏನೋ! ಒಟ್ಟ ಇವರಿಬ್ಬರು ಸೇರಿ ನನ್ನ ಬೀದ್ಯಾಗ ಇಟ್ಟಾರ. ತಂದು ಪೂಜೆ ಮಾಡಕ ಹತ್ತ್ರು! ಇವರಿಬ್ಬರ ಪ್ರಭಾವ ಕಾಂಗ್ರೆಸ್ ಗಿಡದಾಂಗ ಹರಡ್ತು, ಪ್ರತಿ ವರ್ಷ ಗಣೇಶನ ಹಬ್ಬ ಅಂತ ಎಲ್ಲಾ ಕಡೆ ಪೆಂಡಾಲ್ ಹಾಕಿ, ವಾದ್ಯ ನುಡಿಸಿ, ಶೆರೆ ಕುಡಿದು, ಕುಣಿದು-ಕುಪ್ಪಳಿಸಿ, ಚೀರಾಡಿ, ಗದ್ದ ಮಾಡಿ, ಚಾಷ್ಟಿ ಮಾಡೋದು ಬಾಳ ಆತು. ಒಮ್ಮೊಮ್ಮೆ ಅದ್ಯಾರೊ ಗಾಂಧೀ ಅಂತ. ಅವ ಬಂದಾಗ್ಲೆಲ್ಲಾ ಊರ ತುಂಬಾ ಜನ-ಜಾತ್ರಿ. ಅವನ ಸಂಗಡ ಕೂಡಿ ನಂಗ ಮಂಗಳಾರತಿ ಎತ್ತುತ್ತಿದ್ರು. ಇದನೆಲ್ಲಾ ನೋಡಿ, ನೋಡಿ ಈ ಊರಿನ ಹೊಲೇರ್ಗ ಸುಮ್ನ ಕುಂದ್ರಕ್ಕ ಆಗಲಿಲ್ಲ, ಅದ್ಯಾರು ಅವರ ತಲಿ ಕೆಡಿಸಿದ್ರೊ, ಏನೋ, ಬಾಂಬ್ರು-ಲಿಂಗಾಯತರ ಹಂಗ "ನಾವು ಕೂಡ ಗಣೇಶ ಹಬ್ಬ ಮಾಡ್ಬೇಕು ನಮ್ಮ ಓಣ್ಯಾಗ" ಅಂತ ನಿರ್ಧಾರ ಮಾಡಿದ್ರು. ಇಲ್ಲಿಂದ ಶುರು ಆತು ನೋಡ್ರಿ ನನ್ನ ಪರೇಶಾನ್.

* * *

"ಏ, ಅಜ್ಲಫ. ಮನ್ಯಾಗ ಅದಿಯೆನೋ?" ಹೊಲೆರ ಪೈಕಿ ಈರಪ್ಪ ಕೀರಲು ದನಿಯಲ್ಲಿ ಕೂಗಿದ. ಗಾಢನಿದ್ದೆಯಲ್ಲಿದ್ದ ಅಜ್ಲಫ್ ತಟಕ್ಕನೆ, ಗಾಬರಿಯಿಂದ ಎದ್ದ. ನಿದ್ದೆಗಣ್ಣಿನಲ್ಲಿದ್ದ ಅವನು ಕಣ್ಣುಗಳನ್ನು ತೀಡುತ್ತಾ "ಇಸ್ ರಾತ್ ಮೆ ಕೌನ್ ಬಾಡ್ಕೊ ಆಗಯ?" ಅಂದು ಬೈಯ್ದುಕೊಳ್ಳುತ್ತಾ ಬಾಗಿಲು ತೆಗೆದ.

"ಲೇ, ಅಜ್ಲಫ. ಹೊರಗ ಬಾರೋ. ಮಾತಾಡೊದು ಐತಿ ನಿನ್ ಹತ್ರ" ಎಂದು ಹೇಳುತ್ತಾ ಅವನನ್ನು ಮನೆಯ ಹಿಂಬಾಲಿಗೆ ಯಾರಿಗೂ ಗೊತ್ತಾಗದ ಹಾಗೆ ಕರೆದುಕೊಂಡು ಹೋದರು. ಅವರ ಮುಖ ನೋಡುತ್ತಿದ್ದ ಹಾಗೆ ಯಾರು ಬಂದಿದ್ದು ಅಂತ ಗೊತ್ತಾಗಿ ಗಾಬರಿ ಕೂಡ ಆಯಿತು. "ಏ ಹೊಲೆಯ ಲೊಗ್ ಯಹ ಕ್ಯು ಆಗೆಯೆ? ವೊ ಭಿ ಇಸ್ ರಾತ್ ಮೆ" ಎಂದು ಮನಸ್ಸಿನಲ್ಲಿ ಬೈಯ್ದುಕೊಳ್ಳುತ್ತಾ ಅವರ ಜೊತೆಗೆ ಮನೆಯ ಹಿಂಭಾಗಕ್ಕೆ ಹೋದ.

"ಯಾಕ್ ಬಂದ್ರಿ ಇಲ್ಲಿಗೆ. ಅದು ಈ ಹೊತ್ತ್ನಾಗ? ನನ್ ಹತ್ರ ಏನು ಕೆಲ್ಸ ಐತಿ ನಿಮ್ದು?" ಅಜ್ಲಫ್ ಗಾಬರಿಯಿಂದ ಕೇಳಿದ.

"ಲೇ, ಅಜ್ಲಫ. ನಿನ್ನಿಂದ ಒಂದು ಕೆಲ್ಸ ಆಗ್ಬೇಕಾಗೈತಿ. ಮಾಡ್ಲೇಬೇಕು. ಇಲ್ಲ ಅನ್ನಂಗಿಲ್ಲ, ನೋಡು"

"ಏನ್ ಕೆಲ್ಸ ನನ್ನ ಹತ್ರ? ಊರಾಗಿನ್ ಮಂದಿ ನೋಡಿದ್ರ ನಿಮ್ದು ನನ್ದು ಚಮಡಾ ಸುಲಿತಾರ. ಜ್ಯಾಕಿ. ನೀವು ಇಲ್ಲಿಂದ ನಡೀರಿ. ನಿಂದ್ರ ಬ್ಯಾಡ್ರಿ ಇಲ್ಲಿ" ಎಂದು ಹೇಳುತ್ತಾ ಅವರನ್ನು ಅಲ್ಲಿಂದ ಕಳಿಸಲು ವಿಫಲ ಪ್ರಯತ್ನ ಮಾಡಿದ.

"ಅಲ್ಲಲೇ, ಅಜ್ಲಫ. ಹಂಗಾಗ್ಬಾರ್ದು ಅಂತ ನಾವು ಈ ನಡು ರಾತ್ರ್ಯಾಗ ಬಂದೀವಿ. ನಮ್ಮ ಮಾತ ಕೇಳ! ನಿಂಗ ರೊಕ್ಕ ಕೊಡ್ತೀವಿ."

ರೊಕ್ಕ ಅಂತ ಕೇಳಿದಾಕ್ಷಣ ಅಜ್ರಫನ ಕಿವಿಗಳು ನಿಮಿರಿದವು. ತಕ್ಷಣ "ಏನು ಕೆಲ್ಸ್ ಐತಿ ಹೇಳ್ರಿ ಲಗೂನ" ಅಂದ.

"ನೋಡು, ನಮಗೊಂದು ಗಣಪನ ಮೂರ್ತಿ ಮಾಡ್ಕೊಡು. ಈ ವರ್ಷ ನಾವು ಕೂಡ ಗಣಪನ ಹಬ್ಬ ಮಾಡ್ತೀವಿ. ಹೆಂಗಿದ್ರು ನಿಂದು ಕುಂಬಾರ್ಕಿ ಅದ. ಮಣ್ಣಿನ ಸಮಸ್ಯೆ ಇಲ್ಲ ನಿಂಗ. ಒಂದು ಚೊಲೊ ಗಣಪ್ಪನ್ನ ಮಾಡಿಕೊಡು. ಚೊಲೊ ರೊಕ್ಕ ಕೊಡ್ತೀವಿ."

"ಹಂಗಲ್ಲಪ್ಪ, ನಾನು ಸಾಬ್ರವ. ನಂಗು, ಗಣಪ್ಪಂಗು ಎಲ್ಲಿಂದ ಎಲ್ಲಿ ಸಂಬಂಧ ಹಚ್ಚೀರಿ? ಅದೇನು ಹುಡುಗಾಟ ಅದ ಏನು? ನಿಮಗೆಲ್ಲೋ ತಲಿ ಕೆಟ್ಟೈತಿ. ನಸೀಬ ಖರಾಬ್ ಆಗೈತಿ. ಅದಕ್ಕ ಹಿಂಗ ಮುಕುಳಿ ಸುಟ್ಟ ಬೆಕ್ಕಿನಾಂಗ ಆಡ ಕತ್ತೀರಿ. ನಡ್ರಿ, ನಡ್ರಿ" ಎಂದು ಅಜ್ಲಫ್ ಅವರನ್ನು ಅಲ್ಲಿಂದ ಹೊರಡಿಸಲು ಮತ್ತೊಮ್ಮೆ ಪ್ರಯತ್ನಪಟ್ಟ. ಆದರೆ ಬಂದ ಹೊಲೆಯರು ಇವನನ್ನು ಮತ್ತಷ್ಟು ಒತ್ತಾಯ ಮಾಡಿದರು. ಗಣಪನನ್ನು ಗುಪ್ತವಾಗಿ ತಯಾರು ಮಾಡಬೇಕೆಂದು, ಅದಕ್ಕಾಗಿ ಇನ್ನೂ ಹೆಚ್ಚು ರೊಕ್ಕವನ್ನು ಕೊಡುತ್ತೇವೆಂದು ಆಸೆ ತೋರಿಸಿದರು. ಕೊನೆಗೂ ಅವರ ಕೋರಿಕೆಗೆ ಮಣಿದ ಅಜ್ಲಫ ಗಣಪನನ್ನು ತಯಾರಿಸಲು ಒಪ್ಪಿಕೊಂಡ. ಒಂದು ಗೊತ್ತಾದ ರಾತ್ರಿವೇಳೆಯಲ್ಲಿ ಆ ಹೊಲೆಯರು ಬಂದು ಗಣಪನನ್ನು ತಮ್ಮ ಓಣಿಗೆ ಒಯ್ಯುವಂತೆ ಒಪ್ಪಂದವಾಯಿತು.

ಅಜ್ಲಫ ಗಣಪನನ್ನು ಗುಪ್ತವಾಗಿ ತಯಾರಿಸಲು ಶುರು ಮಾಡಿದ. ಊರಲ್ಲಿನ ಬಾಂಬ್ರಿಗೆ, ಲಿಂಗಾಯತರಿಗೆ ಮತ್ತು ತನ್ನ ಇತರ ಸಾಬರಿಗೆ ಗೊತ್ತಾಗಬಾರದೆಂದು ನಡು ರಾತ್ರಿಯಲ್ಲಿ ಕೆಲಸ ಮಾಡುತ್ತಿದ್ದ. ತನ್ನ ಜನಕ್ಕೆ ಗೊತ್ತಾದರೆ ಕಾಫಿರ್ ಅಂತ ಬೈಯ್ದು ಊರ ಹೊರಗೆ ಅಟ್ಟುವ ಭಯ ಇದ್ದುದರಿಂದ ವಿಷಯವನ್ನು ಯಾರಿಗೂ ಹೇಳದೆ ಬಹಳ ರಹಸ್ಯವಾಗಿ ಇಟ್ಟ.

"ಆ ಸಾಬ ನನ್ನನ್ನ ಸೃಷ್ಟಿಸಿದ್ದು ಹೆಂಗ ನೋಡ್ರಿ. ಒಂದು ಆನಿ ತಲಿ ಹಾಕ್ದ. ಅಗಲವಾದ ಎರಡು ಕಿವಿಗಳು ಹಾಕಿ ನನಗ ಎರಡು ಹಲ್ಲುಗಳನ್ನ ಹಾಕೋದು ಗೊತ್ತಾಗದ ಮರೆತ. ಹೆಂಗ ಗೊತ್ತಾಗ್ಬೇಕು ಅವಂಗ ನಾನು ಏನು ಅದಿನಿ ಅಂತ? ಕೆಳಗೆ ಒಂದು ಇಲಿ ಇಟ್ಟಿದ್ದು ಸರಿ ಅನಿಸ್ತು. ಎರಡು ಕೈ ಕೊಟ್ಟ. ಕೈಯಾಗ ಏನೂ ಇಡಲಿಲ್ಲ. ಕಾಯಿ-ಕಡಬು ಏನೂ ಇಲ್ಲ. ನನ್ನ ನಶೀಬ ಚೊಲೊ ಐತಿ. ಇವ ನನಗ ಜನಿವಾರ ಆಗ್ಲಿ, ಶಿವದಾರ ಆಗ್ಲಿ ಹಾಕ್ಲಿಲ್ಲ. ಅವನ್ಗ ಗೊತ್ತಿದ್ರ ಹೌದಲ್ಲೊ ಹಾಕಾಕ!? ಹ, ಹ. ಆದರ ನನ್ನ ಮಾರಿನ ಎಂಥಾ ಚೊಲೊ ಮಾಡಿದ್ದ ಅಂತೀನಿ! ಒಮ್ಮೆ ಎದುರಿಗಿದ್ದ ಕನ್ನಡಿಯಾಗ ನನ್ನ ತಸ್ವೀರ್ ನೋಡಿದೆ. ಎಂಥಾ ಖುಷಿ ಆತು ಅಂದ್ರ ಈ ಸಾಬನ ಮ್ಯಾಗ ಮೆಚ್ಚಿಗಿ ಉಕ್ಕಿ ಬಂತು. ಆದರ ಕೈಯಾಗ ಏನೂ ಇಡಲಿಲ್ಲ. ತಿನ್ನಾಕ ಏನೂ ಇಲ್ದಂಗ ಆತು.. ಹೊಟ್ಟಿ ಹಸಿಯಕತ್ತೈತಿ!"

ಗಣಪನ ಮೂರ್ತಿ ಪೂರ್ತಿ ಆಗಿದೆಯೆಂದು, ಬಂದು ಅದನ್ನು ತೆಗೆದುಕೊಂಡು ಹೋಗಿರೆಂದು ಅಜ್ಲಫ ಹೊಲೆಯರಿಗೆ ಹೇಳಲು ಅವರ ಕೇರಿಗೆ ಬಂದ. ಬಂದು ನೋಡಿದರೆ ಅವನಿಗೆ ಆಘಾತ ಕಾದಿತ್ತು, ಕೇರಿಯಲ್ಲಿರುವ ಎಲ್ಲಾ ಹೊಲೆಯರು ತಮ್ಮ ಗಂಟು-ಮೂಟೆ ಕಟ್ಟಿಕೊಂಡು ಗುಳೆ ಹೋಗಲು ತಯಾರಿ ನಡೆಸಿದ್ದರು. ಅವರ ಹತ್ತಿರ ಹೋಗುತ್ತಲೆ ಅಜ್ಲಫ ಈರಪ್ಪನನ್ನ ಕರೆದು,

"ಯಾಕಲೇ, ಈರ ಎಲ್ಲಿಗೆ ಹೊಂಟ್ರಿ? ಮ[...] ಗಣಪನನ್ನ ಮಾಡಾಕ ಹೇಳಿ, ರೊಕ್ಕ ಕೊಡದ ಓಡಿ[...] ತಯಾರಿ ನಡೆಸಿರೇನು? ನಾನು ನಿಮ್ಮನ್ನ ಬಿಡಂಗಿಲ್ಲ" ಎಂದು ಜೋರಾಗಿ ಮಾತನಾಡಿದ. ಇದಕ್ಕೆ ಈರ ಕ[...]

"ಲೇ, ಅಜ್ಲಫ, ನೀನು ಬದುಕಿದ್ರ ನಿನ್ನಿಂದ ಆ[...] ಮೂರ್ತಿನ ತಗೊತಿವಿ. ನಾವು ಬದುಕಿದ್ರ ಅವ[...] ನಿನ್ನನ್ನ ಕರ್ದು ಕಾಯಿ-ಕಡುಬು ಹಾಕ್ತೇವಿ. [...] ಮುಕುಳಿಗೆ ಈಗ ಬೆಂಕಿ ಬಿದ್ದೈತಿ. ಇಲ್ಲಿಂದ ಓ[...] ಬಿಟ್ಟು ಬೇರೆ ದಾರೀನೇ ಇಲ್ಲ. ನೀನು ಗಂಟು [...] ಕಟ್ಟ ನಮ್ಮ ಸಂಗಡ ಬಾ. ಎಲ್ಲಾದ್ರು ದೂರ ಹೋ[...] ಎಂದು ವದರಿದ. ಅಜ್ಲಫನಿಗೆ ಏನು ನಡೀತಾ [...] ಅಂತ ಗೊತ್ತಾಗದೆ ಗಾಬರಿಯಾದ. ಏನು ಆಯ[...] ಓಡಿ ಹೋಗುವಂತ ತುರ್ತು ಏನು ಬಂತು[...] ಈರನನ್ನು ಕೇಳಿದಾಗ ಆತ ನಡೆದದ್ದನ್ನೆಲ್ಲಾ ಹೇ[...]

"ಐದಾರು ದಿನಗಳ ಹಿಂದ ಬೆಂಗಳೂರು [...] ಚಾಮರಾಜಪೇಟ್ಯಾಗ ನನ್ನ ಮೂರ್ತಿ ಮ್ಯಾಗ [...] ಎಬರೇಷಿಗಳು ಕಪ್ಪು ಬಣ್ಣ ಹಾಕಿದ್ರಂತ. [...] ಅಮಾವಾಸೆಗೊಮ್ಮೆ, ಹುಣ್ಣಿಮೆಗೊಮ್ಮೊ ನೋಡುತ[...] ಶಾಲೆಯ ಬಾಂಬ್ರು ಹುಡುಗ್ರು ಈ ಕೆಲಸ [...] ಅಂತ ತಿಳಿದು ದೊಡ್ಡ ರಂಪ ಮಾಡಿದ್ರಂತ. ಕ್ರ[...] ಬಾಂಬ್ರು ಹುಡುಗರ ಜೊತಿಗೆ ಇತರ ಉಡಾ[...] ಅನೇಕ ಮಂದಿ ಸಾಬರಿಗೆ ಕಾಯಿ-ಕಡುಬು ತಿ[...] ಅದಕ್ಕ ಈ ಸಾಬರು ಕೂಡ ಇವರ ಮೇಲೆ [...] ಒಂದೆರಡು ಖೂನಿಗಳಾದವು. ಇವರನ್ನ ಬಿಡಿಸಕ್ಕ [...] ಬಂದಾಗ ಅವರ ಗುಂಡೇಟಿಗೆ ಒಬ್ಬಿಬ್ರು ಶಿವ[...] ಸೇರಿದ್ರಂತ. ಸಾವಕಾಶವಾಗಿ ಶಹರಿನ ಇನ್ನೂ ಅ[...] ಗಲಭೆಗಳು ಆದ್ವಂತ. ಪೇಪರ್‌ನವರಂತೂ ಇದ[...] ಖಬರ್ ಅಂತ ಹೇಳಿ ಕರ್ನಾಟಕದ ಪ್ರಪ್ರಥಮ[...] ಕೋಮುವಾದದ ಗಲಭೆ ಎಂದು ವಿವಾದ[...] ಸುರಿದ್ರಂತ. ಮೈಸೂರಿನ ಮಹಾರಾಜರ ತನಕ [...] ಗಲಭೆ"ಯ ವಿಷಯ ಹೋಗಿ, ಚಾಮರಾಜಪೇಟ[...] ಬೇರೆ ಕಡಿ ಅನಿರ್ದಿಷ್ಟ ಕರ್ಫ್ಯೂ ಹಾಕಿದ್ರಂತ. ಹಿಂಗ[...] ನಮ್ಮೂರಿನ ಬಾಂಬ್ರು-ಲಿಂಗಾಯತರಿಗೂ ಕೂ[...] ಗೊತ್ತಾತು. ಜೊತಿಗೆ ಯಾರೋ ಎಬರೇಷಿಗಳ[...] ಹತ್ತಿರ ಹೊಲೆಯರು ಗಣಪನ ಮೂರ್ತಿ[...] ಮಾಡಿಕೊಡಲು ಹೇಳ್ಯಾರಂತ, ಅವರು ಕೂ[...] ಓಣ್ಯಾಗ ಗಣಪನ ಹಬ್ಬ ಮಾಡ್ತಾರಂತ ಸುದ್ದಿನ [...] ಸಾಬರು, ಹೊಲೆಯರು ಗಣಪನ ಸುದ್ದಿಗೆ ಬಂ[...] ಇಷ್ಟೆಲ್ಲಾ ಅನಿಷ್ಟಗಳು ಆಗಕತ್ತಾವಂತ ಹನುಮಂತ[...] ಜೋಯಿಸ ಭವಿಷ್ಯವಾಣಿ ನುಡಿದಿದ್ದೆ ತಡ ಅ[...] ಹೊಲೆಯರನ್ನ ಮುಗಿಸಲು ಊರ ಜನ ತಯಾ[...] ಹತ್ತಿದರು. ಊರಾಗಿನ ಸಂತ್ಯಾಗ ಒಂದೆರಡು [...] ಹಣ್ಣು-ಗಾಯಿ, ನೀರು-ಗಾಯಿ ಮಾಡಿದ್ರಂತ. [...] ಹೊಲೆರ ಕಿವಿಗೂ ಬಿತ್ತು, ಇನ್ನು 'ನಮ್ಮ ಗ[...] ಅಂಗ' ತಿಳಿದು ಊರು ಬಿಟ್ಟು ಗುಳೆ ಹೋಗಲ[...] ನಡೆಸುತ್ತಿದ್ದಾಗ ಅಜ್ಲಫ ಅವರ ಓಣಿಗೆ ಹೋಗಿ[...] ವಿಷಯ ತಿಳಿದ ಅಜ್ಲಫ ತಣ್ಣಗೆ ನಡಗಕ್ಕ ಶುರು[...] ಮಾರಿ ಮ್ಯಾಗ ಬೆವರ ಹನಿಗಳು ಮೂಡಿದ್ವು. ತ[...] ತಾನು ಗಂಟು ಮೂಟೆ ಕಟ್ಟಿ, ದೂರದ ಊ[...] ಕಿತ್ತ ಆದರೆ ಹೋಗುವ ಮೊದಲು ನನ್ನನ್ನು ಅ[...] ಗೊತ್ತಾಗದ ಜಾಗದಾಗ ಬಚ್ಚಿಟ್ಟು, ಒಮ್ಮೆ ಸಾಬರ [...] ನನಗೆ ಕೈಮುಗಿದು ಕಣ್ಮರೆಯಾದ.

ಪ್ರಸ್ತುತ ದಿನ

"ಈಗ ನೋಡ್ರಿ ಬರೋಬ್ಬರಿ 85 ವ[...] ನನಗಿನ್ನು ಮುಕ್ತಿ ಸಿಕ್ಕಿಲ್ಲ. ಆ ಸಾಬರ ಮನ[...] ಬಿಟ್ಟುಹೋದ ಮ್ಯಾಗ ಅಲ್ಲೇ ಬಾಳ ವರ್ಷ ಇರ[...] ನನ್ನ ಕಡಿ ನೋಡ್ಲಿಲ್ಲ, ನನ್ನ ಮ್ಯಾಗ ಜೊ[...] ಹತ್ತಕತ್ತಿದ್ವು; ಜೇಡರ ಬಲಿ ಬಂದ್ವು; [...] ಹರಿದಾಡಕತಿದ್ವು; ಧೂಳ-ಪಾಳ ಮೈಮ್ಯಾಗ ಹ[...] ಆದ್ರ ಮೈಕಟ್ಟು ಮಾತ್ರ ಬಾಳ ಮಜಬೂತ ಇ[...] ಎಂಥ ಮಣ್ಣಿಂದ ಮಾಡಿದ್ದ ನನ್ನನ್ನ ಅವ! [...] ಬೇಕು ಆ ಸಾಬರನವನನ್ನ. ಈಗ ಎಲ್ಲಿ [...] ಜೀವಂತ ಆದಾನೋ ಇಲ್ಲೊ? ಅಂತು ಹಿ[...] ಬಾಳ ವರ್ಷ ಇದ್ದಲ್ಲೇ ಇದ್ದೆ. ಎಷ್ಟು ವರ್ಷಾನೊ[...] ಒಂದು ದಿನ ಅದು ಯಾರೋ ಕೈಯಾಗ [...] ಬಿದ್ದೆ. ಹೆಂಗೋ, ಏನೋ! ಅವ ನನ್ನನ್ನ ತ[...] ಎತ್ಕೊಂಡು ಹೋದ. ಸ್ವಲ್ಪ ದಿನಗಳಾದ ಮ[...] ಅವ ಗಣೇಶನನ್ನ ಮಾರೋ ವ್ಯಾಪಾ[...] ಮೊದಮೊದಲು ನಂಗ ಇವನ ಮ್ಯಾಗ ಹೇ[...] ನನ್ನನ್ನೂ ಇವರು ಬಿಡಂಗಿಲ್ಲಲ್ಲಪ್ಪ ಅಂತ! ಆದ[...] ಅವನ ಪರಿಸರಕ್ಕ ಒಗ್ಗಿಹೋದೆ. ನಾನೂ ಕ[...] ದಿನ ಖರೀದಿ ಆಗಿ ಬೇರೆ ಗಣಪಗಳ ಹ[...] ನೀರಾಗಿ ಹೋಗಿ, ಈ ಭವದ ಹಂಗ ತ[...] ಅಂತ ಆಶೆ ಪಡಕ್ಕ ಶುರು ಮಾಡ್ದೆ. ಆದ್ರ [...] ನನ್ನ ದುರಾದೃಷ್ಟ ಕೈ ಬಿಡಲಿಲ್ಲ, ನನ್ನ [...] ವರ್ಷಕೊಪ್ಪತ್ತು ಜನ ನನ್ನನ್ನ ನೋಡೋಕ[...]

...ನೋಡಿ ಹೊಗ್ತಿದ್ರ ಹೊರತು. ಯಾರೂ ಖರೀದಿ ...ಸ್ಲ. ಹಿಂಗ್ಯಾಕ ಅಂತ ನಾನು ಚಿಂತಿ ಮಾಡಾಕ ...ನಂತರ ತಿಳೀತು! ನಾನು ಕೂಡ ಬೇರೆ ಗಣಪನಂಗ ...ಬಣ್ಣದಾಂಗ ಇದ್ದಿದ್ರ ಇಷ್ಟೊತ್ತಿಗೆ ಖರೀದಿ ಆಗಿ, ...ಕರಗಿ, ಮತ್ತೊಮ್ಮೆ ಹುಟ್ಟಿ ಬರ್ಬೋದಾಗಿತ್ತು. ...ನು ಮಾಡ್ಲಿ ನನ್ನ ಕರ್ಮ! ಬರೀ ಮಣ್ಣು ನಾನು. ...ರೆಲ್ಲಾ ನಾನು ಚೊಲೊ ಇಲ್ಲಾಂತ; ನಂಗ ಕೋರಿ ...ನೆಟ್ಟಗಿಲ್ಲಾಂತ ಮತ್ತ ನನ್ನ ತಲಿ ಮ್ಯಾಗ ಕಿರೀಟ ...ನನ್ನನ್ನ ಖರೀದಿ ಮಾಡ್ಲೇ ಇಲ್ಲ. ಮಿಕ್ಕ ಗಣಪಗಳಿಗೆ ...ನಾಕ್ ಕೈಗಳದಾವು. ನಂಗ ಎರಡ! ಮತ್ತ ನನ್ನ ...ಗ ಏನೂ ಇಲ್ಲ. ನನ್ನ ಮೈ ಮ್ಯಾಗ ಬೇರೆ ಗಣಪಗಳ ...ವಿವಿಧ ಬಣ್ಣಗಳು ಇದ್ದಿದ್ರುಂದ್ರ ನಾನೂ ಕೂಡ ...ಪನಂಗ ಮನೆಯಾಗ ಪೂಜೆ ಮಾಡಿಸ್ಕೊಬಹುದಿತ್ತು. ...ಥ ಗಣಪಗಳು ಅದಾವು ಅಂತೀನಿ! ನನಗಿಂತ ...ಪಟ್ಟು ಎತ್ರ ಇರೋ ಗಣಪಗಳನ್ನ ನೋಡ್ಬೇಕು! ಅವುಗಳ ಮಾರಿ ಮ್ಯಾಗ ಎಂಥಾ ತೇಜಸ್ಸು! ...ಂಗಾರ! ಅವರ ಕೈಯಾಗ ಎಂತೆಂಥ ಆಯುಧಗಳು ...ವು! ಈ ಶಹರ ಮಂದೀನ ಹಿಂಗ! ಎಲ್ಲಾ ...ಳಕು. ಆದ್ರ ನನ್ನ ನಶೀಬ ಖರಾಬ ಐತಿ ನೋಡ್ರಿ. ...ನ್ನೊರು ಇರ್ಲಿಲ್ಲ. ಹಿಂಗ ನನ್ನನ್ನ ಯಾರೂ ಖರಿದಿ ...ಇಲ್ಲ. ಹೆಂಗಪ್ಪ ಹಿಂಗ ಆದ್ರ ಅಂತ ಎಷ್ಟೋ ...ನು ತಲಿ ಕೆಡಿಸ್ಕೊಂಡೆ. ಈ ಬಣ್ಣಬಣ್ಣದ ಗಣಪಗಳ ...ನಾನು ಒಬ್ಬಂಟಿಯಾದೆ.

...ಗಿರ್ಬೇಕಾದ್ರ ನನ್ನ ನಶೀಬ ಚೊಲೊ ಆತು ಅಂತ ...ದಿನ ತಿಳ್ಕೊಂಡೆ. ಅದೇನೊ 'ಪರಿಸರ-ಪ್ರೇಮಿ ...' ಅಂತ ಕೆಲ ಮಂದಿ ಜಾಥಾ ಹೊಂಡಕ್ಕ ಶುರು ...ದ್ರು. ಎಲ್ಲೆಲ್ಲೂ 'ಪರಿಸರ-ಪ್ರೇಮಿ ಗಣಪತಿ ಖರೀದಿ ...ಪ್ರಕೃತಿನ ಉಳಿಸ್ರಿ' ಅಂತ ಘೋಷಣೆಗಳು ...ವು! ಬಣ್ಣಬಣ್ಣದ ಗಣಪಗಳನ್ನ ಖರೀದಿ ಮಾಡ್ಬ್ಯಾಡ್ರಿ, ...ಳು ಪ್ಲಾಸ್ಟರ್ ಆಫ್ ಪ್ಯಾರಿಸ್‌ನಿಂದ ಮಾಡಿದ್ದು ...ನೀರಾಗ ಬೇಗ ಕರ್ಗಂಗಿಲ್ಲ; ಜೊತಿಗೆ ಬಣ್ಣಬಣ್ಣದ ...ಳು ಕೆಮಿಕಲ್ ಬಣ್ಣದಿಂದ ಮಾಡಿದ್ದಿರ್ತಾವ, ಅವು ...ಖರಾಬ್ ಮಾಡಿ, ಮೀನ, ಏಡಿ, ಗಿಡಗಳನ್ನ ...ವು ಅಂತ ಎಲ್ರು ಮಾತಾಡಕತ್ತಿದ್ರು. ಸರ್ಕಾರಂತು ...ಕ ಮಣ್ಣಿನಿಂದ ಮಾಡಿದ್ದ ಗಣಪನನ್ನ ಮಾತ್ರ ಕೊಳ್ರಿ ...ಎಲ್ಲಾ ಕಡೆ ಪ್ರಚಾರ ಮಾಡ್ತು, ಮಂದಿ ನಿಧಾನವಾಗಿ ...ಂದ ಮಾಡಿದ ಗಣಪಗಳ ಕಡಿಗೆ ನೋಡೋಕ ...ಮಾಡಿದ್ರು. ಆಗ ನನಗ ಬಾಳ ಖುಷಿ ಆತು. ...ಮಣ್ಣಿನಿಂದ ಆಗಿದ್ದು, ಈಗಲಾದ್ರು ಜನ ನನ್ನನ್ನ ...ಖರೀದಿ ಮಾಡ್ತಾರ ಅಂತ ತಿಳ್ಕೊಂಡೆ. ಕೊನೆಗು ...ಮುಕ್ತಿ ಸಿಗ್ತೈತಿ ಅಂತ ಮನಸ್ಸು ಹಗುರಾತು. ಆದ್ರ....!

* *

...ಡ್ಯಾಡಿ, ನೋಡು ಇಲ್ಲಿ, ಬರೀ ಮಣ್ಣಿಂದ ಮಾಡಿದ ...ಚೆನ್ನಾಗಿದೆಯಲ್ಲ? ಅದನ್ನೆ ತಗೊ. ನಮ್ಮ ಟೀಚರು ...ಂದ ಮಾಡಿದ ಗಣೇಶನನ್ನು ಮಾತ್ರ ತೆಗೆದುಕೊಳ್ಳಿ ...ಹೇಳಿದ್ದಾರೆ" ಅಂತ ಮಗ ಹಠ ಹಿಡಿದ. ಅಪ್ಪ ...ಥೆಯ ಗಣಪನನ್ನು ಮೇಲಿನಿಂದ, ಕೆಳಗೆ ನೋಡಿ; ...ಮುಂದೆ ಪರಿಶೀಲಿಸಿ, "ಇದು ಬೇಡ, ಸನ್ನಿ" ...ಹೇಳಿದ.

...ಯಾಕೆ ಬೇಡ? ಇದು ಪರಿಸರ ಪ್ರೇಮಿ ಗಣಪತಿ. ...ತಗೊ, ಡ್ಯಾಡಿ" ಎಂದು ಮತ್ತೊಮ್ಮೆ ಒತ್ತಾಯ ...ಮಗರಾಯ.

...ಠ ಮಾಡ್ಬಾರ್ದು, ಸನ್ನಿ. ಬೇಡ ಅಂದ್ರೆ ಬೇಡ" ...ಮಗನನ್ನು ಬೇರೆ ಪರಿಸರ-ಪ್ರೇಮಿ ಗಣಪತಿಯ ...ಕರೆದುಕೊಂಡು ಹೋದ; ಗಾಳಿಗೆ ತೂರಾಡುತ್ತಿದ್ದ ...ವಾರವನ್ನು ಸರಿಪಡಿಸುತ್ತಾ.

* *

...ದೇ ದಿನ ಮಧ್ಯಾಹ್ನ ಮತ್ತೊಬ್ಬ 'ಪರಿಸರ-ಪ್ರೇಮಿ ...ಪನನ್ನು ಕೊಂಡುಕೊಳ್ಳಲು ಬಂದ. ಎಲ್ಲಾ ...ಗಳು ಈಗಾಗಲೇ ಖಾಲಿಯಾಗಿದ್ದವು. ಕೊನೆಗೆ ...ದ್ದು ನಮ್ಮ ಕಥೆಯ ಗಣಪನೊಬ್ಬನೆ. ಬಂದಾತ ಆ ...ನನ್ನು ಮೇಲಿನಿಂದ, ಕೆಳಗೆ ನೋಡಿ, ಬರಬರನೆ ...ಹೊರಟೆಹೋದ. ತಿರುಗಿ ನೋಡಲೇ ಇಲ್ಲ.

...ಗ್ಯಾಕ ಮಾಡ್ದ ಇವ ಅಂತ ನಾನು ತಲಿ ...ಂಡೆ. ಅವ ಸೀದಾ ಬಾಜು ದುಖಾನ್ ಹತ್ರ ...'ಪರಿಸರ ಪ್ರೇಮಿ ಗಣಪ' ನನ್ನ ಖರೀದಿ ಮಾಡ್ದ. ...ಗಣಪ ಐತಿ ಅದು ಅಂತ ಕಣ್ಣು ಹಾಯಿಸಿ ...ಆಶ್ಚರ್ಯ ಆತು. ಅದರ ಹಣಿ ಮ್ಯಾಗ ವಿಭೂತಿ ...ಮ್ಯಾಗ ಲಿಂಗ ನೇತಾಡ್ತಿತ್ತು."

*

...ಕೊಟ್ಟಕಡೊಡಗಿತು. ಮೊದಲು ನಿಧಾನವಾಗಿ; ...ಸವಾಗಿ. ಒಬ್ಬಂಟಿಯಾಗಿದ್ದ ಗಣಪ ಈಗ ...ಸಿ, ನಿಧಾನವಾಗಿ ಕರಗತೊಡಗಿದ. ಅವನ ...ಮೇಲೆ ಸಂತೃಪ್ತಿಯ ನಗೆ ಮಿಂಚಿತು. "ಮೋಕ್ಷ ...ಮೋಕ್ಷ" ಎಂದು ಕೂಗಿಟ್ಟ, ಮಳೆಯ ರಭಸ ...ಅವನ ಕೂಗಾಟ ಯಾರಿಗೂ ಕೇಳಿಸಲಿಲ್ಲ.

...ಕುಮಾರ್ ಎಂ. ಬೋರಟ್ಟಿ



■ ಗಿರೀಶ್ ತಾಳಿಕಟ್ಟೆ

ಬುದ್ಧನಾದ ವಿಷ್ಣು ವಿಗ್ರಹ, ಗಾಯತ್ರಿ ತಂತ್ರ ಮತ್ತು ಹೋಮ ಅಜ್ಞಾನ

ಕೋಮುಸಂದೇಶ: ವಿಯೆಟ್ನಾಂದಲ್ಲಿ 4000 ವರ್ಷಗಳಿಗಿಂತಲೂ ಹಿಂದಿನದಾದ ವಿಷ್ಣು ದೇವಾಲಯ ಏಕಿದೆ?

(ಹಿಂದು ಧರ್ಮ ಜಗತ್ತಿನ ಅತಿ ಪುರಾತನ ಶ್ರೇಷ್ಠ ಧರ್ಮ ಎನ್ನುವುದು ಇದರಿಂದಲೇ ಸಾಬೀತಾಗುವುದಿಲ್ಲವೇ ಅಥವಾ ಜಾತ್ಯತೀತರು ಇದರಲ್ಲೂ ಕೊಂಕು ಹುಡುಕುತ್ತಾರೊ? ಅದು ಅವರಿಗೇನು ಕಷ್ಟದ ವಿಷಯ ಅಲ್ಲವಲ್ಲ)

ಸತ್ಯಾಂಶ: ವಿಯೆಟ್ನಾಂನಲ್ಲಿ ಸಿಕ್ಕಿರುವ ಪುರಾತನ ವಿಷ್ಣು ವಿಗ್ರಹ (ಕೆಲವರು ಅದು 4000ದಷ್ಟು ಹಳೆಯದು ಎಂದರೆ, ಮತ್ತೆ ಕೆಲವರು ಅದು 2000 ವರ್ಷಗಳಷ್ಟು ಹಳೆಯದು ಎನ್ನುತ್ತಾರೆ) ಪತ್ತೆಯಾಗಿದ್ದದ್ದು ನಿಜವೇ ಆದರೂ ಆ ವಿಗ್ರಹವನ್ನು ಒಳಗೊಳ್ಳುವಂತೆ ನಿರ್ಮಾಣಗೊಂಡಿರುವ



ವಿಯೆಟ್ನಾಂನಲ್ಲಿ ಬುದ್ಧನೆಂದು ತಪ್ಪಾಗಿ ಗ್ರಹಿಸಲಾಗಿದ್ದ ವಿಷ್ಣು ವಿಗ್ರಹ

ಅಥವಾ ಭೇಟಿಯ ಸ್ಮರಣಾರ್ಥ ಶಿಲ್ಪಕಲೆ ಕೆತ್ತನೆ, ಆಭರಣ ಇತ್ಯಾದಿಗಳ ವಹಿವಾಟು ತೀರಾ ಸಾಮಾನ್ಯವಾದುದು ಎಂಬುದು ಈಗಾಗಲೇ ತಿಳಿದಿದೆ. ಅದೇರೀತಿ ವಿಗ್ರಹ ವಿಯೆಟ್ನಾಂ ತಲುಪಿರಬಹುದೇ ಅಥವಾ ಇಂಡೋನೇಷ್ಯಾದಲ್ಲಿದ್ದಂತೆ ಅಲ್ಲಿಗೂ ಭಾರತೀಯ ನೌಕಾಸೇನಾ ಪ್ರಾಬಲ್ಯ ವಿಸ್ತರಿಸಿತ್ತೇ ಎಂಬುದರ ಕುರಿತು ಸಂಶೋಧನೆ ನಡೆಯಬೇಕಿದೆ.

ಕೋಮುಸಂದೇಶ: ಅಮೆರಿಕಾದ ಖ್ಯಾತ ವಿಜ್ಞಾನಿ ಡಾ. ಹೊವಾರ್ಡ್, ಗಾಯತ್ರಿ ಮಂತ್ರ ಒಂದು ಕ್ಷಣಕ್ಕೆ 1,10,000 ಧ್ವನಿ ತರಂಗಗಳನ್ನು ಉತ್ಪತ್ತಿ ಮಾಡುತ್ತದೆ ಎಂದು ಶೋಧಿಸಿ, ಅದನ್ನು ಶಕ್ತಿಶಾಲಿ ಮಂತ್ರವೆಂದು ಘೋಷಿಸಿದ್ದೇಕೆ?


(ನಮ್ಮ ಟೊಳ್ಳು ಜಾತ್ಯತೀತರ ದೃಷ್ಟಿಯಲ್ಲಿ ಹೊವಾರ್ಡ್ ಕೂಡಾ ಕೋಮುವಾದಿ ಆದರೆ ಅಚ್ಚರಿಯಿಲ್ಲ!)

ಸತ್ಯಾಂಶ: ಇದರಲ್ಲಿ ಬಯಲು ಮಾಡುವಂತಹ ಸತ್ಯ ಒಂದಿನಿತೂ ಇಲ್ಲ. ಏಕೆಂದರೆ ಸಂಪೂರ್ಣ ವೃತ್ತಾಂತವೇ ಸುಳ್ಳಿನ ಮೇಲೆ ಸೌಧ ಕಟ್ಟಿದಂತಿದೆ. ಯಾವ ಹೊವಾರ್ಡ್ ಸ್ಟೀನ್‌ಗೆರಿಲ್ ಈ ಸಂಶೋಧನೆ ಮಾಡಿದ 'ಖ್ಯಾತ' ವಿಜ್ಞಾನಿ ಎನ್ನುತ್ತಾರೊ ಅವರ ಬಗ್ಗೆ ತಿಳಿದುಕೊಳ್ಳೋಣ ಅಂತ ಇಡೀ ಅಂತರ್ಜಾಲವನ್ನು ತಡಕಾಡಿದರೂ ಒಂದೇಒಂದು ವಸ್ತುನಿಷ್ಠ ಪ್ರೊಫೈಲ್ ಆಗಲಿ ಅಥವಾ ಆ ಖ್ಯಾತ ವಿಜ್ಞಾನಿ ಮಾಡಿದ ಇನ್ನಿತರೆ ಸಂಶೋಧನೆಗಳು, ಮಂಡಿಸಿದ ಸಿದ್ಧಾಂತಗಳಾಗಲಿ ಸಿಗುವುದೇ ಇಲ್ಲ. ಈ ಸಂಗತಿಯನ್ನು ವೈಭವೀಕರಿಸಿ 'ಹಿಂದೂತ್ವ'ದ ಬೆನ್ನುತಟ್ಟಿಕೊಂಡಿರುವ ಕೆಲವೊಂದು ವೆಬ್‌ಸೈಟ್‌ಗಳು, ಬ್ಲಾಗ್‌ಗಳನ್ನು ಹೊರತುಪಡಿಸಿದರೆ ಹೊವಾರ್ಡ್ ಹೆಸರು ಬೇರೆಲ್ಲೂ ಲಭ್ಯವಾಗುವುದೇ ಇಲ್ಲ. ಸಾಮಾನ್ಯವಾಗಿ ಧ್ವನಿ ತರಂಗಗಳನ್ನು ವಿಜ್ಞಾನವು ಹರ್ಟ್ಸ್, ಕಿಲೋಹರ್ಟ್ಸ್ ಮೊದಲಾದ ಮಾನಕಗಳಲ್ಲಿ (ಉದಾಹರಣೆಗೆ ದೂರವನ್ನು ಮೀಟರ್, ಕಿಲೋಮೀಟರ್, ಮೈಲಿ ಮುಂತಾದ ಮಾನಕಗಳಲ್ಲಿ ಅಳೆದಂತೆ) ಅಳೆಯುತ್ತದೆ. ಆದರೆ ಧ್ವನಿರತರಂಗ/ಸೆಕೆಂಡ್ ಎನ್ನುವುದೇ ಅರ್ಥಹೀನವಾದುದು. ಬಿಡಿಸಿ ಹೇಳಬೇಕೆಂದರೆ, ಒಂದು ನಿಮಿಷಕ್ಕೆ 60 ಕಿಲೋಮೀಟರ್ ದೂರ ಎನ್ನುವುದರಲ್ಲಿ (60ಕಿಮೀ/ನಿಮಿಷ) ಅರ್ಥವಿದೆ. ಆದರೆ ಒಂದು ನಿಮಿಷಕ್ಕೆ 60 ದೂರುಗಳು ಎಂದರೆ ಅದರಲ್ಲಿ ಅರ್ಥವೇನಾದರು ಇದೆಯೇ? ಒಂದು ಕ್ಷಣಕ್ಕೆ 1,10,000 ಎಂದು ದೃಢಪಟ್ಟಂತೆ. ಅಂತದ್ದರಲ್ಲಿ ಅದರಿಂದ 1,10,000 ಧ್ವನಿತರಂಗಗಳನ್ನು (ಹರ್ಟ್ಸ್ ಅಲ್ಲ!) ಮಹಾತ್ಮ ಹೊವಾರ್ಡ್ ಅದೇಗೆ ಶೋಧಿಸಿದ. ಇದೊಂತರಾ ಇರುವೆ ಹೊಟ್ಟೆಯಿಂದ ಹೆರಿಗೆ ಮಾಡಿಸಿ ಆನೆ ಮರಿಯನ್ನು ಡಿಲಿವರಿ ಮಾಡಿಸಿದಂತೆ!


ಕೋಮುಸಂದೇಶ: ಹೋಮವೆಂಬುದು ಮೂಢನಂಬಿಕೆಯಾಗಿದ್ದರೆ, ಮನೆಯಲ್ಲಿ ಹೋಮವನ್ನು ಮಾಡುತ್ತಿದ್ದ ಖುಷ್ವಾಹ್ ಕುಟುಂಬ ಭೋಪಾಲ್ ಅಗ್ನಿದುರಂತದಿಂದ ಬಚಾವಾಗಿದ್ದು ಹೇಗೆ?

ಸತ್ಯಾಂಶ: ಮೊದಲನೆಯದಾಗಿ ಭೋಪಾಲ್‌ನಲ್ಲಿ ಸಂಭವಿಸಿದ್ದು ಅಗ್ನಿ ದುರಂತವಲ್ಲ; ಅನಿಲ ದುರಂತ. ಅಮೆರಿಕ ಮೂಲದ ಯೂನಿಯನ್ ಕಾರ್ಬೈಡ್ ಎಂಬ ಸಂಸ್ಥೆಯ ಘಟಕವೊಂದರಿಂದ 1984ರ ಡಿಸೆಂಬರ್ 3ರ ಬೆಳಗಿನ ಜಾವ ಮೀಥೈಲ್ ಐಸೊಸಯನೇಟ್ ಎಂಬ ಮಾರಣಾಂತಿಕ ಅನಿಲ ಸೋರಿಕೆಯಾಗಿ ಸಾವಿರಾರು ಜನ ಅಸುನೀಗಿದ್ದರು. ಮತ್ತದೇ ಕೆಲವು ಸೀಮಿತ ವೆಬ್‌ಸೈಟ್‌ಗಳಲ್ಲಿ ಮಾತ್ರ ಇಂತಹದ್ದೊಂದು ಅಗ್ನಿಹೋತ್ರ ಪ್ರಕರಣ ವೃತ್ತಾಂತವನ್ನು ಎಣೆಯಲಾಗಿದೆ. ಅವತ್ತು ಅನಿಲ ಸೋರಿಕೆಯಾಗಿ ಮಲಗಿದ್ದ ಜನ ಹೊಟ್ಟೆಉರಿ, ಕಣ್ಣು ಉರಿ, ವಾಂತಿ, ಉಸಿರುಗಟ್ಟಸುವಿಕೆಯಂತಹ ವಿಚಿತ್ರ ಲಕ್ಷಣಗಳಿಂದ ಮಲಗ್ಗಿದ್ದಲ್ಲೇ ಹೆಣವಾಗುತ್ತಿರುವಾಗ ಘಟನಾ ಸ್ಥಳದಿಂದ ಕೇವಲ ಒಂದು ಮೈಲಿ ದೂರದಲ್ಲಿದ್ದ ಸೋಹನ್‌ಲಾಲ್ ಖುಷ್ವಾಹ್‌ನ ಮನೆಯವರಲ್ಲೂ ಅದೇ ಲಕ್ಷಣಗಳು ಗೋಚರಿಸಿದವು. ಆಗ ಸೋಹನ್‌ಲಾಲ್ ಮನೆಯಿಂದ ಹೊರಓಡುವ ಹವಣಿಕೆಯಲ್ಲಿದ್ದ. ಆಗ ಅವನ ಹೆಂಡತಿ ತ್ರಿವೇಣಿ ಗಂಡನನ್ನು ತಡೆದು 'ಹೀಗೆ ಓಡಿಹೋಗುವ ಬದಲು ಅಗ್ನಿಹೋತ್ರ ಹೋಮ ಮಾಡೋಣ' ಅಂತ ಸಲಹೆ ನೀಡಿದಳಂತೆ. ಅರೆನಿದ್ರೆಯಲ್ಲಿ ಕಾಲಿಗೆ ಬುದ್ಧಿಹೇಳಲು ಸನ್ನದ್ಧನಾಗಿದ್ದ ಸೋಹನ್ ಲಾಲ್ ಹೆಂಡತಿ ಮಾತಿನಿಂದ ಜ್ಞಾನೋದಯವಾದವನಂತೆ ಮಕ್ಕಳನ್ನೆಲ್ಲಾ ಕೂರಿಸಿಕೊಂಡು ಹೋಮ ಮಾಡುತ್ತಾ ಕೂತನಂತೆ. ಆಗ ಅವನ ಕುಟುಂಬದ ಯಾವೊಬ್ಬ ಸದಸ್ಯನಿಗೂ ಏನೂ ಆಗಲಿಲ್ಲವಂತೆ.

ಇದು ಅಂತಹ ವೆಬ್‌ಸೈಟ್‌ಗಳು ಹೇಳುವ ಹೋಮದ ಕಥೆ. 2014ರ ಡಿಸೆಂಬರ್ 3ನೇ ತಾರೀಖಿಗೆ ಈ ಅವಘಡ ನಡೆದು 30 ವರ್ಷ ತುಂಬಿತ್ತು. ಆ ಕರಾಳ ನೆನಪುಗಳನ್ನು ಮೆಲುಕು ಹಾಕುವ ಉದ್ದೇಶದಿಂದ 'ಡಿಎನ್‌ಎ ಇಂಡಿಯಾ'



ಗಾಯತ್ರಿ ಮಂತ್ರಕ್ಕೆ ಪ್ರಚಾರ ನೀಡುವ ಪರಿ



ಭೂಪಾಲ್ ದುರಂತದಲ್ಲಿ ಹೋಮವನ್ನು ಪೋಣಿಸುವ ಹುನ್ನಾರದ ಪೋಸ್ಟರ್

ದೇವಾಲಯ, ವಿಗ್ರಹದಷ್ಟು ಪುರಾತನತೆಯನ್ನು ಹೊಂದಿಲ್ಲ ಎಂಬುದು ವಾಸ್ತವ.

ಹೌದು, ವಿಗ್ರಹ ಸಾವಿರಾರು ವರ್ಷಗಳಷ್ಟು ಹಳೆಯದಾದರೂ, ದೇವಾಲಯದ ಇತಿಹಾಸ 100 ವರ್ಷಗಳಿಗಿಂತ ಹೆಚ್ಚಿಗೆ ಇಲ್ಲ ಎನ್ನಲಾಗುತ್ತದೆ. ವಿಷ್ಣುವನ್ನು ಸಾಮಾನ್ಯವಾಗಿ ಉರಗಶಯನ ರೂಪದಲ್ಲಿ ಶಿಲ್ಪೀಕರಿಸಲಾಗುತ್ತದೆ. ಆದರೆ ವಿಯೆಟ್ನಾಂನಲ್ಲಿ ಲಭ್ಯವಾಗಿರುವ ವಿಗ್ರಹ ಪೀಠದ ಮೇಲೆ ಪದ್ಮಾಸನ ಹಾಕಿಕೂತ ಭಂಗಿಯಲ್ಲಿತ್ತು, ಭೂಮಿ ಹಗೆಯುವಾಗ ಕೆಲವು ನೂರು ವರ್ಷಗಳ ಹಿಂದೆ ಈ ವಿಗ್ರಹ ಮೊದಲು ಸಿಕ್ಕಿದ್ದು 'ಚೋನ್' ಸಮುದಾಯದ ಜನರ ಕೈಗೆ. ಅಷ್ಟರಲ್ಲಾಗಲೆ ಚೀನಾ, ಜಪಾನ್, ವಿಯೆಟ್ನಾಂಗಳಲ್ಲಿ ಬುದ್ಧಧರ್ಮ ವ್ಯಾಪಕಗೊಂಡಿತ್ತು. ಬುದ್ಧನ ಭಂಗಿಯಂತೆ ಪದ್ಮಾಸನ ಹಾಕಿ ಕೂತಿದ್ದ ಈ ವಿಗ್ರಹವನ್ನು ಅವರೆಲ್ಲ ಬುದ್ಧ ಎಂದೇ ಆರಾಧಿಸುತ್ತಿದ್ದರು. ಕೊನೆಗೆ ವಿಗ್ರಹದ ಮೇಲಿರುವ ಸಂಸ್ಕೃತ ಬರಹ ಮತ್ತು ಶಿಲ್ಪರಚನೆಯ ಅಧ್ಯಯನದಿಂದ ಅದು ವಿಷ್ಣು ವಿಗ್ರಹ ಎಂಬುದು ತಿಳಿದುಬಂತು. ಹೀಗೆ ವಿಷ್ಣು ಬಹಳಷ್ಟು ವರ್ಷಗಳ ಕಾಲ ಬುದ್ಧನಾಗಿ ಪೂಜಿಸಲ್ಪಡುತ್ತಿದ್ದ, ಆಮೇಲಷ್ಟೆ ಅಲ್ಲೊಂದು ದೇವಾಲಯ ನಿರ್ಮಾಣವಾಗಿರಬಹುದು.

ರಾಜರುಗಳ ಕಾಲದಲ್ಲಿ ಉಡುಗೊರೆಯ ರೂಪದಲ್ಲಿ

ಧ್ವನಿ ತರಂಗಗಳು ಎನ್ನುವುದು ಕೂಡಾ ಅಷ್ಟೇ ಅಸಂಬದ್ಧವಾದುದು.

ಸರಿ, ಒಂದೊಮ್ಮೆ ಅದು ಒಂದು ಸೆಕೆಂಡಿಗೆ 1,10,000 ಹರ್ಟ್ಸ್ ಧ್ವನಿ ತರಂಗಗಳೇ ಎಂದು ಭಾವಿಸಿಕೊಳ್ಳೋಣ (ಪಾಪ, ಈ ಪ್ರಶ್ನೆ ಕೇಳುವವರು ಅಥವಾ ಇಂತಹ ವ್ಯಾಖ್ಯಾನೆಯನ್ನು ಉಲ್ಲೇಖಿಸುವವರು ವಿಜ್ಞಾನದ ಪರಿಜ್ಞಾನವೇ ಇಲ್ಲದ 'ಮುಗ್ಧ'ರು ಎಂದು ಭಾವಿಸಿಕೊಂಡು). ಆಗ ಗಾಯತ್ರಿ ಮಂತ್ರ ಒಂದು ನಿಮಿಷಕ್ಕೆ 6,60,000 ಹರ್ಟ್ಸ್ (1,10,000x60) ಧ್ವನಿ ತರಂಗಗಳನ್ನು ಹೊರಹೊಮ್ಮಿಸುತ್ತದೆ ಎಂದಾಯಿತು. ಅಂದರೆ 66,000 ಕಿಲೋ ಹರ್ಟ್ಸ್. ಇನ್ನೂ ಸಂಕ್ಷೇಪಿಸುವುದಾದರೆ 66 ಮೆಗಾ ಹರ್ಟ್ಸ್. ಈ ವ್ಯಾಪ್ತಿಯ ತರಂಗಾಂತರಗಳು ಶಬ್ದಾತೀತ (ಅಲ್ಟ್ರಾಸೌಂಡ್) ವ್ಯಾಪ್ತಿಗೆ ಬರುತ್ತವೆ. ಬಹುಮುಖ್ಯವಾಗಿ ಮನುಷ್ಯನ ಕಿವಿ 20 ರಿಂದ 20,000 ಹರ್ಟ್ಸ್ ತರಂಗಾತರಗಳವರೆಗಿನ ಶಬ್ದಗಳನ್ನು ಮಾತ್ರ ಕೇಳಿಸಿಕೊಳ್ಳಬಲ್ಲದು. ಇದು ವೈಜ್ಞಾನಿಕವಾಗಿ ದೃಢಪಟ್ಟಿರುವ ವಿಚಾರ. ಅದಕ್ಕೂ ಹೆಚ್ಚಿನ ತರಂಗಾಂತರಗಳನ್ನು ಹೊರಡಿಸುವ ಗಾಯತ್ರಿ ಮಂತ್ರ ನಮಗ್ಯಾರಿಗೂ ಕೇಳಿಸಲೇಬಾರದಿತ್ತು. ಅದನ್ನು ನಾವು ಸುಸ್ಪಷ್ಟವಾಗಿ ಕೇಳಿಸಿಕೊಳ್ಳುತ್ತಿದ್ದೇವೆಂದರೆ ಅದು 20,000 ಹರ್ಟ್ಸ್‌ಗಿಂತ ಕಡಿಮೆ ತರಂಗಾಂತರವು

ಪತ್ರಿಕೆಯು ಅದೇ ಸೋಹನ್‌ಲಾಲ್ ಖುಷ್ವಾಹ್‌ನ ಮಗ ಮಹೇಶ್ ಲಾಲ್ ಖುಷ್ವಾಹ್‌ನ ಸಂದರ್ಶನ ಮಾಡಿತ್ತು. ಆ ಸಂದರ್ಶನದಲ್ಲಿ ಮಹೇಶ್ ಹೀಗೆ ಹೇಳಿದ್ದ 'ಆ ರಾತ್ರಿ ಸುಮಾರು 2 ಗಂಟೆ ಸಮಯವಾಗಿರಬಹುದು, ನಮ್ಮ ಕಣ್ಣುಗಳು ಉರಿಯಲು ಆರಂಭಿಸಿದವು, ಮನೆಯವರೆಲ್ಲಾ ವಾಂತಿ ಮಾಡಿಕೊಳ್ಳಲು ಶುರು ಮಾಡಿದೆವು. ನಾವು ಮನೆಯಿಂದ ಹೊರಗೆ ಅಡಿಯಿಟ್ಟಾಗ ವಾತಾವರಣದ ತುಂಬಾ ಹೊಗೆ ತುಂಬಿಕೊಂಡಿತ್ತು. ಏನಾಗುತ್ತಿದೆ ಎಂಬುದು ನಮಗ್ಯಾರಿಗೂ ಅರ್ಥವೇ ಆಗಲಿಲ್ಲ. ಮನೆಯಿಂದ ಹೊರಗೆ ಓಡಲು ನಾವೆಲ್ಲ ಶುರು ಮಾಡಿದೆವು. ನನ್ನ ತಂದೆ ಮತ್ತು ಇಬ್ಬರು ಸೋದರಿಯರು ಅಲ್ಲೇ ಕುಸಿದುಬಿದ್ದು ಸತ್ತು ಹೋದರು. ನಾನೂ ಪ್ರಜ್ಞೆ ತಪ್ಪಿ ಬಿದ್ದೆ. ಆಮೇಲೆ ಯಾರು ನನ್ನನ್ನು ತಂದು ಸೇರಿಸಿದರೊ ಗೊತ್ತಿಲ್ಲ, ಕಣ್ಬಿಟ್ಟಾಗ ಆಸ್ಪತ್ರೆಯಲ್ಲಿದ್ದೆ.'

ಯಾವ ಖುಷ್ವಾಹ್ ಅಗ್ನಿಹೋಮ ಮಾಡಿ ತನ್ನ ಇಡೀ ಕುಟುಂಬವನ್ನು ಕಾಪಾಡಿಕೊಂಡ ಅಂತ ಸುಳ್ಳು ಹೇಳಲಾಗುತ್ತಿದೆಯೋ ಆ ಸೋಹನ್‌ಲಾಲ್ ಖುಷ್ವಾಹ್ [illegible] ಅವಘಡದಲ್ಲಿ ಸತ್ತುಹೋಗಿದ್ದ. ಅದನ್ನು ಅವನ ಮಗನೇ ಖಾತ್ರಿಪಡಿಸಿದ್ದಾನೆ ಅಂದಮೇಲೆ ಅದೊಂದು ಕಟ್ಟುಕತೆ ಎಂದಾಯಿತು ■

ಅನುರಣನ



ಡಾ. ಟಿ.ಎಸ್. ಚನ್ನೇಶ್
channeshts@gmail.com

ವೃದ್ಧಾಪ್ಯಕ್ಕೆ ಬಾಲ್ಯದ ಬಯಕೆ

ಎಲ್ಲಾ ಜೀವಿಗಳ ಒಂದೇ ಉತ್ಕಟ ಆಸೆಯೆಂದರೆ ಬದುಕು ನಿರಂತರವಾಗಿ ಇರಬೇಕೆಂಬುದೇ ಆಗಿದೆ. ಮಾನವರಿಗಂತೂ ಅತ್ಯಂತ ದೊಡ್ಡ ಭಯವೆಂದರೆ ಸಾವು! ಸಾವನ್ನು ತಪ್ಪಿಸಿಕೊಳ್ಳುವ ಬಯಕೆಯೂ ಜೀವಕೋಶಗಳಲ್ಲಿ ಅಡಗಿದೆಯೇ? ಇದೊಂದು ಮಾಯಾ ಪ್ರಶ್ನೆ ಎನ್ನಿಸುವುದು ನಿಜ. ನಮ್ಮ ಬದುಕಿನ ಆಸೆಗಳನ್ನು ನೆನಪಿಸಿಕೊಂಡರೆ ಹಾಗನ್ನಿಸುವುದು ಸಹಜ! ಹಾಗಾಗಲು ನಾವು ಮತ್ತೆ ಮತ್ತೆ ಹಿಂದಕ್ಕೆ ಬೆಳೆಯಲು ಸಾಧ್ಯವಿಲ್ಲ. ಆದರೆ ನಮ್ಮ ಬಲಿತ ಜೀವಕೋಶಗಳು ಮತ್ತೆ ಹಿಂದಕ್ಕೆ ಹೋಗಿ ಹೊಸತಾದ ಎಳೆತನದ ಜೀವನ ಆರಂಭಿಸುವ ಸಾಧ್ಯತೆಗಳನ್ನು ಜಾನ್ ಗುರ್ಡಾನ್ ಮತ್ತು ಶಿನ್ಯಾ ಯಮನಕಾ ಅವರ ಸಂಶೋಧನೆಗಳು ಸಾದರ ಪಡಿಸಿವೆ.

ಈ ಹಿಮ್ಮುಖ ಪಯಣದಲ್ಲಿ ಕೆಲವು ತೊಂದರೆಗಳಿದ್ದಾಗ್ಯೂ ಸಾಧ್ಯತೆಗಳಿರುವುದಂತೂ ಸಾಬೀತಾಗಿದೆ. ಎಲ್ಲಾ ಜೀವಿಗಳೂ ಹಾಗೆ ಬದುಕಿನ ಉತ್ಸಾಹವೊಂದಿಟ್ಟುಕೊಂಡು, ಅದಕ್ಕಷ್ಟು ಶಕ್ತಿ ಒದಗಿಸುವ ಮೂಲವನ್ನು ನಿರಂತರವಾಗಿ ಇರಿಸಿಕೊಂಡರೆ ಜೀವನದ ಕಾಲ ಹೆಚ್ಚುತ್ತದೆ. ಸಾಂಕ್ರಾಮಿಕ ರೋಗಗಳ ತಡೆಗಟ್ಟುವಿಕೆಯಿಂದ ಈಗಾಗಲೇ ಆಯುಷ್ಯವು ಹಿಗ್ಗಿದೆ. ಇದೀಗ ಸ್ಟೆಮ್ ಜೀವಕೋಶಗಳ ಮೂಲಕ ನಮ್ಮವೇ ಜೀವಕೋಶಗಳಿಂದ ಹಲವಾರು ನ್ಯೂನತೆಗಳ ಚಿಕಿತ್ಸೆಗೆ ಮತ್ತಷ್ಟು ಸಾಧ್ಯತೆಗಳ ಸೃಷ್ಟಿಯಾಗಲಿದೆ. ಇದರಿಂದ ಬದುಕಿನ ಬಯಕೆಗಳಲ್ಲಿ ಎಳೆತನದ ಮಿಳಿತಗಳು ಉಂಟಾಗಲಿವೆ. ಈಗಾಗಲೆ ಸಾಕಷ್ಟು ಪ್ರಯೋಗಗಳು ಆರಂಭಗೊಂಡಿವೆ. ಇದೇನಿದು ಹೀಗೆ ಹಿಮ್ಮುಖವಾಗಿ ಬದುಕನ್ನು ಬೆಳೆಸಲಾದೀತೇ ಅನ್ನಿಸಬಹುದು. ಆದರೆ ಇದನ್ನು ವಿವರಿಸುವ ಕೆಲವು ಸಂಗತಿಗಳು ವಿಜ್ಞಾನದಲ್ಲಿ ಆರಂಭಗೊಂಡು ವರ್ಷಗಳೇ ಕಳೆದಿವೆ. ಅವುಗಳ ಮಹತ್ವಕ್ಕೆ ಮೆರುಗು ಸಿಗುವಂತೆ ವಿವರಣೆಗಳು ಸೇರುತ್ತಿವೆ.

ನಮ್ಮಲ್ಲೊಂದು ಮಾತಿದೆ: 'ಹುಣಸೆ ಮುಪ್ಪಾದರೂ ಹುಳಿ ಮುಪ್ಪಾಗದು'. ಮುಪ್ಪಿನಲ್ಲೂ ತನ್ನ ಎಳೆತನದಷ್ಟೇ ಹುಳಿಯನ್ನು ಕಾಯ್ದಿಟ್ಟುಕೊಂಡು ಬರುವ ಹುಣಸೆ ಮರದ ಹಾಗೆ ಎಲ್ಲಾ ಜೀವಿಗಳೂ ಸಹ ತಮ್ಮೆಲ್ಲ ಬಯಕೆಗಳನ್ನು ಮುಪ್ಪಲ್ಲೂ ತೋರಿಸುವ ಬಗೆಗೆ ಹೀಗೆ ಹೇಳುವುದುಂಟು. ಇದೀಗ ವಿಜ್ಞಾನದ ಜಗತ್ತಿನಲ್ಲಿ ಬಲಿತ ಜೀವಕೋಶಗಳು ಮತ್ತೆ ತಮ್ಮ ಎಳೆತನದ ಬಯಕೆಗಳನ್ನು ಸಾಧ್ಯ ಮಾಡಿಕೊಳ್ಳಬಲ್ಲ ಸಂಶೋಧನೆಯ ಸಾಧನೆಗೆ ಕಳೆದ 2012ರ ವೈದ್ಯಕೀಯ ವಿಭಾಗದ ನೊಬೆಲ್ ಪ್ರಶಸ್ತಿಯು ಸಂದಿದೆ. ಅಚ್ಚರಿ ಎಂದರೆ ಸುಮಾರು 50 ವರ್ಷಗಳ ಹಿಂದೆಯೇ ಅಂತಹ ಬಯಕೆಗಳು ಎಳೆಯ ಜೀವಕೋಶಗಳಲ್ಲಿ ಇರುವುದನ್ನು ತೋರಿಸಿಕೊಟ್ಟವರು ಜಾನ್ ಗುರ್ಡಾನ್. ಅವರ ಸಂಶೋಧನೆಯ ಮುಂದುವರಿಕೆಯಾಗಿ ಶಿನ್ಯಾ ಯಮನಕಾ ಎಂಬುವವರು ಅಂತಹ ಸಾಧ್ಯತೆಗಳು ಬಲಿತ ಕೋಶಗಳಿಗೂ ಇರುವುದನ್ನು ತೋರಿಸಿದರು. ಇವರಿಬ್ಬರಿಗೂ ನೊಬೆಲ್ ಬಹುಮಾನ ಬಂದಿದೆ.

ಸುಮಾರು 53 ವರ್ಷಗಳ ಹಿಂದೆ 1962ರ ಡಿಸೆಂಬರ್‌ನಲ್ಲಿ 'ಜರ್ನಲ್ ಆಫ್ ಎಂಬ್ರಿಯಾಲಜಿ ಅಂಡ್ ಮಾರ್ಫಾಲಜಿ' ಪತ್ರಿಕೆಯಲ್ಲಿ ಬ್ರಿಟನ್‌ನ ಜಾನ್ ಬಿ. ಗುರ್ಡಾನ್ ಅವರು ತಮ್ಮ ಸಂಶೋಧನಾ ಲೇಖನವನ್ನು ಪ್ರಕಟಿಸಿದ್ದರು. ಅದರಲ್ಲಿ ಎಳೆಯ ಜೀವಕೋಶಗಳಿಗೆ ಮತ್ತೆ ಹೊಸ ಬದುಕಿನ ಆಶಯವನ್ನು ಹಮ್ಮಿಕೊಳ್ಳುವ ಸಾಧ್ಯತೆ ಇರುವುದನ್ನು ಪತ್ತೆ ಹಚ್ಚಿ ಪ್ರಕಟಿಸಿದ್ದರು. ಅದರ ಪ್ರಾಯೋಗಿಕ ಸಾಧ್ಯತೆಯನ್ನು ಕೊಟ್ಟಿದ್ದರು. ಆಶ್ಚರ್ಯವೆಂಬಂತೆ ಅದೇ ವರ್ಷ ಅಂದರೆ 1962 ರ ಸೆಪ್ಟೆಂಬರ್‌ನಲ್ಲಿ ಅತ್ತ ಪೂರ್ವದ ತುದಿಯಲ್ಲಿ ಜಪಾನಿನಲ್ಲಿ ಜನಿಸಿದ್ದ ಶಿನ್ಯಾ ಯಮನಕಾ ಅವರು ಹೆಚ್ಚೂಕಡಿಮೆ ಅಷ್ಟೇ ವರ್ಷಗಳ ನಂತರ ಅವರ ಸಂಶೋಧನೆಯ ಮುಂದುವರಿಕೆ ಮಾಡಿದ್ದರು. ಅದರಂತೆ ಬಲಿತ ಕೋಶಗಳೂ ಸಹ ಎಳೆತನದ ಆಸಕ್ತಿಗಳನ್ನು ಉಳಿಸಿಕೊಂಡೇ ಜೀವನ ನಡೆಸುತ್ತಿರುವುದನ್ನು ಸಾಬೀತುಪಡಿಸಿದರು. ಜಾನ್ ಗುರ್ಡಾನ್ ಅವರ ವೈಜ್ಞಾನಿಕ ಆಲೋಚನೆಗಳು ಬಲಿಯುವ- ಸಮಯದಲ್ಲಿ ಜನಿಸಿದ ಯಮನಕಾ ಅವರು ಮುಂದೆ 2006ರಲ್ಲಿ ಪ್ರಕಟಪಡಿಸಿದ ತಮ್ಮ ಸಂಶೋಧನಾ ವಿಚಾರಗಳಲ್ಲಿ ಮುಂದುವರಿಕೆ ಸಾಧಿಸಿದವರು. ಬಲಿತ ಜೀವಕೋಶಗಳನ್ನೂ ಪುನರ್ ಪ್ರತಿಷ್ಠಾಪಿಸಿ ಎಳೆಯ ಜೀವಕೋಶಗಳಂತೆ ಬೆಳೆಸುವ ಅವರ ಸಂಶೋಧನೆಗೆ 2012ರ ವೈದ್ಯಕೀಯ ವಿಭಾಗದ ನೊಬೆಲ್ ಪ್ರಶಸ್ತಿ ಸಂದಿದೆ. ಸಹಜವಾಗಿ ಇಂತಹ ಸಾಧ್ಯತೆ ಎಳೆತನದ ಕೋಶಗಳಿಗೆ ಹೆಚ್ಚಿರುತ್ತದೆ. ಅದಕ್ಕೆ ಮಕ್ಕಳು ಬಿದ್ದು ಗಾಯ ಮಾಡಿಕೊಂಡಲ್ಲಿ ಬೇಗ ಮಾಯುವ ಬಗೆಗೆ ನಾವು ಸಾಮಾನ್ಯವಾಗಿ ಮಾತಾಡುತ್ತೇವೆ. ಅದೇ ದೊಡ್ಡವರಿಗೆ ಬೇಗ ವಾಸಿಯಾಗದಿರುವ ಬಗೆಗೂ ಗೊಣಗಿಕೊಳ್ಳುತ್ತೇವೆ. ನಿಸರ್ಗದ ವಿಚಿತ್ರವೇ ಹಾಗೆ. ಜೀವಿಯ ಮುಂದುವರಿಕೆಗೆ ಎಳೆಯ ಜೀವಕ್ಕೆ ಹೆಚ್ಚು ಅವಕಾಶಗಳು ಇರಬೇಕೆನ್ನುವುದನ್ನು ಸಹಜವಾಗಿ ನೋಡಿಕೊಳ್ಳುತ್ತದೆ. ಹಾಗಂತ ಆಸೆಗಳೇ ಇಲ್ಲದಿದ್ದರೆ ಹೇಗೆ? ಅದಕ್ಕೆ ಬಲಿತರೂ ಒಂದಷ್ಟು ಸಹಜವಾದ ಆಸೆಗಳು ಮುಂದುವರಿಸಿಕೊಂಡು ಹೋಗುವುದನ್ನು ಅದು ಕಾಪಾಡಿಕೊಳ್ಳುತ್ತದೆ.

ಕೆಲವೊಂದು ವಿಶಿಷ್ಟವಾದ ಬಲಿತ ಜೀವಕೋಶಗಳನ್ನು



ಬಲಿತಿಲ್ಲದ ಅಥವಾ ಅಪಕ್ವ ಜೀವಕೋಶಗಳನ್ನಾಗಿ ಮಾರ್ಪಡಿಸುವ ಇವರ ಸಂಶೋಧನೆ ವೈದ್ಯಕೀಯ ಲೋಕದಲ್ಲಿ ವಿಶಿಷ್ಟ ಮೈಲಿಗಲ್ಲಾಗಿದೆ. ತಾಯಿಯಲ್ಲಿ ಗರ್ಭಾಂಕುರವಾದ ಕೂಡಲೇ ಭ್ರೂಣವಾಗಿ ಉದಯಿಸಿದ ಜೀವಕೋಶದಿಂದಲೇ ನಾವೆಲ್ಲರೂ ಹುಟ್ಟಿ ಬೆಳೆದಿದ್ದೇವೆ. ಆ ಸೂಕ್ಷ್ಮ ಕೋಶವು ಮುಂದೆ ಇಡೀ ದೇಹವಾಗಿ ಬೆಳೆಯಲು ಬೇಕಾದ ಅಂದರೆ ಜೀವಕೋಶವು ಮುಂದೆ ಎಲ್ಲಾ ಬಗೆಯ ಜೀವಕೋಶಗಳಾಗಿ ಬೆಳೆಯುವ ಮಾಹಿತಿಯನ್ನು ಹೊತ್ತಿರುತ್ತದೆ. ಆದ್ದರಿಂದಲೇ ನಮಗೆ ಕೈ ಕಾಲು, ಕಣ್ಣು ಬಾಯಿ ಇತರೆ ಎಲ್ಲಾ ಬಗೆಯ ಅವಯವಗಳಾಗುವ ಸಾಧ್ಯತೆಯಿರುತ್ತದೆ. ಗರ್ಭಾಂಕುರವಾದಾಗ ಈ ಜೀವಕೋಶವು ಬಲಿತಿರದ ಜೀವಕೋಶವಾಗಿದ್ದು ಅದನ್ನು ಪ್ಲೂರಿಪೊಟೆಂಟ್ ಸ್ಟೆಮ್ ಜೀವಕೋಶ ಎನ್ನುತ್ತಾರೆ. ಪ್ಲೂರಿಪೊಟೆಂಟ್- ಎಂದರೆ "ವೈವಿಧ್ಯಮಯ ಶಕ್ತಿಯುಳ್ಳ" ಎಂದರ್ಥ. ಈ ಭ್ರೂಣವೇ ಮುಂದೆ ಬೆಳೆದು ಬಲಿತ ದೇಹವುಳ್ಳ ಜೀವಿಯಾಗಿ ಹೊರಹೊಮ್ಮುತ್ತದೆ. ನಮ್ಮೆಲ್ಲರ ಸಾಮಾನ್ಯ ನಂಬಿಕೆ ಎಂದರೆ ಬೆಳೆದ ಜೀವಕೋಶವು ಹಿಮ್ಮುಖವಾಗಿ ಎಳೆತನಕ್ಕೆ ಹಿಂದಿರುಗಿ ಬೆಳೆಯಲಾರದು. ಆದರೆ ಇದೀಗ ಅಂತಹ ತಿಳಿವಳಿಕೆ ಬದಲಾಗಿದ್ದೂ ಅಲ್ಲದೆ ಅದಕ್ಕೆ ವಿಜ್ಞಾನ ಜಗತ್ತಿನ ಅತ್ಯುನ್ನತ ಮಾನ್ಯತೆ ದೊರಕಿದೆ. ಬಲಿತಂತಹ ಜೀವಕೋಶಗಳಿಗೂ ವೈವಿಧ್ಯಮಯ ಶಕ್ತಿಯ ಸಾಧ್ಯತೆಗೆ ಅವಕಾಶ ಇರುವುದನ್ನು ಪತ್ತೆ ಹಚ್ಚಲಾಗಿದೆ. ಮೊದಲು ಜಾನ್ ಗುರ್ಡಾನ್ ಎಳೆತನದ ಕೋಶಗಳನ್ನು ಸಾಧಿಸಿ ತೋರಿಸಿದರೆ ಶಿನ್ಯಾ ಯಮನಕಾ ಬಲಿತ ಕೋಶಗಳೂ ಅದೇ ಬಯಕೆಗಳನ್ನು ಹೊತ್ತಿರುವುದನ್ನು ತೋರಿಸಿದರು.

ಕಪ್ಪೆಯ ಹಿಮ್ಮುಖ ನೆಗೆತ

ಕಪ್ಪೆಯು ಹಿಮ್ಮುಖವಾಗಿ ನೆಗೆಯುವಂತಾಗಿದೆಯೇ? ಜಾನ್ ಗುರ್ಡಾನ್ ಅವರ ಸಂಶೋಧನೆಯು ಇದನ್ನೇ ಮಾಡಿದ್ದು! ಕಪ್ಪೆಯ ಕರುಳಿನ ಜೀವಕೋಶದಿಂದ ತೆಗೆದ ನ್ಯೂಕ್ಲಿಯಸ್ಸನ್ನು ಭ್ರೂಣದ ಜೀವಕೋಶಕ್ಕೆ ಸೇರಿಸಿದಾಗ, ಅದು ಮೊದಲಿನ ಭ್ರೂಣದ ನ್ಯೂಕ್ಲಿಯಸ್ಸಿನಂತೆಯೇ ವರ್ತಿಸಿ ಅದರಿಂದ ಮುಂದೆ ಕಪ್ಪೆಯ ಮರಿಯೇ ಹುಟ್ಟಿತು. ಅಂದರೆ ಮುಪ್ಪಾಗುವಂತಿದ್ದ ಬಲಿತ ಜೀವಕೋಶದಿಂದ ಭ್ರೂಣದ ಜೀವಕೋಶದ ಬೆಳವಣಿಗೆ ಸಾಧ್ಯವಾಯಿತು. ಆದರೆ ಇವರ ಸಂಶೋಧನೆಯು ಜೀವಕೋಶ ಒಂದರ ನ್ಯೂಕ್ಲಿಯಸ್ಸನ್ನು ತೆಗೆದುಹಾಕಿ ನಂತರ ಬದಲಿಗೆ ಬಲಿತ ಜೀವಕೋಶದ ನ್ಯೂಕ್ಲಿಯಸ್ಸನ್ನು ಸೇರಿಸುವುದರಿಂದ ಪಡೆದ ಎಳೆಯ ಜೀವಕೋಶವಾಗಿತ್ತು, ಆದ್ದರಿಂದ ಇದು ಒಂದು ಪ್ರಶ್ನೆಯನ್ನು ಹುಟ್ಟುಹಾಕಿತ್ತು, ಅದೆಂದರೆ ಅಂಗಾಂಗಕ್ಕೆ ಹೊಂದಿಕೊಂಡ ಜೀವಕೋಶದಿಂದ ಈ ಬಗೆಯ ಹಿಮ್ಮುಖ ವರ್ತನೆಯಿಂದ ಸ್ಟೆಮ್ ಜೀವಕೋಶಗಳನ್ನು ಪಡೆಯುವುದು ಸಾಧ್ಯವೇ? ಎಂಬುದು. ಅಂಗಾಂಗಕ್ಕೆ ಹೊಂದಿಕೊಂಡ ಮೇಲೆ ಸಹಜವಾಗಿ ಅವು ಬಲಿತ ಕೋಶಗಳಾಗಿರುತ್ತದೆ. ಆಗಲೂ ಸಾಧ್ಯವಾದಲ್ಲಿ ಎಂದಾದರೂ ಮತ್ತೆ ಹಿಮ್ಮುಖವಾಗಿ ಪಯಣಿಸಿ ಅಂದರೆ ಅನಿವಾರ್ಯ ಸಂದರ್ಭದಲ್ಲಿ ಎಳೆಯ ಕೋಶಗಳಾಗಿ ಮಾರ್ಪಡಿಸುವ ಸಾಧ್ಯತೆ ಇರುತ್ತದೆ. ಅಂತ ಪ್ರಶ್ನೆಗೆ ಮುಂದುವರೆದ ಉತ್ತರ ಸಿಗಲು ಸಾಕಷ್ಟು ವರ್ಷ ಕಾಯಬೇಕಾಯಿತು.


'ಯಮನಕಾ'ರ ಉತ್ತರದಿಂದ ಜೀವಕೋಶಗಳ ವಾಪಸ್ಸು ಪಯಣ

ಅಂಗಾಂಗಕ್ಕೆ ಹೊಂದಿಕೊಂಡ ಬಲಿತ ಕೋಶಗಳಿಂದ ಹಿಂದಕ್ಕೆ ಚಲಿಸಿ ಸ್ಟೆಮ್ ಜೀವಕೋಶಗಳನ್ನು ಪಡೆಯುವ ಉತ್ತರವು ದೊರೆಯಲು ಮುಂದೆ 44 ವರ್ಷಗಳೇ ಬೇಕಾದವು. 2006ರಲ್ಲಿ ಶಿನ್ಯಾ ಯಮನಕಾ ಅವರಿಂದ ಇಂತಹದ್ದೊಂದು ಮಹತ್ತರ ಸಂಶೋಧನೆಯು ಸಾಧ್ಯಮಾಡಿತು. ಗುರ್ಡಾನ್‌ರ ಪ್ರಶ್ನೆ ಹುಟ್ಟಿದ ವರ್ಷವೇ ಜನಿಸಿದ್ದ ಯಮನಕಾ ಅವರು ಇಲಿಗಳಿಂದ ಪಡೆದ ಬಲಿತ ಜೀವಕೋಶಗಳಿಂದ ಬಲಿಯದ ಜೀವಕೋಶಗಳನ್ನು ಸೃಷ್ಟಿ ಮಾಡಿ ಅದ್ವಿತೀಯ ಸಾಧನೆಗೈದರು. ಪಶ್ಚಿಮದ ಇಂಗ್ಲೆಂಡ್ ಎತ್ತಿದ್ದ ವಿಕಾಸದ ಪ್ರಶ್ನೆಗೆ ಪೂರ್ವದ ಜಪಾನಿನಲ್ಲಿ ಸಾಧ್ಯತೆಯ ಉತ್ತರಗಳು ಹುಟ್ಟಿದವು. ಶಿನ್ಯಾ ಅವರು ಒಂದು ಹೆಜ್ಜೆ ಮುಂದೆ ಹೋಗಿ, ಇಲಿಯ ಸ್ಟೆಮ್ ಜೀವಕೋಶಗಳಲ್ಲಿ ಬಲಿಯದಂತೆ ಕಾಪಾಡಿಕೊಳ್ಳಬಲ್ಲ ಜೀನುಗಳನ್ನು ಪತ್ತೆ ಹಚ್ಚಿದರು. ಎಳೆತನವನ್ನು ಕಾಯ್ದಿಟ್ಟುಕೊಳ್ಳಬಲ್ಲ ಹಲವು ಜೀನುಗಳು ದೊರೆತವು. ಅವುಗಳಲ್ಲಿ 4 ಜೀನುಗ[...] ಬಲಿತ ಜೀವಕೋಶಗಳಿಗೆ ಮರುಚುಚ್ಚುವಿಕೆಯ[...] ಎಳೆತನವನ್ನು ಪುನರ್ ಸೃಷ್ಟಿಮಾಡಬಹುದ[...] ಸಾಬೀತುಮಾಡುವ ಸಂಶೋಧನೆಯಿಂದ ಸ್[...] ಜೀವಕೋಶಗಳ ಸಂಶೋಧನೆಯಲ್ಲಿ ಹೊಸತೊ[...] ಆಯಾಮವನ್ನು ಶಿನ್ಯಾ ಯಮನಕಾ ತಂದುಕೊ[...] ಜೀವಕೋಶಗಳ ಮತ್ತು ದೇಹದ ಅಂಗಾಂ[...] ಬೆಳವಣಿಗೆಯಲ್ಲಿ ವೈಜ್ಞಾನಿಕ ತಿಳಿವಳಿಕೆಗೆ ಇದೊ[...] ಕ್ರಾಂತಿಕಾರಕ ಸಂಶೋಧನೆ. ಅಲ್ಲದೇ ಇವು ಪರಿಪೂರ್ಣ[...] ಹುಟ್ಟುಹಾಕಿದ ಎಳೆತನದ ಸ್ಟೆಮ್ ಜೀವಕೋಶಗಳಾಗಿ[...] ಆದ್ದರಿಂದ ಜೈವಿಕ ತಿಳಿವಳಿಕೆಯಲ್ಲಿ ಹೊಸಲೋಕವೊ[...] ಉದಯಿಸಿದಂತಾಗಿ ಜೀವಶಾಸ್ತ್ರೀಯ ಪುಸ್ತಕಗಳು[...] ವಿವರಗಳನ್ನು ಬದಲಾಯಿಸಿಕೊಳ್ಳುವ ಕಾಲಬಂ[...] ಮುಪ್ಪಾದ ಜೀವಕೋಶಗಳು ಮತ್ತೆ ಎಳೆ[...] ಹಿಮ್ಮುಖವಾಗಿ ಸಾಗಿ ಮತ್ತೆ ಹೊಸಜೀವನ ಆರಂಭ[...] "ರೌಂಡ್‌ಅಪ್" -ಜೀವನ ಪಯಣದ ಬ[...] ತಿಳಿದಂತಾಯಿತು. ಅಭಿವೃದ್ಧಿ ಜೀವಶಾಸ್ತ್ರದ ಅಧ್ಯಯ[...] ಮಾನವ ರೋಗಗಳ ಅಧ್ಯಯನಕ್ಕೆ ಹಾಗೂ ಚಿಕಿತ್ಸೆಗೆ[...] ಆಯಮ ಒದಗಿಸುವ ಈ ತಿಳಿವಳಿಕೆಯು ಮ[...] ಜೀವನದ ಹೊಸ "ಜೈವಿಕತೆ"ಗೆ ನಾಂದಿಯಾಗಿದೆ.

ಪಶ್ಚಿಮ ಹಾಗೂ ಪೂರ್ವದ ಸಂಗ[...]

2012ನೇ ವರ್ಷದ ವೈದ್ಯಕೀಯ ರಂಗದ ನೊ[...] ಪ್ರಶಸ್ತಿಯು ಹಂಚಿಕೊಂಡವರು ಯುನೈಟೆಡ್ ಕಿಂಗ[...] ಸರ್ ಜಾನ್ ಬಿ. ಗುರ್ಡಾನ್ ಮತ್ತು ಜಪಾನಿನ[...] ಯಮನಕಾ ಅವರು. ಹಳೆಯ ಪ್ರಪಂಚದ ಭೂಪಟ[...] ಪಶ್ಚಿಮ ಮತ್ತು ಪೂರ್ವದ ತುದಿಗಳ ದ್ವೀಪಗಳ ತಿಳಿ[...] ಸಂಗಮದಿಂದ ಹೊಸಜೈವಿಕ ಶಕೆ ಆರಂಭವಾದಂತ[...] ಸರ್ ಜಾನ್ ಬಿ. ಗುರ್ಡಾನ್ ಯುನೈಟೆಡ್ ಕಿಂಗ[...] ಆಕ್ಸ್‌ಫರ್ಡ್ ವಿಶ್ವವಿದ್ಯಾಲಯದಲ್ಲಿ ಅಭ್ಯಾಸ[...] ಕ್ಯಾಲಿಫೋರ್ನಿಯಾ ತಾಂತ್ರಿಕ ವಿದ್ಯಾಲದಲ್ಲಿ ಪೋ[...] ಡಾಕ್ಟರಲ್ ಸಂಶೋಧನೆ ಕೈಗೊಂಡು ನಂತರ ಕೇಂ[...] ವಿಶ್ವವಿದ್ಯಾಲಯಕ್ಕೆ ಸೇರಿದರು. ಸದ್ಯಕ್ಕೆ ಕೇಂಬ್ರಿಡ್ಜ್‌ನ[...] ಸಂಶೋಧನಾ ನಿರತರು. ಶಿನ್ಯಾ ಯಮನಕಾ ಜ[...] ಕೊಬೆ ವಿಶ್ವವಿದ್ಯಾಲಯದಲ್ಲಿ ವೈದ್ಯಕೀಯ ಪದವಿ [...] ಮೂಳೆತಜ್ಞರಾಗಿದ್ದವರು. ಮುಂದೆ ಮೂಲ ವಿಜ್ಞಾ[...] ಮುಖಮಾಡಿ ಸ್ಯಾನ್ ಫ್ರಾನ್ಸಿಸ್ಕೋದ ಗ್ಲಾಡ್‌ಸ[...] ವಿದ್ಯಾಲಯದಲ್ಲೂ ಹಾಗೂ ಜಪಾನಿನ [...] ವಿದ್ಯಾಲಯದಲ್ಲೂ ದುಡಿದರು. ಸದ್ಯಕ್ಕೆ ಜಪಾನಿನ ಕ್ಯೋ[...] ವಿಶ್ವವಿದ್ಯಾಲಯದಲ್ಲಿ ಪ್ರೊಫೆಸರ್ ಆಗಿ[...] ಪೂರ್ವ-ಪಶ್ಚಿಮಗಳ ಸಂಗಮವೇ ದಿನದ ವರ್ತುಲವ[...]

ನೀನು ಸತ್ತ ಸುದ್ದಿ ನಂಬುವುದಿಲ್ಲ!



1
ನಿನ್ನ ದೇಹಕ್ಕೆ ಸಾವಿಲ್ಲ
ಕ್ಷಣಕ್ಷಣವೂ ಕಾಡುವೆ
ಖಾಲಿಯಾಗಿರುವ ನಮ್ಮ ಎದೆಗೂಡುಗಳಿಗೆ
ಜೋತು ಬಿದ್ದು
2
ಹುಡುಕುತ್ತಿದ್ದೇನೆ
ದಡಕೆ ಅಪ್ಪಳಿಸುವ ತೆರೆಗಳಲ್ಲಿ
ನಿನ್ನ ಗೆಳೆಯರ ಗುಂಪನ್ನು
ಎಲ್ಲೆಡೆ ಅವರದೇ ಸದ್ದು ಮತ್ತು ಗದ್ದಲ
3
ನಿನ್ನ ಚಿರ ಮೌನಕ್ಕೆ
ಅರ್ಥ ಹುಡುಕುತ್ತಿದ್ದೇನೆ
ತಡಕಾಡುತ್ತಿದ್ದೇನೆ ಶಬ್ದಗಳಿಗೆ
ನಿನ್ನ ಉತ್ತರ ಆ ನಗುವೊಂದೆ!
4
ಮತ್ತೆ ಮತ್ತೆ ಆವರಿಸುವ
ನಿನ್ನ ಮುಖ ಕಂಡು ಬೆದರುತ್ತೇನೆ
ಕಡಲ ತಡಿಗೆ ಓಡಿ ಮತ್ತೆ ಕಾಯುತ್ತೇನೆ
ನೀನು ಮತ್ತೊಮ್ಮೆ ಬರಬಹುದೆಂದು.
5
ಎಲ್ಲೋ ಯುದ್ಧ
ಯಾರೋ ಸೇನಾನಿ
ನಾನು, ನೀನು ಎಲ್ಲರೂ
ಬರೀ ಮೂಕ ಪ್ರೇಕ್ಷಕರು!
6
ಸಂಜೆ ನೀಲಿ ಕಡಲು ಕೆಂಪಾಗುವ ಕ್ಷಣ
ಎಲ್ಲರ ಕೈಯಲ್ಲೂ ಕತ್ತಿ-ಕೊಡಲಿ
ರಕ್ತದ ಕಾಲುವೆ ಮೈಲುಗಟ್ಟಲೆ ಹರಿಯುತ್ತ[...]
ಸಮುದ್ರವೂ ಕೆಂಪಾಗುತ್ತದೆ ಇಲ್ಲಿ
7
ನಿನ್ನ ಸತ್ತ ಸುದ್ದಿ ನಂಬುವುದಿಲ್ಲ
ನನ್ನ ಭ್ರಮೆಯಷ್ಟೇ ನೀನು ಸತ್ತಿಲ್ಲ
ನಾವೆಲ್ಲರೂ ಬದುಕಿರುವಷ್ಟು ದಿನ
ಸಾಯುವ ಸರದಿ ನಿನ್ನದಲ್ಲ!!!

■ ಶ್ರೀನ[...]

ಯೋಗೇಶ್ ಮಾಸ್ಟರ್

ಪುರಾಣದ ಹೂರಣ

ಬುದ್ಧನ ಧೋರಣೆ

ರ್ಮನ್ ಹೆಸ್ಸೆಯ ಸಿದ್ಧಾರ್ಥನೆಂದರೆ ಬರಿಯ ಪಕ ಮಾತ್ರನಲ್ಲ; ಬುದ್ಧನನ್ನೂ ಮೀರಿ ತನ್ನದೇ ದ್ಧತಿಯಲ್ಲಿ ಬೆಳೆಯಬಹುದಾದ ಒಂದು ತಾತ್ವಿಕ ಮತ್ತು ತ್ಮಿಕ ವಿಕಾಸವಾದ.

ಹಾಗಾಗಿಯೇ ಸಿದ್ಧಾರ್ಥನು ಬುದ್ಧನ ಸಂಧಿಸಿದ ನಂತರ ನ ಅನುಯಾಯಿಯಾಗಿರಲು ಇಷ್ಟ ಪಡುವುದಿಲ್ಲ. ಓ ಪರಮ ತೇಜಸ್ವಿಯೇ. ನನ್ನ ಲೌಕಿಕ ಬದುಕಿನ ಂದ ಬಿಡುಗಡೆ ಹೊಂದಲು ನಿನ್ನಲ್ಲಿಗೆ ಬಂದಿದ್ದೇನೆ ಮೇ. ನಿನ್ನ ದಾರಿಯನ್ನು ತೋರು ಮಹಾಂತನೇ" ಇತರರು ಬುದ್ಧನ ಅನುಯಾಯಿಗಳಾಗಿ ಸಂಘದಲ್ಲಿ ಪಡೆದು ಬಿಕ್ಕುಗಳಾಗುವುದನ್ನು ಕಂಡು ಸಿದ್ಧಾರ್ಥನ ತ, ಅನುಸರಿಸುವಂತಹ ಸ್ವಭಾವವನ್ನು ಹೊಂದಿರುವ ಂದ ಕೂಡಲೇ ಬುದ್ಧನ ಅನುಯಾಯಿಯಾಗುತ್ತಾನೆ. ಯೇ ಸಿದ್ಧಾರ್ಥನೂ ದೀಕ್ಷೆ ಪಡೆಯುತ್ತಾನೆಂದು ಸುತ್ತಾನೆ. ಆದರೆ ಸಿದ್ಧಾರ್ಥ, ಹೌದು, ಸಹಜವಾಗಿ ಸರಿಯುತ್ತಾನೆ.

ಗೋವಿಂದ ಇದನ್ನು ಸಹಿಸದೇ, "ಸಿದ್ಧಾರ್ಥ, ನಿನ್ನನ್ನು ುವುದು ನನಗೆ ಸರಿಯೆನಿಸದು. ನಾವಿಬ್ಬರೂ ಬುದ್ಧನ ಶಗಳನ್ನು ಕೇಳಿದ್ದೇವೆ. ನಾನು ಅವನ ಯಾಯಿಯಾದೆ. ನೀನೇನು ಮಾಡಿದೆ ಗೆಳೆಯಾ? ಕೈವಲ್ಯದ ದಾರಿ ಬೇಡವೇ? ಇನ್ನೂ ಯಾವುದಕ್ಕಾಗಿ ಬತ್ತಿರುವೆ?" ಎಂದೇ ಕೇಳುತ್ತಾನೆ.

ಸ್ವತಂತ್ರ ದಾರಿ

ಗೋವಿಂದ, ಅಂತೂ ನೀನು ನಿನ್ನದೇ ಆದ ಯನ್ನು ಕಂಡುಕೊಂಡು, ಸ್ವತಂತ್ರವಾದ ಹೆಜ್ಜೆಯನ್ನು ುವೆ. ಯಾವಾಗಲೂ ನೀನು ನನ್ನ ಗೆಳೆಯನಾಗೇ ಗೋವಿಂದ. ನನ್ನ ನೆರಳಿನಲ್ಲಿಯೇ ನಡೆಯುತ್ತಿದ್ದೆ. ಗಾದರೂ ಈ ನನ್ನ ಗೋವಿಂದ ತನ್ನ ಮನಸ್ಸಿಗೆ ನಡೆದುಕೊಳ್ಳಬಾರದೇ ಎಂದು ಆಶಿಸುತ್ತಿದ್ದೆ. ಈಗ ದಾರಿಯನ್ನು ನೀನೇ ಕಂಡುಕೊಂಡಿರುವೆ ಗೆಳೆಯಾ. ದಾರಿಯು ಗುರಿಯನ್ನು ಮುಟ್ಟಲಿ. ದುರಿತಗಳಿಂದ ಸಿಗಲಿ ಎಂದು ಪ್ರಾಮಾಣಿಕವಾಗಿ ಹಾರೈಸುವೆ ನಾ" ಎಂದು ಹಾರೈಸುವ ಸಿದ್ಧಾರ್ಥನಲ್ಲಿ ಎಲ್ಲಾ ಮಗಳಲ್ಲೂ ತನ್ನನ್ನೇ ಅನುಸರಿಸುತ್ತಿರುವ ಗೆಳೆಯ ೂಂದು ಸ್ವತಂತ್ರ ನಿರ್ಧಾರ ತೆಗೆದುಕೊಂಡಿರುವುದಕ್ಕೆ ದಿಸುತ್ತಾನೆ. ಆದರೆ ಗೋವಿಂದನಿಗೆ ತಾನು ರಿಸಲು ಇಚ್ಛಿಸುವ ಬುದ್ಧನ ದಾರಿಯಿಂದ ತನ್ನ ದೂರ ಸರಿಯುವನೆಂದು ಸಂಕಟ. ಸ್ನೇಹಬಂಧದಿಂದ ಕೊಳ್ಳಲಾಗದೇ ದುಃಖಿಸುವನು, ಅಳುವನು, ಕಾಲಿಗೆ ವನು. ಆದರೆ ಸಿದ್ಧಾರ್ಥ "ಗೋವಿಂದ, ನೀನೀಗ ನ ಸಮಾನ. ಅದನ್ನು ಮರೆಯಬೇಡ. ಬುದ್ಧನೂ ಬುದ್ಧನಾಗಲೆಂದೇ ಬಯಸುತ್ತಾನೆ. ಅಷ್ಟೇ ಉನ್ನತವಾದ ಗೆ ಸಾಗುವುದನ್ನು ಬಯಸು ಗೆಳೆಯಾ. ನಾನು ನಿನ್ನ ಹೊರಡುತ್ತೇನೆ" ಎಂದು ಹೇಳಿದಾಗ ಗೋವಿಂದ ಗೊಂಡು, "ಹೇಳು, ನೀನು ಯಾಕೆ ಬುದ್ಧನ ಧನೆಗಳನ್ನು ಕೇಳ್ತಿಲ್ಲ, ಅದರಲ್ಲಿ ಏನಿದೆ ತೊಂದರೆ?" ಕೇಳುತ್ತಾನೆ.


ಸಾಧು, ಸಾಧು ಗೋವಿಂದ. ಅಂಥಾ ಪೂರ್ಣಪ್ರಜ್ಞ ಯ ಬೋಧನೆಯಲ್ಲಿ ಏನು ತಾನೇ ಕೊರತೆ ಇರಲು ? ಗೋವಿಂದಾ, ಈ ಬುದ್ಧನ ಪ್ರಾಮಾಣಿಕತೆಯೇ ತ್ರ ್ಯತೆ. ಹಿಂದೆಂದೂ ಇಷ್ಟು ಪ್ರಾಮಾಣಿಕ ನನ್ನು ಈ ಸಿದ್ಧಾರ್ಥ ನೋಡಿರಲಿಲ್ಲ. ಆದರೆ, ನ ಜ್ಞಾನ ಮತ್ತು ಪ್ರಜ್ಞೆಯ ಸಿದ್ಧಿಯನ್ನು ನಾನು ಬೇಕಾದರೆ ಅದೇ ಪ್ರಾಮಾಣಿಕತೆಯ ಆಶ್ರಯ ುಬೇಕು" ಎಂದೆನ್ನುವ ಸಿದ್ಧಾರ್ಥ ಬುದ್ಧನನ್ನು ಸುವನು.

ಬುದ್ಧನೊಡನೆ ಮುಖಾಮುಖಿ

ದೊಂದು ಸುಂದರವಾದ ರೂಪಕ. ಹರ್ಮನ್ ು ತಾವು ಸಂಧಿಸುವ, ತಾವು ಪ್ರಶ್ನಿಸುವ ಬುದ್ಧನನ್ನು ಗೆ ಭೇಟಿಯಾಗುವಂತೆ ಮಾಡುತ್ತಾರೆ. ಇಲ್ಲಿ ಮತ್ತು ಬುದ್ಧ ಮುಖಾಮುಖಿಯಾಗುವುದೆಂದರೆ ಹೆಸ್ಸೆ ಮತ್ತು ಬುದ್ಧ ಮುಖಾಮುಖಿಯಾಗುವುದು. ುವುದು, ಸಂಭಾಷಿಸುವುದು, ಚರ್ಚಿಸುವುದು, ಪರಸ್ಪರ ಭೇದಗಳನ್ನು ವ್ಯಕ್ತಪಡಿಸುವುದು, ಗಳನ್ನು ತಂದುಕೊಳ್ಳುವುದು. ಇದು ಸಾಧ್ಯ ಗಳ ಹಿಂದೆ, ಸಹಸ್ರಮಾನಗಳ ಹಿಂದೆ ಹೋಗಿರಬಹುದಾದಂತಹ ಜೀವಗಳಾಗಿದ್ದರೂ ದಲ್ಲಿ ವೈಚಾರಿಕವಾಗಿ, ಭಾವುಕವಾಗಿ ಸಂಧಿಸಲು, ಮುಖಾಮುಖಿಯಾಗಲು ಸಾಧ್ಯವೆಂದು ಹೆಸ್ಸೆಯ ಸಿದ್ಧಾರ್ಥ ಮಾತ್ರವಲ್ಲದೇ, ಜಗತ್ತಿನ ಸಮಕಾಲೀನರ ಅನೇಕಾನೇಕ ಕೃತಿಗಳು ಸಾಧಿಸಿ ನಿವೆ.

ಸಿದ್ಧಾರ್ಥನು, "ಪರಮ ಜ್ಞಾನಿಯೇ, ಇಂದು ನನಗೆ ತಮ್ಮ ಅದ್ಭುತವಾದ ಬೋಧನೆಯನ್ನು ಕೇಳುವ ಸದವಕಾಶ ಲಭಿಸಿತು. ತಮ್ಮ ಬೋಧನೆಯನ್ನು ಕೇಳುವುದಕ್ಕಾಗಿಯೇ ನಾನೂ ಮತ್ತು ನನ್ನ ಗೆಳೆಯ ಬಹುದೂರದಿಂದ ಬಂದಿದ್ದೆವು. ಈಗ ನನ್ನ ಗೆಳೆಯನು ನನ್ನ ತೊರೆದು ನಿಮ್ಮಲ್ಲಿ ಆಶ್ರಯ ಪಡೆದಿದ್ದಾನೆ. ಆದರೆ ನಾನು ನನ್ನ ಯಾತ್ರೆಯನ್ನು ಮುಂದುವರಿಸುತ್ತೇನೆ" ಎನ್ನುವಲ್ಲಿ ಹರ್ಮನ್ ಹೆಸ್ಸೆ ತಮ್ಮ ತಾತ್ವಿಕ ಮತ್ತು ಆಧ್ಯಾತ್ಮಿಕ ಹುಡುಕಾಟವನ್ನು ಮುಂದು ವರಿಸುವ, ತಮ್ಮ ಸಹಜೀವಿಗಳು ಬೌದ್ಧರಾಗಿರುವುದನ್ನು ಸಂಕೇತಿಸುತ್ತಾರೆ.

ಆದರೆ ಬುದ್ಧ ಹೇಳುವುದಾದರೂ ಏನು? "ನಿನ್ನಿಷ್ಟದಂತೆಯೇ ಆಗಲಿ." ಬುದ್ಧ ಒಂದು ಸಾಂಸ್ಥಿಕ ಧರ್ಮದ ರೂಪವನ್ನು ತನ್ನ ಸಂಘಟನೆಗೆ ಕೊಡದೇ ಇದ್ದವನು ಮಾತ್ರವಲ್ಲದೇ ಅದೊಂದು ಸಂಘವೇ ಆಗಿತ್ತು. ಯಾರು ಯಾವುದನ್ನು ವೈಯಕ್ತಿಕವಾಗಿ ಮಾಡಿಕೊಳ್ಳಬಹುದಾಗಿದ್ದಲ್ಲದೇ





ವೈಚಾರಿಕವಾಗಿ, ತಾತ್ವಿಕವಾಗಿ ಒಂದೆಡೆ ಸೇರಿ ಜಿಜ್ಞಾಸುಗಳಾಗಬಹುದಾಗಿತ್ತು. ಬಸವಣ್ಣನ ಅನುಭವ ಮಂಟಪ ಬುದ್ಧನ ಸಂಘಕ್ಕಿಂತಲೂ ಹೆಚ್ಚು ವಿಕಾಸವಾಗಿ ಅಭಿವ್ಯಕ್ತವಾಗುತ್ತದೆ. ಬುದ್ಧನ ಸಂಘದಲ್ಲಿ ಜೀವನಕ್ರಮದ ಬಗ್ಗೆ ಇದ್ದಂತಹ ಒಂದು ಚೌಕಟ್ಟು ಅಥವಾ ನಿಯಮಾಧಾರಿತ ಕ್ರಮ ಅನುಭವ ಮಂಟಪದಲ್ಲಿ ಇರಲಿಲ್ಲ. ಬದಲಾಗಿ ಅವರವರ ಕಾಯಕಗಳನ್ನು ಅನುಸರಿಸುತ್ತಾ, ಅವರವರ ಜೀವನ ಧರ್ಮವನ್ನು ಪಾಲಿಸುತ್ತಾ ಸಾಮಾಜಿಕವಾಗಿ ಮತ್ತು ತಾತ್ವಿಕವಾಗಿ ಒಂದೆಡೆ ನೆಲೆಗೊಳ್ಳುವ ನಿಯಮವನ್ನಷ್ಟೇ ಅನುಸರಿಸುತ್ತಿದ್ದರು. ಅದೇ ಶರಣ ಸಂಸ್ಕೃತಿ. ಶರಣರಿಗೆ ಮತ್ತು ಬಿಕ್ಕುಗಳಿಗೆ ತಾವು ನಡೆಸುವ ಜೀವನ ಕ್ರಮದಲ್ಲಿ ವ್ಯತ್ಯಾಸವಿದ್ದುದಾದರೂ ಅವರ ಧ್ಯೇಯ ಮತ್ತು ಧೋರಣೆಗಳು ಹೋಲುವಂತಹುದೇ ಆಗಿದ್ದವು.

ಇರಲಿ, ಸಿದ್ಧಾರ್ಥ ಬುದ್ಧನೊಂದಿಗೆ ತನ್ನ ಪ್ರಾಮಾಣಿಕ ಆಲೋಚನೆಗಳನ್ನು ತಿಳಿಸಲು ಯತ್ನಿಸುತ್ತಾನೆ.

"ಮಹಾಂತನೇ, ನಿನ್ನ ಬೋಧನೆಗಳನ್ನು ನಾನು ಬಹುಪಾಲು ಮೆಚ್ಚಿರುವೆನು. ನಿನ್ನ ಮಾತುಗಳಲ್ಲಿ ಸ್ಪಷ್ಟತೆ ಮತ್ತು ಸಾಕ್ಷ್ಯತೆ ಇವೆ. ಓ ಪುರುಷೋತ್ತಮನೇ, ನನಗೆ ನೀನು ಪ್ರಬುದ್ಧನಾದ ಬುದ್ಧನೆಂಬುವುದರಲ್ಲಿ ಯಾವ ಅನುಮಾನವೂ ಇಲ್ಲ. ನೀನು ನಿನ್ನ ಗಮ್ಯವನ್ನು ಮುಟ್ಟಿರುವೀಯೆಂದು ನಾನು ನಂಬುತ್ತೇನೆ. ಇದು ನಿನಗೆ ದಕ್ಕಿರುವುದು ನಿನ್ನದೇ ಆದ ಹುಡುಕಾಟದಿಂದ. ನಿನ್ನದೇ ಆದ ವಿಚಾರಗಳು, ಧ್ಯಾನ, ತಪಸ್ಸು ಮತ್ತು ಜ್ಞಾನೋದಯದಿಂದ. ಅದು ಯಾರೊಬ್ಬರ ಬೋಧನೆಯಿಂದ ನಿನಗೆ ಸಿದ್ಧಿಸಲಿಲ್ಲ ಅಲ್ಲವೇ? ಬುದ್ಧನ ಬೋಧನೆಗಳು ಹೇಗೆ ಶೀಲಪೂರ್ಣವಾದಂತಹ ಬದುಕನ್ನು ನಡೆಸಬೇಕೆಂಬುದನ್ನು, ದುರಿತಗಳನ್ನು ಹೇಗೆ ಹೋಗಲಾಡಿಸಬೇಕೆಂಬುದನ್ನು ಹೊಂದಿವೆಯೇ ಹೊರತು, ಜ್ಞಾನೋದಯವೆಂಬುದಾದ ಸಮಯದಲ್ಲಿ ಅನುಭವಿಸಿದಂತಹ ರಹಸ್ಯ ಅನುಭಾವವನ್ನು ಹೊಂದಿಲ್ಲ ಅಲ್ಲವೇ? ಹಾಗಾಗಿ ನಾನು ನನ್ನ ಪ್ರಯಾಣವನ್ನು ಮುಂದುವರಿಸುತ್ತಿದ್ದೇನೆಯೇ ಹೊರತು, ಇನ್ನೂ ಉತ್ತಮ ಗುರುವನ್ನೋ ಅಥವಾ ಉನ್ನತವಾದ ಬೋಧನೆಯನ್ನೋ ಹೊಂದಲು ಅಲ್ಲ, ನನ್ನತನದ ನನ್ನ ಗಮ್ಯಕ್ಕೆ ನಾನೇ, ಯಾವುದೇ ಗುರುಗಳಿಲ್ಲದೇ ಬೋಧನೆಗಳಿಲ್ಲದೇ ಹೋಗುವುದು ಅಥವಾ ಅವುಗಳೇನೂ ಇಲ್ಲದೇ ನಾನಾಗಿಯೇ ಸಾಯುವುದು ಒಳಿತೆಂದು ಭಾವಿಸುತ್ತೇನೆ. ಆದರೆ, ಈ ದಿನ ಓರ್ವ ಶುದ್ಧ ಪ್ರಾಮಾಣಿಕ ಗುಣಪೂರ್ಣ ಮಹಾಂತನನ್ನು ನೋಡಿದ ಗಳಿಗೆಯನ್ನು ಜೀವನಪೂರ್ತಿ ಹೆಮ್ಮೆಯಿಂದ ಕಾಪಾಡಿಕೊಳ್ಳುತ್ತೇನೆ" ಎನ್ನುತ್ತಾ ಬುದ್ಧನ ಕರ್ಮ ಸಿದ್ಧಾಂತದ ಸರಪಳಿಯ ಕೊಂಡಿಗಳನ್ನು ವಿಮರ್ಶೆ ಮಾಡುತ್ತಾನೆ. ಪ್ರಶ್ನೆಗಳನ್ನು ಎತ್ತುತ್ತಾನೆ. ಅದಕ್ಕೆಲ್ಲಾ ಬುದ್ಧ ಸಮಾಧಾನದಿಂದ ಉತ್ತರಿಸುತ್ತಾ ಕೊನೆಗೆ "ನಿನ್ನ ವಿಚಾರಗಳು ತಪ್ಪಾಗದೇ. ನೀನು ನಿನ್ನ ಗಮ್ಯವನ್ನು ತಲುಪಲೆಂದು ನಾನು ಹಾರೈಸುತ್ತೇನೆ. ಆದರೆ, ಹೇಳು, ಇಲ್ಲಿರುವ ನನ್ನ ಅಸಂಖ್ಯಾತ ಬಿಕ್ಕುಗಳನ್ನು ನೀನು ನೋಡುತ್ತಿರುವೆಯಲ್ಲವೇ? ಇವರೆಲ್ಲ ನನ್ನ ಬೋಧನೆಯಲ್ಲಿ ಆಶ್ರಯ ಪಡೆದಿರುವಂತಹ ನನ್ನ ಸೋದರರು. ಓ ಅಪರಿಚಿತನೇ, ಓ ಸಮಾನನೇ, ಇವರೆಲ್ಲರೂ ಬೋಧನೆಗಳಿಂದ ಹೊರತಾಗಿ ಲೌಕಿಕ ಜಗತ್ತಿಗೆ ಮರಳಿ ಆಸೆಗಳನ್ನು ಹೊಂದಲೆಂದು ಬಯಸುತ್ತೀಯೇನು?" ಎಂದು ಸಿದ್ಧಾರ್ಥನನ್ನೇ ಕೇಳುತ್ತಾನೆ.

ಆಗ ಸಿದ್ಧಾರ್ಥ ತನ್ನ ನಿಲುವನ್ನು ವ್ಯಕ್ತಪಡಿಸುತ್ತಾನೆ, "ಅಂತಹ ವಿಚಾರವೇ ನನ್ನ ಮನಸ್ಸಿನಿಂದ ಬಹುದೂರ ಓ ಮಹಾಂತನೇ. ಯಾರೊಬ್ಬರ ಜೀವನವನ್ನು ನನ್ನ ತೀರ್ಮಾನಕ್ಕೆ ಒಳಪಡಿಸುವುದು ನನಗಿರುವ ಕೆಲಸವಲ್ಲ. ನನ್ನ ಆಯ್ಕೆ ಅಥವಾ ನಿರಾಕರಣೆಯ ಬಗ್ಗೆ ಮಾತ್ರ ನಾನು ನಿರ್ಧರಿಸಬಹುದಾಗಿದೆ. ಕೈವಲ್ಯ ಅಥವಾ ಮೋಕ್ಷವೇ, ಸಮಾನನಾಗಿರುವ ನನ್ನ ಗಮ್ಯ ಹೇ ಮಹಾಂತನೇ. ನಾನು ನಿನ್ನ ಹಲವು ಶಿಷ್ಯರಲ್ಲಿ ಒಬ್ಬನಾಗಿ ಬರಿಯ ಬೌದ್ಧ ಬಿಕ್ಕುವಾದರೆ, ನನ್ನತನವನ್ನೇ ನಿನ್ನ ಬೋಧನೆಗಳಲ್ಲಿ ಪ್ರತಿಷ್ಠಾಪಿಸಿಕೊಂಡುಬಿಡುತ್ತೇನೆಂಬ ಹಿಂಜರಿಕೆ ನನ್ನದು. ನಿನ್ನನ್ನು ಅನುಸರಿಸುವುದು ನನ್ನ ಕರ್ತವ್ಯವಾಗಿಬಿಡುತ್ತದೆ. ನಿನ್ನ ಪ್ರೀತಿಸುವುದು ಮತ್ತು ನಿನ್ನ ಈ ಸಂಘದ ಇತರ ಬಿಕ್ಕುಗಳೊಡನೆ ನನ್ನತನವನ್ನು ಸಮೀಕರಿಸಿಕೊಂಡು ಬುದ್ಧನಾಗದೇ ಬರಿಯ ಬೌದ್ಧನಾಗಿಬಿಡುತ್ತೇನೆ. ಅದನ್ನು ಮೀರಿದ ಪ್ರಬುದ್ಧತೆಗಾಗಿ ನಾನು ಹಾತೊರೆಯುತ್ತಿದ್ದೇನೆ ಹೇ ಬುದ್ಧನೇ" ಎಂದು ಹೇಳುತ್ತಾನೆ.

"ನನ್ನ ಬೋಧನೆ ಇದೆಯಲ್ಲಾ, ಅದು ಯಾವುದೇ ಅಭಿಪ್ರಾಯವಲ್ಲ, ಜಗತ್ತಿನ ಬಗ್ಗೆ ವಿವರಣೆ ನೀಡುವುದು ಅದರ ಗುರಿಯಲ್ಲ, ನನ್ನ ಬೋಧನೆಗೆ ಬೇರೆಯೇ ಆದ ಉದ್ದೇಶವಿದೆ. ಗುರಿಯಿದೆ. ಸಂಕಷ್ಟದಿಂದ ನರಳುತ್ತಿರುವವರಿಗೆ ಮುಕ್ತಿಯ ಹಾದಿ ತೋರುವುದೇ ನನ್ನ ಬೋಧನೆಯ ಉದ್ದೇಶ. ಮುಕ್ತಿಯ ಹಾದಿಯನ್ನು ಗೌತಮ ಬೋಧಿಸುತ್ತಾನೆ. ಅಷ್ಟೇ, ಮತ್ತೇನಿಲ್ಲ. ನೀನು ಓರ್ವ ಚತುರ ಸಮಾನ. ನಿನಗೆ ಬುದ್ಧಿವಂತಿಕೆಯಿಂದ ಮಾತನಾಡುವುದು ತಿಳಿದಿದೆ ನನ್ನ ಗೆಳೆಯನೇ. ಆದರೆ ಅತಿಪಾಂಡಿತ್ಯದ ಬಗ್ಗೆ ಎಚ್ಚರವಿರಲಿ" ಎಂದು ಬುದ್ಧ ಸಿದ್ಧಾರ್ಥನನ್ನು ಎಚ್ಚರಿಸುತ್ತಾನೆ.

ಜ್ಞಾನೋದಯ

ಸಿದ್ಧಾರ್ಥ ಬುದ್ಧನ ಪ್ರಭಾವದಿಂದ ಹೊರತಾಗಿ ತನ್ನ ಪ್ರಬುದ್ಧತೆಗಾಗಿ ಹೊರ ಬಂದರೂ ಬುದ್ಧನ ಪ್ರೇರೇಪಣೆಯಿಂದ ಆತನೇನೂ ಹೊರತಾಗಿರುವುದಿಲ್ಲ. "ಆತ್ಮಕ್ಕಾಗಿ ಹುಡುಕಾಟ ಮಾಡಿದೆ. ಅನ್ವೇಷಿಸಿದೆ ಬ್ರಹ್ಮನ್‌ಗಾಗಿ. ನೀನು ನಿನ್ನತನವನ್ನು ಛೇದಿಸಿ, ಪದರಪದರವಾಗಿ ಬಿಡಿಸಿ ಎಲ್ಲಾ ಪದರಗಳ ಒಳಗಿರುವ ತಿಳಿಯಲಾರದ ಒಳಗನ್ನು ಕಾಣುವುದಕ್ಕಾಗಿ ನೋಡಿದೆ. ಆ ಒಳಗೇ ಆತ್ಮನ್, ಅದೇ ಜೀವನ, ದೈವೀಭಾಗ, ಉತ್ಕೃಷ್ಟವಾದಂತಹ ವಸ್ತು. ಆದರೆ, ಈ ಪ್ರಕ್ರಿಯೆಯಲ್ಲಿ ನಿನ್ನತನವನ್ನೇ ನೀನು ಕಳೆದು ಕೊಂಡೆಯಲ್ಲವೇ ಸಿದ್ಧಾರ್ಥ?" ಎಂದು ಪ್ರಶ್ನಿಸಿಕೊಳ್ಳುತ್ತಾನೆ.

ಇದರಿಂದ ಬಹುಕಾಲದ ಕನಸುಗಳಿಂದ ಎಚ್ಚೆತ್ತವನಂತೆ ತೋರಿ, "ಓಹ್, ಈಗ ನಾನು ಈ ಸಿದ್ಧಾರ್ಥನನ್ನು ನನ್ನಿಂದ ತಪ್ಪಿಸಿಕೊಳ್ಳಲು ಬಿಡೆನು. ನಾನು ನನ್ನತನವನ್ನು ಕೊಂದುಕೊಂಡು, ಛೇದಿಸಿಕೊಂಡು, ಪದರಗಳನ್ನು ಬಿಡಿಸಿಕೊಂಡು, ಆ ಅವಶೇಷಗಳೊಳಗೆ ನನ್ನಾತ್ಮದ ರಹಸ್ಯವನ್ನು ಹುಡುಕಲಾರೆನು. ಯೋಗ, ವೇದ ಅಥವಾ ಇನ್ನಾವುದೇ ಬೋಧನೆಗಳಾಗಲಿ ನನಗೇನೂ ಬೋಧಿಸಲಾರವು. ನನ್ನಿಂದ ನಾನು ಕಲಿತುಕೊಳ್ಳಬೇಕು. ನನ್ನ ಶಿಷ್ಯ ನಾನೇ ಆಗಬೇಕು. ಈ ಸಿದ್ಧಾರ್ಥನ ರಹಸ್ಯವನ್ನು ಸಿದ್ಧಾರ್ಥನು ತಿಳಿಯಬೇಕು" ಎಂದು ಸುತ್ತಲೂ ನೋಡುವನು. ಇದೇ ಮೊದಲ ಬಾರಿಗೆ ನೋಡುತ್ತಿರುವನಂತೆ ನೋಡುವನು.

ಹೊಸಹೊಸಬನಾಗುವನು ಅನುಕ್ಷಣಂ ಮಾನವನು
ವಸುಧೆಯಾ ಮೂಸೆಯಲಿ ಪುಟಪಾಕವಾಂತು
ರಸಮೂರ್ತಿಯಾಗುವನು ಜಗದಾತ್ಮ ದುತಿಬೆಳೆಯು
ಕಸವೆಲ್ಲ ಕಳೆದವನು ಮಂಕುತಿಮ್ಮ

ಎಂಬಂತೆ, ಸಿದ್ಧಾರ್ಥನಿಗೆ ತಾನು ಹೊಚ್ಚಹೊಸದಾಗಿ ಜನ್ಮವೆತ್ತಿರುವಂತೆ ತೋರುತ್ತದೆ, ಕ್ರಿಸ್ತ ಹೇಳುವಂತೆ, "ಮತ್ತೆ ಹುಟ್ಟುತ್ತಾನೆ."

ಆಗ "ಈ ಜಗತ್ತು ಸುಂದರವಾಗಿದೆ. ವರ್ಣರಂಜಿತವಾಗಿದೆ. ವಿಶಿಷ್ಟವಾದ ಮರ್ಮದಿಂದ ಕೂಡಿದೆ ಈ ವಿಶ್ವ. ಅಲ್ಲಿ ನೀಲಿ, ಇಲ್ಲಿ ಹಳದಿ, ಇಲ್ಲಿ ಹಸಿರು. ಆಕಾಶ ತೆರೆದುಕೊಂಡಿದೆ. ನದಿ ಹರಿಯುತ್ತಿದೆ. ಗಿರಿಗಳೂ ಗಟ್ಟಿಯಾಗಿ ನಿಂತಿವೆ. ಎಲ್ಲವೂ ಸುಂದರವಾಗಿವೆ. ಎಲ್ಲವೂ ಮಾರ್ಮಿಕವಾಗಿಯೂ ಮಾಂತ್ರಿಕತೆಯಿಂದ ಕೂಡಿವೆ. ಇವುಗಳ ನಡುವೆ ಸಿದ್ಧಾರ್ಥ ಸಿದ್ಧಾರ್ಥನೇ, ಓರ್ವ ಎಚ್ಚೆತ್ತವನಾಗಿ ತನ್ನ ದಾರಿ ತಾನು ಹಿಡಿದಿದ್ದಾನೆ. ಈ ಎಲ್ಲವೂ, ಹಳದಿ, ನೀಲಿ, ನದಿ, ಕಾಡು ನನ್ನ ಕಣ್ಣುಗಳ ಮೂಲಕ ನನ್ನೊಳಗೆ ಪ್ರಪ್ರಥಮ ಬಾರಿ ಪ್ರವೇಶಿಸುತ್ತಿವೆ. ಇದು ಮಾರನ ಮಂತ್ರದ ಮಾತುಗಳಿಂದ ಅಲ್ಲ, ಮಾಯೆಯ ಮುಸುಕಿನಿಂದಲ್ಲ.

ನಾನು ಇಷ್ಟು ದಿನ ಎಷ್ಟೊಂದು ಕಿವುಡನಾಗಿದ್ದೆ, ಎಂಥ ಮೂರ್ಖನೂ ಆಗಿದ್ದೆ.


ಹೌದು, ಒಬ್ಬನು ಪುಸ್ತಕವೊಂದನ್ನು ಓದುವಾಗ, ಅದರಲ್ಲಿರುವ ವಾಕ್ಯಗಳ ಅರ್ಥವನ್ನು ತಿಳಿಯಲು ಯತ್ನಿಸುವಾಗ ಆತ ಎಂದೂ ಅದರಲ್ಲಿರುವ ಚಿಹ್ನೆಗಳನ್ನು, ಪದಪುಂಜಗಳನ್ನು, ಅಕ್ಷರಗಳನ್ನು ಜರಿಯುವುದಿಲ್ಲ; ಅವುಗಳನ್ನು ಕಾಕತಾಳೀಯ ಅರ್ಥವಿಲ್ಲದ ಆಲಾಪವೆಂದು ಹೀಗಳೆಯುವುದಿಲ್ಲ. ಆದರೆ, ಆತ ಪ್ರತಿಯೊಂದು ಅಕ್ಷರವನ್ನೂ ಬಿಡದೇ ಓದುತ್ತಾನೆ. ಅಧ್ಯಯನ ಮಾಡುತ್ತಾನೆ. ಪ್ರೀತಿಸುತ್ತಾನೆ. ಆದರೆ, ನಾನು? ನಾನೇನು ಮಾಡಿದೆ? ಈ ಜಗತ್ತಿನ ಪುಸ್ತಕವನ್ನು, ನನ್ನದೇ ದೇಹದ ಪುಸ್ತಕವನ್ನು ಓದಬಯಸಿದ ನಾನು, ಅದನ್ನು ಓದುವ ಮೊದಲೇ, ನನಗೆ ಬೇಕಾಗಿದ್ದ ಒಂದು ಅರ್ಥವನ್ನು ತಿಳಿದುಕೊಳ್ಳುವ ಸಲುವಾಗಿ ಅದರಲ್ಲಿನ ಚಿಹ್ನೆ, ಪದಗಳನ್ನು ದೂಷಿಸಲಾರಂಭಿಸಿದೆ! ದೃಷ್ಟಿಗೋಚರ ಈ ಜಗತ್ತನ್ನು ಮೋಸ ಎಂದು ಜರಿದೆ. ನನ್ನ ನಾಲಿಗೆ ಮತ್ತು ಕಂಗಳನ್ನು ಕಾಕತಾಳೀಯವಾದ ನಿಷ್ಪ್ರಯೋಜಕ ಅಂಗಗಳು ಎಂದುಬಿಟ್ಟೆ. ಇಲ್ಲ, ಹೀಗೆಲ್ಲಾ ಇದು ಆಗಬಾರದು. ನಾನು ಎಚ್ಚೆತ್ತುಕೊಂಡಿರುವೆ. ನನಗೆ ಈಗ ನಿಜವಾಗಿ ಅರಿವು ಮೂಡಿದೆ. ಈ ಸುದಿನಕ್ಕಿಂತ ಮೊದಲು ನಾನು ಹುಟ್ಟಿರಲೇ ಇಲ್ಲ" ಎಂದು ಅಸ್ತಿತ್ವದಲ್ಲಿ ತನ್ನ ಇರುವನ್ನು ಹೊಸ ಹುಟ್ಟನ್ನಾಗಿ ಕಂಡುಕೊಳ್ಳುತ್ತಾನೆ.

ಗೋವಿಂದ ಒಬ್ಬ ಬಿಕ್ಕುವಾದ. ಅವನಿಗೆ ಸಹಸ್ರಾರು ಬಿಕ್ಕುಗಳು ಸೋದರರಾಗಿದ್ದಾರೆ. ಅವನಂತೆಯೇ ಬಟ್ಟೆಯನ್ನು ತೊಟ್ಟುಕೊಂಡಿರುತ್ತಾರೆ. ಅವನಂತೆಯೇ ಶ್ರದ್ಧಾನಂಬುಗೆಯನ್ನು ಇರಿಸಿಕೊಂಡು ಅವನ ಭಾಷೆಯಲ್ಲಿಯೇ ಮಾತಾಡುತ್ತಾರೆ. ಆದರೆ ನಾನು, ಸಿದ್ಧಾರ್ಥ? ಎಲ್ಲಿಗೆ ಸಲ್ಲುವವನು? ಯಾರಲ್ಲಿ ನನ್ನ ಬದುಕನ್ನು ಹಂಚಿಕೊಳ್ಳುವೆನು? ಯಾವ ಭಾಷೆಯಲ್ಲಿ ನಾನು ಮಾತನಾಡಲಿ? ಎನ್ನುತ್ತಾ ಸಿದ್ಧಾರ್ಥ ತನ್ನ ಸ್ವತಂತ್ರವಾದ ಇರುವನ್ನು ಜಗತ್ತಿನ ಅಸ್ತಿತ್ವದಲ್ಲಿ ವಿಲೀನಗೊಳಿಸಿಕೊಳ್ಳಲು ಯತ್ನಿಸುತ್ತಾನೆ. ವಿಷಯಗಳನ್ನು ತುಂಡುತುಂಡಾಗಿ ಕತ್ತರಿಸಿ ಅರ್ಥೈಸಿಕೊಳ್ಳಲು ನೋಡದೇ ಸಮಗ್ರವಾಗಿ ಗ್ರಹಿಸಲು ಯತ್ನಿಸುತ್ತಾನೆ.

ವಾಸ್ತವಾಗಿ ಬುದ್ಧ ಬಯಸಿದ್ದೂ ಇದೇ ಎಂದು ಸಿದ್ಧಾರ್ಥ ಗ್ರಹಿಸುತ್ತಾನೆ. ತನ್ನ ನಕಲು ಪ್ರತಿಗಳನ್ನು ಬಯಸದಿದ್ದ ಬುದ್ಧ ತನಗಿಂತಲೂ ಪ್ರಬುದ್ಧರಾಗಬೇಕಾಗಿರುವ ಬುದ್ಧನ ಪರಂಪರೆಯನ್ನು ನಿರೀಕ್ಷಿಸುತ್ತಾನೆ.

ಬುದ್ಧನ ಪುನರಾವತಾರವೇ ಆಗಿದೆ ಎಂದು ನೇಪಾಳದ ರಾಮ ಬಹಾದ್ದೂರು ಬೋಮ್ಜಾನ್ ಬಗ್ಗೆ 2005-06 ರಲ್ಲಿ ಒಂದು ದೊಡ್ಡ ಸುದ್ದಿಯಾಗಿತ್ತು. ದಶಾವತಾರಗಳಲ್ಲಿ ವಿಷ್ಣು ಧರ್ಮಸಂಸ್ಥಾಪನೆಗಾಗಿ ಆಗಾಗ ಅವತಾರವೆತ್ತುವಂತೆ ಬುದ್ಧನೂ ಅವತಾರವೆತ್ತಿಬಿಟ್ಟನೇ ಅಥವಾ ಆ ಗೌತಮ ಬುದ್ಧನಿಗೆ ಸಂಬಂಧವಿಲ್ಲದಂತೆ ಬುದ್ಧನೆಂಬುವವನು ಕಾಣಿಸಿಕೊಂಡನೇ. ನೋಡೋಣ ಮುಂದಿನವಾರ. ■


ಹವ್ಯಕರಿಗೇನಾಗಿದೆ? ಈ ಸರಕಾರಕ್ಕೇನಾಗಿದೆ



ಮಂಗಳೂರಿನಲ್ಲಿ ಐದಾರು ತಿಂಗಳುಗಳ ಹಿಂದೆ ಸಮಾನಮನಸ್ಕರ ಸಭೆಯೊಂದು ನಡೆದಿತ್ತು, ಅದರಲ್ಲಿ ಖ್ಯಾತ ಚಿಂತಕರಾದ ಲಕ್ಷ್ಮೀಶ ತೋಳ್ಪಾಡಿಯವರು ಆರಂಭದಲ್ಲೇ ಹೇಳಿದ ಮಾತೆಂದರೆ 'ಈ ಹವ್ಯಕರಿಗೇನಾಗಿದೆ?' ಎಂದು. ಅದನ್ನೇ ಅವರು ಪುನಃ ಪುನಃ ಒತ್ತಿ ಒತ್ತಿ ಹೇಳಿದರು. ಬಹುತೇಕ ಹವ್ಯಕ ಸಮುದಾಯದವರೇ ತುಂಬಿರುವ ಆ ಸಮಾನಮನಸ್ಕರ ಸಭೆ ರಾಘವೇಶ್ವರ ಸ್ವಾಮಿಯ ಆಚಾರಹೀನ ನಡೆಯನ್ನು ವಿಮರ್ಶಿಸುವುದರ ಕುರಿತಾಗಿತ್ತು. ಸಭೆಯಲ್ಲಿ ತೋಳ್ಪಾಡಿಯವರು ಮಾತನ್ನಾಡುತ್ತಿದ್ದ ವೇಳೆ ಛೂಬಿಡಲ್ಪಟ್ಟ ಕೆಲ ಪುಂಡ ಯುವಕರು ತೋಳ್ಪಾಡಿಯವರ ಮೇಲೆ ಹಲ್ಲೆ ನಡೆಸಲೂ ಮುನ್ನುಗ್ಗಿದ್ದರು. ವಿಶೇಷವೆಂದರೆ ಸ್ವತಃ



ಹವ್ಯಕ ಸಮುದಾಯಕ್ಕೆ ಸೇರದ ಜೊತೆಗೆ ರಾಘವೇಶ್ವರ ಸ್ವಾಮಿಗಳ ಆಪ್ತರೂ ಆಗಿರುವ ತೋಳ್ಪಾಡಿಯವರು ಎಲ್ಲೂ ಅಸಭ್ಯವಾಗಿ ಮಾತನ್ನಾಡಿರಲೇ ಇಲ್ಲ. ಕರೆದದ್ದಕ್ಕಾಗಿ ಬಂದು ವಿಚಾರವನ್ನು ಸಾಂದರ್ಭಿಕವಾಗಿ ವಿಶ್ಲೇಷಿಸಿದರೆ ವಿನಹ ಈ ಸ್ವಾಮಿಯನ್ನು ಜೈಲಿಗಟ್ಟಬೇಕು, ಆತ ಅತ್ಯಾಚಾರಿ, ಹಾಗೆ ಹೀಗೆ ಎಂದು ಎಲ್ಲೂ ಹತೋಟಿ ತಪ್ಪಿ ಮಾತನ್ನಾಡಿರಲೇ ಇಲ್ಲ. ತಮ್ಮ ಮಾತಿನಲ್ಲಿ ಅವರು ಇಂಥಾದ್ದೇ ಮನೋಭಿಲಾಷೆಗೆ ಸಿಕ್ಕಿ ಒದ್ದಾಡಿದ ಸ್ವಾಮಿಯೊಬ್ಬರ ವಿಚಾರ ಹಿಂದೊಮ್ಮೆ ತಮ್ಮೆದುರು ಬಂದಾಗ ತಾನದಕ್ಕೆ ಉತ್ತರಿಸಿದ ರೀತಿಯನ್ನು ಕೂಡ ವಿವರಿಸಿದ್ದರು. ತಮ್ಮ ಸಹಪಾಠಿ ಹಾಗು ಮಿತ್ರರಾಗಿರುವ ವಿದ್ಯಾಭೂಷಣರ ಪ್ರೇಮ-ಮದುವೆಯ ವಿಚಾರ ತಮ್ಮೆದುರು ಬಂದಾಗ ಅವರು ಉತ್ತರಿಸಿದ್ದು ಬರೀ ಮೂರೇ ಶಬ್ದದಲ್ಲಂತೆ. ಅದೆಂದರೆ "ಪ್ರ ಕೃ ತಿ" ಎಂದು ಅಷ್ಟೆ. 'ಇವೆಲ್ಲ ಪ್ರಕೃತಿ ಸಹಜ ವಿಚಾರಗಳು ತಾನು ಅದಕ್ಕೂ ಮಿಗಿಲಾದವನೆಂಬ ತೋರಿಕೆಯ ಮೊಂಡಾಟಗಳೆಲ್ಲ ಯಾತಕ್ಕಾಗಿ?' ಎಂದವರು ಆ ಸಭೆಯಲ್ಲಿ ಪ್ರಶ್ನಿಸಿದ್ದರು. ಹೆಣ್ಣೊಬ್ಬಳ ಕುರಿತಾಗಿ ಅನ್ಯಾಯವೊಂದು ನಡೆದಿರುವಾಗ ಇನ್ನೂ ಈ ನಾಟಕಗಳು, ಕಳ್ಳಾಟಗಳು, ಆರೋಪ- ಬೆದರಿಕೆಗಳು ಇವೆಲ್ಲ ಯಾತಕ್ಕಾಗಿ? ಅದಕ್ಕಾಗೆ ಈ ಹವ್ಯಕರಿಗೇನಾಗಿಡೆ? ಎಂದವರು ಪುನಃ ಪ್ರಶ್ನಿಸಿದ್ದರು.



ನಿನ್ನೆ ಮಾಜಿ ಸಂಸದ ಎಚ್. ವಿಶ್ವನಾಥ್ ಅವರು ಕೂಡ ಇದೇ ರೀತಿ ತಮ್ಮದೇ ಸರಕಾರಕ್ಕೆ 'ಈ ಸರಕಾರಕ್ಕೇನಾಗಿದೆ?' ಎಂದು ತೋಳ್ಪಾಡಿಯವರ ರೀತಿಯಲ್ಲೇ ಪ್ರಶ್ನಿಸಿದ್ದಾರೆ. ಆಹಿಂದ ಸ್ವಾಮಿಗಳನ್ನು ದೂರು ಬಂದ ತಕ್ಷಣ ಬಂಧಿಸುವ ಸರಕಾರ ಮೇಲ್ವರ್ಗದ ಸ್ವಾಮಿಯ ಮೇಲೆ ಗುರುತರವಾರ ಅತ್ಯಾಚಾರದ ದೂರು ಬಂದಾಗಲೂ ಯಾವ ಕ್ರಮವನ್ನೂ ಕೈಗೊಳ್ಳದೇ ಇದೀಗ ಅಂಥದ್ದೇ ಮತ್ತೊಂದು ದೂರು ಬಂದಾಗಲೂ ಬಂಧಿಸದೇ ಆತನ ಮರ್ಜಿಯಲ್ಲೇ ಇದ್ದಂತೆ ತೆಪ್ಪಗಿರುವುದು ಸರಕಾರದ ಬಗ್ಗೆ ತಪ್ಪಭಿಪ್ರಾಯವನ್ನು ಕೊಡುವ ಅಪಾಯವಿದೆ ಎಂದು ಸರಕಾರವನ್ನು ಎಚ್ಚರಿಸಿದ್ದಾರೆ. ನಿಜಕ್ಕೂ ಹೇಳಿ ಈ ಜನಪರ ಸರಕಾರಕ್ಕೇನಾಗಿದೆ. ರಾಘವೇಶ್ವರ ಸ್ವಾಮಿ ಅಷ್ಟೊಂದು ಬಲಾಢ್ಯನೇ? ಅಥವ ಇನ್ನೆಷ್ಟು ಅಮಾಯಕ ಹೆಣ್ಣುಗಳು ದೂರು ಕೊಡಬೇಕು ಅಥವ ಜನ ಬೀದಿಗಿಳಿಯುವಂತಾಗಬೇಕು? ಆಡಳಿತ ಚುಕ್ಕಾಣಿ ಹಿಡಿದವರೇ ಉತ್ತರಿಸಬೇಕು.

- ಅವಿನಾಶ್ ಎಮ್.ಎಸ್. ನೆಲ್ಲಿಕಾರ್

ಹವ್ಯಕ ಮಹಿಳೆಯರ ಪಾಡು

ಕರಾವಳಿಯ ಹವ್ಯಕರಾಗಲಿ ಅಥವಾ ಮಲೆನಾಡಿನ ಹವ್ಯಕರಾಗಲಿ ಈ ಸಮುದಾಯದ ಗಂಡು-ಹೆಣ್ಣಿನ ಅನುಪಾತದಲ್ಲಿ ಹೆಣ್ಣುಗಳ ಸಂಖ್ಯೆ ತುಂಬಾ ಕಡಿಮೆ ಇರುವುದರಿಂದ ಸ್ವಜಾತಿ ಗಂಡುಗಳು ಹೆಣ್ಣು ಹೆತ್ತವರ ಕಾಲಿಗೆ ಬಿದ್ದು ತಾವೇ ಎಲ್ಲಾ ಖರ್ಚು ವಹಿಸಿಕೊಂಡು ಹವ್ಯಕ ಹೆಣ್ಣುಗಳನ್ನು ಮದುವೆಯಾಗುತ್ತಿದ್ದರು. ಆದರೆ ಹಿಂದಿನ ಒಂದು ವರ್ಷದಿಂದ ಪರಿಸ್ಥಿತಿ ಒಮ್ಮೆಲೇ ಉಲ್ಟಾ ಆಗಿದೆ. ಗೋಸ್ವಾಮಿಯ ಅತ್ಯಾಚಾರದ ಕರ್ಮಕಾಂಡ ಬಯಲಾದ ಮೇಲೆ, ಗೋಸ್ವಾಮಿಯ ಯಾವುದೇ ಮಠಕ್ಕೆ ಸಂಬಂಧಪಟ್ಟ ಹಾಸ್ಟೆಲಿನಲ್ಲಿ ಇದ್ದುಕೊಂಡು ಶಾಲೆ-ಕಾಲೇಜು ಕಲಿತ ಹವ್ಯಕ ಹೆಣ್ಣುಗಳನ್ನು ಗಂಡಿನ ಕಡೆಯವರು ಮದುವೆಯಾಗಲು ಹಿಂದೆ ಮುಂದೆ ನೋಡುತ್ತಿದ್ದಾರೆ. ಮಠದ ಹಾಸ್ಟೆಲುಗಳಲ್ಲಿದ್ದ ಎಲ್ಲ ಸುಂದರ ಹೆಣ್ಣುಗಳನ್ನು ಗೋಸ್ವಾಮಿ ಭೋಗಿಸಿರಲೇ ಬೇಕು ಎಂಬ ಪೂರ್ವಾಗ್ರಹ ಸಾಮಾನ್ಯ ಹವ್ಯಕ ಬ್ರಾಹ್ಮಣರು ಈಗ ಹೊಂದಿರುವುದರಿಂದ, ಅಂತಹ ಮದುವೆಯ ವಯಸ್ಸಿನ ಹೆಣ್ಣುಗಳ ಜೀವನ ಈಗ ಒಂದು ವರ್ಷದಿಂದ ದುರ್ಬರವಾಗಿದೆ. ಅಂತಹವರಿಗೆ ಗಂಡುಗಳೇ ಸಿಗುತ್ತಿಲ್ಲ. ಅಷ್ಟೇ ಅಲ್ಲ ಹಲವಾರು ವರ್ಷಗಳ ಹಿಂದೆಯೇ ಮದುವೆಯಾಗಿ ಮಕ್ಕಳಾಗಿ ಸುಖವಾಗಿದ್ದ ಮಹಿಳೆಯರ ಬಗ್ಗೆಯೂ, ಅವರು ಹಿಂದೊಮ್ಮೆ ಮಠದ ಹಾಸ್ಟೆಲಿನಲ್ಲಿ ಇದ್ದರು ಅಥವಾ ಮಠದೊಂದಿಗೆ ನಿಕಟ ಸಂಬಂಧ ಹೊಂದಿ ಯಾವುದಾದರೂ ಕಲೆ ಅಥವಾ ಸಂಗೀತದಲ್ಲಿ ಪರಿಣಿತಿ ಹೊಂದಿದ್ದರು ಎಂದು ಗಂಡಂದಿರಿಗೆ ಈಗೀಗ ಗೊತ್ತಾದರೂ ಸಾಕು, ಅವರು ತಮ್ಮ ಹೆಂಡಂದಿರ ವಿವಾಹಪೂರ್ವ ಇತಿಹಾಸದ ಮೇಲೆ ಸಂಶಯ ಹೊಂದುವಂತಹ ವಿಷಮ ಪರಿಸ್ಥಿತಿ ಈಗ ಒಮ್ಮೆಲೇ ಉದ್ಭವವಾಗಿ ಹವ್ಯಕ ಸಮಾಜದಲ್ಲಿ ಬಿರುಗಾಳಿ ಎಬ್ಬಿಸಿದೆ. ಆದರೆ ಎಲ್ಲಾ ಕಾವಿಧಾರಿ ಹೆಣ್ಣುಬಾಕರಿಗೆ ರಾಜಕೀಯ ರಕ್ಷಣೆ ಸಿಗುತ್ತಿರುವುದು ನಮ್ಮ ದೇಶದ ದೊಡ್ಡ ದುರಂತ.

ಕೆಳಜಾತಿಯ ಬಂಜಾರ ಮಠದ ಸ್ವಾಮೀಜಿಯ ಮೇಲೆ ಒಬ್ಬ ಹೆಣ್ಣುಮಗಳು ಮದುವೆಯ ವಾಗ್ದಾನ ಮಾಡಿ ಮೋಸ ಮಾಡಿದ ದೂರು ಪೊಲೀಸರಿಗೆ ಕೊಟ್ಟ ಕೂಡಲೇ ಆ ಬಂಜಾರ ಸ್ವಾಮಿಯನ್ನು ಅರೆಸ್ಟ್ ಮಾಡಿ ಜೈಲಿಗೆ ದಬ್ಬಲಾಯಿತು. ಆದರೆ ದಲಿತ ಬಂಜಾರಾ ಸ್ವಾಮಿಗಿಂತ ಹೆಚ್ಚು ಗುರುತರ ಅತ್ಯಾಚಾರದ ಆರೋಪ ಹೊತ್ತಿರುವ ಬ್ರಾಹ್ಮಣ ಗೋಸ್ವಾಮಿಗೆ ತಕ್ಷಣ ಬೇಲು ಸಿಗುತ್ತಿದೆ. ಕಾನೂನು ಎಲ್ಲರಿಗೂ ಸಮನಾಗಿಲ್ಲ, ಕಾನೂನುಪಾಲಕರು ಜಾತಿ ನೋಡಿ ನ್ಯಾಯದಾನ ಮಾಡುತ್ತಾರೋ ಎಂಬ ಸಂಶಯ ಮೂಡುತ್ತಿದೆ. ಅಪರಾಧ ಒಂದೇ ತೆರನಾಗಿದ್ದರೂ ಬೇರೆ ಬೇರೆ ಜಾತಿಯ ಸ್ವಾಮಿಗಳಿಗೆ ಬೇರೆ ಬೇರೆ ಕಾನೂನು!

ನಮ್ಮ ಪುರಾಣಗಳಲ್ಲಿಯೇ ಬರೆದಿಲ್ಲವೇ - ದೇವರೆಂಬ ಸುರರು ಪತಿವ್ರತೆಯ ರೇಪ್ ಮಾಡಿದರೂ ಅದು ಅತ್ಯಾಚಾರವಲ್ಲ ಅದು ವೀರ್ಯದಾನ ಅಥವಾ ಪಾಪಿ ಹೆಣ್ಣಿಗೆ ಮೋಕ್ಷ ಪ್ರಧಾನ. ಆದರೆ ಅಸುರರು-ರಾಕ್ಷಸರು ಪತಿವ್ರತೆಯನ್ನು ದೂರದಿಂದ ನೋಡಿದರೂ ಸಾಕು ಅದು ಅತ್ಯಾಚಾರ! ನಮ್ಮ ಪವಿತ್ರ ಪುರಾಣಗಳೆಲ್ಲಾ ಸುರರ (ದೇವರ) ರಾಸಲೀಲೆ, ರಸಿಕತೆ, ಕಾಮುಕತೆಯಿಂದಲೇ ತುಂಬಿದೆ. ಎಷ್ಟಾದರೂ ಲೈಂಗಿಕತೆಯೇ ನಮ್ಮ ಸನಾತನ ಸಂಸ್ಕೃತಿಯ ಕೇಂದ್ರ ಬಿಂದು ತಾನೇ! ಅನೈತಿಕತೆ ಮತ್ತು ಅಶ್ಲೀಲತೆಯನ್ನು ವೈದಿಕ ಧರ್ಮ ವೈಭವೀಕರಿಸಿದಷ್ಟು ಜಗತ್ತಿನ ಬೇರಾವ ಧರ್ಮವೂ ವೈಭವೀಕರಿಸಿಲ್ಲ, ಅದಕ್ಕೆ ಸಾಕ್ಷಿ ಭಸ್ಮಾಸುರ ಮೋಹಿನಿ ಕಥೆಯೊಂದೇ ಸಾಕು.

- ಹರೀಶ್ ಎಂ ರಾವ್, ಉಡುಪಿ

ಈರುಳ್ಳಿ ರಾಜಕೀಯ

ಈರುಳ್ಳಿ ತಿನ್ನುವುದರಿಂದ ತರುಣರಲ್ಲಿ ಮಾತ್ರವಲ್ಲ



70-80 ವರ್ಷದ ಮುದಿಯರಲ್ಲೂ ತಾಮಸ ಗುಣ ಬೆಳೆಯುತ್ತದೆ ಹಾಗೂ ಮನಸ್ಸು ಕೆಟ್ಟ ಕೆಲಸಗಳನ್ನು ಮಾಡುವಂತೆ ಪ್ರೇರೇಪಿಸುತ್ತದೆ ಎಂದು ಜೈನರು ಹಾಗೂ ಹರೇಕೃಷ್ಣ ಪಂಥಿಗಳು ಯಾವಾಗಲೂ ಬೋಧಿಸುತ್ತಿರುತ್ತಾರೆ. ಆದರೆ ಈಗ ಈರುಳ್ಳಿ ರಾಜಕೀಯ ನೋಡಿದರೆ ಈರುಳ್ಳಿ ತಿನ್ನದ ಸಮುದಾಯಗಳೇ ತಾಮಸ ಗುಣ ಬೆಳೆಸಿಕೊಂಡಿರುವಂತೆ ತೋರುತ್ತಿದೆ (ಲಂಕೇಶ್-ಸೆ.16).

ಮನುಷ್ಯನ ಆಹಾರ ಪದ್ಧತಿಗೂ ಅವನ ಗುಣ-ಸ್ವಭಾವಕ್ಕೂ ಸಂಬಂಧವಿಲ್ಲ ಎಂದು ಈಗ ಮತ್ತೆ ಈರುಳ್ಳಿ ರಾಜಕೀಯ ಸಾಬೀತುಮಾಡಿದೆ. ಯಾವ ಧರ್ಮ ಅತೀ ಹೆಚ್ಚು ತ್ಯಾಗ ಮತ್ತು ಅಹಿಂಸೆ ಬೋಧಿಸುತ್ತದೆಯೋ ಅದೇ ಧರ್ಮದವರು ಅತೀ ಹೆಚ್ಚು ಲಾಭಬಡುಕತನ ಮತ್ತು ರಕ್ತ ಪಿಪಾಸುತನ ತೋರಿಸುತ್ತಿರುವುದು ನಿಜ. ಭಾರತದ ಯಾವುದೇ ಪ್ರದೇಶಕ್ಕೆ ಹೋದರೂ ಆಹಾರ ಧಾನ್ಯಗಳ ಕಳ್ಳ ದಾಸ್ತಾನು ಹಾಗೂ ಮೀಟರ್ ಬಡ್ಡಿ ಲೇವಾದೇವಿ ಮಾಡುತ್ತಿರುವವರು ರಾಜಸ್ಥಾನದ ಮಾರವಾಡ ಪ್ರದೇಶದಿಂದ ವಲಸೆ ಬಂದಿರುವವರೇ. ತ್ಯಾಗವೀರ ಬಾಹುಬಲಿ ಸ್ವಾಮಿಯ ಹೆಸರಲ್ಲಿ ಯಾವಾಗಲೂ ಬಾಯಲ್ಲಿ ತ್ಯಾಗ ಅಹಿಂಸೆಯ ಮಂತ್ರ ಜಪಿಸುತ್ತಾ ಮನದಲ್ಲಿ ಮಾತ್ರ ಹೀನ ಲೋಭ-ದುರಾಸೆ ಇಟ್ಟುಕೊಂಡಿರುವವರು. ಮಹಾರಾಷ್ಟ್ರದ ಯಾವುದೇ ಪ್ರದೇಶಕ್ಕೆ ಹೋದರೂ ಕೃಷಿ ಮಾರುಕಟ್ಟೆ ಇರುವುದು ರಾಜಸ್ಥಾನಿ ಜೈನರ ಕಪಿಮುಷ್ಟಿಯಲ್ಲಿ. ಆದಕ್ಕಾಗಿ ಇಡೀ ಭಾರತದಲ್ಲಿಯೇ ಅತೀ ಹೆಚ್ಚು ರೈತರ ಆತ್ಮಹತ್ಯೆಗಳೂ ಆಗುವುದು ಮಹಾರಾಷ್ಟ್ರದಲ್ಲಿಯೇ. ಮಹಾರಾಷ್ಟ್ರ-ಕರ್ನಾಟಕದ ಹೆಚ್ಚಿನ ಈರುಳ್ಳಿ ಮಾರುಕಟ್ಟೆ ಕೇವಲ 40-50 ರಾಜಸ್ಥಾನಿ ಜೈನ ಕುಟುಂಬಗಳ ಕೈಯಲ್ಲಿರುವುದು ನಿಜಕ್ಕೂ ಆತಂಕಕಾರಿ ವಿಷಯ. ಈ ವರ್ಷ ಈರುಳ್ಳಿಯ ಫಸಲು ಹಿಂದಿನ ವರ್ಷದಷ್ಟೇ ಬಂದಿದ್ದರೂ ಬೆಲೆ ಮಾತ್ರ ಮೂರು ಪಟ್ಟು ಏರಲು ಮೂಲ ಕಾರಣ ಈ ವ್ಯಾಪಾರಿಗಳು ಕಳೆದ ವರ್ಷ ಲೋಕಸಭೆ ಚುನಾವಣೆಗೆ ಕೊಟ್ಟ ಕೋಟ್ಯಾಂತರ ದೇಣಿಗೆಯ ಮರು-ವಸೂಲಿಗಾಗಿ ಹೂಡಿರುವ ತಂತ್ರ.

ಸ್ವಜಾತಿ ಬಂಧು ಅಮಿತ್ ಶಾನ ಕೃಪಾಹಸ್ತ ಇವರ ಮೇಲಿರುವುದು ಗುಟ್ಟಾಗಿ ಉಳಿದಿಲ್ಲ. ಅದಕ್ಕಾಗಿಯೇ ಭಾರತದಲ್ಲಿ ನಿಜವಾಗಿ ಈರುಳ್ಳಿ ಕೊರತೆ ಇರದಿದ್ದರೂ ಕೃತಕ ಕೊರತೆ ಸೃಷ್ಟಿಸಿ ಈಜಿಪ್ಟ್ - ಅಫಘಾನಿಸ್ತಾನದಲ್ಲಿ ಭಾರತದ ಇಪ್ಪತ್ತು ರೂಪಾಯಿಗೆ ಸಮನಾದ ಬೆಲೆಯಲ್ಲಿ ಈರುಳ್ಳಿ ಲಭ್ಯವಿದ್ದರೂ ಅದನ್ನು ಸರಕಾರ 45 ರೂಪಾಯಿಗೆ ಆಮದು ಮಾಡಿಕೊಳ್ಳುತ್ತಿದೆ. ಇದರಿಂದ ಭಾರತೀಯ ಕಳ್ಳ ದಾಸ್ತಾನುಗಾರರು ಬಚ್ಚಿಟ್ಟರುವ ಈರುಳ್ಳಿ ಹೊರ ತೆಗೆದಾಗ ಆದರ ಬೆಲೆ 45-50 ರೂಪಾಯಿಗೆ ಕಡಿಮೆಯಾಗಬಾರದು ಹಾಗೂ ಮಾರುಕಟ್ಟೆಯಲ್ಲಿ ಈರುಳ್ಳಿ ಬೆಲೆ ಒಮ್ಮೆಲೇ 15-20 ರೂಪಾಯಿಗೆ ಕುಸಿದು ಭಾರತೀಯ ಮಾರವಾಡಿ ಕಳ್ಳ ದಾಸ್ತಾನುಗಾರರಿಗೆ ನಷ್ಟವಾಗಬಾರದು ಎಂಬ ದೂರದೃಷ್ಟಿಯ ತಂತ್ರ ಇದರ ಹಿಂದಿದೆ. ವಿದೇಶದಲ್ಲಿ ಈರುಳ್ಳಿ ಬೆಲೆ ಇಪ್ಪತ್ತು ರೂಪಾಯಿ, ಆದರೆ ಆಮದು ಇನ್ವಾಯಿಸ್ ಮಾಡಿದ್ದು 45 ರೂಪಾಯಿಗೆ! ಹೀಗೆ ಕೃತಕವಾಗಿ ಉಬ್ಬಿಸಿರುವ (ಇನ್ಫ್ಲೇಟೆಡ್) ಇನ್ವಾಯಿಸ್‌ನಲ್ಲಿರುವ 25 ರೂಪಾಯಿ ಡಿಫರನ್ಸ್ ಯಾರ ಸ್ವಿಸ್ ಬ್ಯಾಂಕ್ ಖಾತೆ ಸೇರಲಿದೆ? ಸರಕಾರದಲ್ಲಿರುವ ಕೆಲವು ಸ್ಥಾಪಿತ ಹಿತಾಸಕ್ತಿಗಳೇ ಕಳ್ಳ ದಾಸ್ತಾನುಗಾರರ ಲಾಭಖೋರತನಕ್ಕೆ ರಕ್ಷಣೆ ನೀಡುತ್ತಿವೆ, ಜತೆಗೇ ತಾವೂ ಲಾಭ ಮಾಡಿಕೊಳ್ಳುತ್ತಿದ್ದಾರೆ ಎಂದು ಇದರಿಂದ ಸಾಬೀತಾಯಿತು.

ಬಿಹಾರ ಚುನಾವಣೆ ಗೆಲ್ಲಬೇಕಾದರೆ ಭಾರಿ ಫಂಡು ಬೇಕು ತಾನೇ! ಕೇವಲ ನಾಲ್ಕು ವರ್ಷಗಳ ಹಿಂದೆಯೂ ಇಂತಹದ್ದೇ ಪರಿಸ್ಥಿತಿ ಉದ್ಭವಿಸಿದ್ದಾಗ ಆಗಿನ ಕೇಂದ್ರ ಸರಕಾರ ಮಹಾರಾಷ್ಟ್ರದ ಎಲ್ಲಾ ಕಳ್ಳ ದಾಸ್ತಾನುಗಾರರ ಮೇಲೆ ದಾಳಿ ನಡೆಸಿದ ನಂತರ ಈರುಳ್ಳಿ ಬೆಲೆ ಇಪ್ಪತ್ತು ರೂಪಾಯಿಗೂ ಕಡಿಮೆಗೆ ಒಮ್ಮೆಲೇ ಕುಸಿದಿತ್ತು. ಈಗ ಮಾತ್ರ ಹಾಗೆ ಮಾಡಲಾಗುತ್ತಿಲ್ಲ, ಕಾರಣ ಹೆಚ್ಚಿನ ಮಾರವಾಡಿ ವರ್ತಕರೆಲ್ಲಾ ಬಿಜೆಪಿ ಸದಸ್ಯರು ತಾನೇ!

- ಅಭಿಷೇಕ್ ಪಡಿವಾಲ್ ಜೈನ್, ಮೈಸೂರು

ಕಲಬುರ್ಗಿಯವರ ಹತ್ಯೆಯನ್ನು ನೋಡಿ ಪ್ರಗತಿಪರ ಚಿಂತಕರ ಬಗ್ಗೆ ಆತಂಕವಾಗಿದ್ದ ನನಗೆ ಈ ವಾರ 'ಕಂಡಹಾಗೆ' ಓದಿ ಇನ್ನಷ್ಟು ದಿಗಿಲಾಗಿದೆ. ಒಂದು ವೇಳೆ ಹಿಂದೂಮೂಲಭೂತವಾದ ಹೆಮ್ಮರವಾದರೆ ಅಪಾಯ ಕಟ್ಟಿಟ್ಟ ಬುತ್ತಿ, ಇದನ್ನು ಆರಂಭದಲ್ಲೇ ಚಿವುಟ ಬೇಕಾಗಿದೆ. ರಾಘವೇಂದ್ರ ಸ್ವಾಮಿಗಳ ಬಗ್ಗೆ ತಕ್ಷಣ ದೂರು ಕೊ... ನಿರ್ಧರಿಸುವುದು ಒಳ್ಳೆಯದೆ ಆಯಿತು. ಕಲಬುರಗಿ... ಹತ್ಯೆಯನ್ನು ಖಂಡಿಸುವ ಕೆಲವರ ಹೇಳಿಕೆಗ... ಗಮನಿಸಿದಾಗ, ಕಲಬುರ್ಗಿಯವರ ಹತ್ಯೆಯ... ಪ್ರಗತಿಯಲ್ಲಿರುವಾಗ ನಿನ್ನೆ ಮಹಾರಾಷ್ಟ್ರ ಇಂದು ಕ... ಎಂದರಿತು ಇಂತಹವರೇ ಎಂದು ಬೊಟ್ಟು ಮಾಡು... ಇನ್ನೊಂದು ರೀತಿಯ ಪ್ರಚೋದನೆ ಆಗುವುದು, ... ಆಗಲಿ ಸಾಹಿತಿಯೊಬ್ಬರ ಹತ್ಯೆ ನಾಡಿನ ಮಣ್ಣಿಗೆ ಅ... ಕಳಂಕ.

- ಡಿ.ಎಲ್. ಮಂಜು, ಈ ಮೇಲ್ ಮ...

ಮೇಕ್ ಇನ್ ಇಂಡಿಯಾದಲ್ಲಿ ಉಚಿತ ಸೈಕಿಯಾಟ್ರಿಸ್ಟ್?

ವೀರಶೈವರಲ್ಲಿ ಹಾಗೂ ಲಿಂಗಾಯತರಲ್ಲಿ ಸ್ವ... ಸಂಘಟನೆ ಇಲ್ಲ, ಕೆಲವು ಸ್ವಾಮೀಜಿಗಳು ಹಾಗೂ ಮ... ಬಸವಣ್ಣನ ಮೂಲ ತತ್ವವನ್ನು ಪ್ರತಿಪಾದಿಸಿ... ಅನುಸರಿಸಿದರೆ ಇನ್ನೂ ಹಲವು ಬ್ರಾಹ್ಮಣ್ಯದ ಅಂಶಗಳನ್ನು ಲಿಂಗಾಯತ ಧರ್ಮದಲ್ಲಿ ಸೇರಿಸಿವೆ. ... ಮಠಗಳು ಹಿಂದೂವಾದಿಗಳೊಂದಿಗೆ ಕೈಜೋ... ಮಲೆಬೆನ್ನೂರಿನ ನಜೀರನ ಬಗ್ಗೆ ಹಾಗೂ ... ಮುರುಘಾಮಠಕ್ಕೆ ಭೇಟಿನೀಡಿ ಅಲ್ಲಿ ಗೌರಿ ಅವರು ... ಮಾತುಗಳನ್ನು ಕೇಳಿ ಲಿಂಗಾಯತರು ಎಚ್ಚರಗೊಳ್ಳಬ...

ಇಂದು ಲಿಂಗಾಯತರು ಹೋಮಹವನ... ಮಾಡುವುದರಲ್ಲಿ ತಲ್ಲೀನರಾಗಿದ್ದಾರೆ. ಲಿಂಗಾಯ... ಆಂತರಿಕವಾಗಿ ನಿಷ್ಕ್ರಿಯವಾಗಿದ್ದಾರೆ. ಹಾಗಾಗಿಯೇ ಅ... ಬ್ರಾಹ್ಮಣ್ಯ ಆಕ್ರಮಿಸಿದೆ. ಮಾನವರು ತಮ್ಮ ಸ್ವಾ... ಪ್ರಕೃತಿಗನುಸಾರವಾಗಿ ಅತ್ಯಂತ ಆನಂದವಾಗಿದ್ದರೆ ಜ... ಯಾವ ಧರ್ಮದ ಅವಶ್ಯಕತೆಯೂ ಇರುವ... ಧರ್ಮವನ್ನು ಅಸ್ತಿತ್ವದಲ್ಲಿಡಲು ಮಾನವೀಯತೆ... ಅಡವಿಡಲಾಗಿದೆ. ಇದರ ಬಗ್ಗೆ ಈಗಾಗಲೇ ಗೌರಿ ... ಬರಹಗಳಲ್ಲಿ, ಭಾಷಣಗಳಲ್ಲಿ ಹೇಳಿದ್ದಾರೆ.

ಇನ್ನೂ ಸೆಗಣಿ ಸ್ವಾಮಿಯು ಪೀಠ ಉಳಿಸಿಕೆ... ಪ್ರಯತ್ನವಾದ ಧ್ವನಿಸುರುಳಿ ಬಗ್ಗೆ ಬಹಳ ಉತ್ತಮ... ಪತ್ರಿಕೆ ಮಾಡಿದೆ. ಪತ್ರಿಕೆಗಳು ಡಿಟೆಕ್ಟಿವ್ ಆಗಿ ... ಮಾಡುವುದರೊಂದಿಗೆ ಸಮಾಜದಲ್ಲಿ ಉತ್ತಮ ಮೌ... ಸ್ಥಾಪಿಸಬೇಕು ಎನ್ನುವ ಆಶಯ ಲಂಕೇಶ್ ... ಸಫಲಮಾಡುತ್ತಿದೆ.

ವಾಟ್ಸಾಪ್ ಟೆರರಿಸಂನಲ್ಲಿ ಹಿಂದೂ ಪ್ರ... ಹಿಂದೂತ್ವವನ್ನು ಪ್ರತಿಯೊಂದರಲ್ಲೂ ಕಾಣುತ್ತಿರುವ... ಪ್ರತಿಯೊಬ್ಬರನ್ನು ಹಿಂದೂತ್ವಕ್ಕೆ ಅಟ್ಯಾಚ್ ಮಾಡು... ಪ್ರಯತ್ನವನ್ನು ಗಿರೀಶ್ ತಾಳಿಕಟ್ಟೆ ಬಹಳ



ವರ್ಣಿಸಿದ್ದಾರೆ. ಎಲ್ಲರನ್ನು ಮುಂದಿಟ್ಟುಕೊಂಡು ... ಧರ್ಮದ ಪ್ರತಿಷ್ಠೆಯನ್ನು ಕ್ಲೇಮ್ ಮಾಡಿಕೊಳ್ಳುತ್ತಾರೆ... ವಿಡಂಬಿಸಿರುವ ಅವರ ಗ್ರಹಿಕೆ ಚೆನ್ನ... ಹಿಂದೂತ್ವವಾದಿಗಳು ತಾಜ್ ಮಹಲ್‌ಅನ್ನು ... ಅದ್ಯಾವುದೋ ಪಿ.ಎನ್.ಓಕ್ ಬರೆದ ಸಂಶ... ಇಟ್ಟುಕೊಂಡು ತೇಜೋ ಮಹಾಲಯ ... ವಾದಿಸುತ್ತಿದ್ದಾರೆ. ಹುಚ್ಚು ಅತಿಯಾಗಿದೆ ಮತ್ತು ಕೇ... ತಮ್ಮದೇ ಒಂದು ಕೋತಿಯಿದೆ ಎನ್ನುವ ಆ... ಇದ್ದಾಗ ಇನ್ನೆಂತಹ ಪ್ರಲಾಪ ನಡೆಯಲು ಸಾಧ್ಯ...

ಹಿಂದೂತ್ವವಾದಿಗಳಿಗೆ ಸೈಕಿಯಾಟ್ರಿಸ್ಟ್‌ನ ... ಇರುವುದರಿಂದ ಮೋದಿ ಸೈಕ್ಯಾಟ್ರಿಕ್ ಡಾಕ್ಟರ... ಉಚಿತವಾಗಿ ಕಾರ್ಯನಿರ್ವಹಿಸಲು ತನ್ನ ಮೇಕ್... ಇಂಡಿಯಾ ಕಾರ್ಯಕ್ರಮದಲ್ಲಿ ಕಾರ್ಯರೂಪಿಸ...

- ಡಾ.ಅಭಿನಂದನ ಬಳ್ಳಾರಿ, ಬೆಂಗ...

ಈ ವಾರದ 'ಕಂಡಹಾಗೆ' ಪುಟದಲ್ಲಿ ... ತತ್ತರಿಸಿದ ಕಲಬುರ್ಗಿ ಕೊಲೆ' ಎಂಬ ಶೀರ್ಷಿ... ವ್ಯಾಕರಣ ದೋಷವಿದೆ. ಅದು 'ನಾಡನ್ನೇ ತತ್ತ... ಮಾಡಿದ ಕಲಬುರ್ಗಿ ಕೊಲೆ' ಎಂದಾಗಬೇಕಿತ್ತು...

- ಭೀಮನಗೌಡ ಕಾಶಿರೆಡ್ಡಿ, ಈ ಮೇಲ್ ...

ವಿ.ಸೂ. : ನಿಮ್ಮ ಅನಿಸಿಕೆಗಳನ್ನು ...
lankesh70@rediffmail.com
ಅಥವಾ ಬರಹ ತಂತ್ರಾಂಶದಲ್ಲಿ ಕಳುಹಿಸಬಹು...
ಪ್ರತಿಕ್ರಿಯೆಗಳನ್ನು 9980331427 ನಂ...
ಚಿಕ್ಕದಾಗಿ ಮತ್ತು ಚೊಕ್ಕದಾಗಿ SMS ಕಳುಹಿ...

ಪ್ರೇಕ್ಷಕರ ಅಭಿರುಚಿಯಂತೆ ಬದಲಾಗಬೇಕು

ರವಸೆ ನಾಯಕಿಯರ ಮೊದಲ ಸ್ಥಾನದಲ್ಲಿ ನಿಲ್ಲುವ ನಟಿ ಅಮೂಲ್ಯ. ಹೆಚ್ಚು ಸಂಭಾವನೆಯ ಜತೆಗೆ ಅಪರೂಪದ ಪಾತ್ರಗಳಲ್ಲಿ ಕಾಣಿಸಿಕೊಳ್ಳುತ್ತಿದ್ದಾರೆ. ಅಲ್ಲದೇ ಬೋಲ್ಡ್ ಬೋಲ್ಡ್ ಪಾತ್ರಗಳ ಮೂಲಕ ಕುತೂಹಲ ಮೂಡಿಸುತ್ತಿದ್ದಾರೆ.



** ನೀವು ಬಾಲಕಲಾವಿದರಾಗಿಯೂ ...ಚಿದವರು. ಈಗಿನ ದಿನಗಳನ್ನು ಆ ಹೊತ್ತಿಗೆ ...ಲಿಸಿದರೆ ಹೇಗನ್ನಿಸುತ್ತೆ?*

...ಆ ಕಾಲವೇ ಬೇರೆ, ಇದುವೇ ಬೇರೆ. ...ಲಿಕೆ ಕಷ್ಟ ಅಂದುಕೊಳ್ಳುತ್ತೇನೆ. ಅವತ್ತು ...ು ಚೈಲ್ಡ್ ಆರ್ಟಿಸ್ಟ್. ಅಂದು ...ರಬೇಕಿತ್ತೋ ಹಾಗಿದ್ದೆ. ನಟಿಯಾದ ...ಲೆ, ಹಾಗೆ ಇರೋಕೆ ಆಗಲ್ಲ, ಎಲ್ಲರೂ ...ುವಂತೆ ನಾನು ಸಾಕಷ್ಟು ಬದಲಾಗಿದ್ದೇನೆ. ...ಬದಲಾವಣೆ ನಾನು ಮಾಡಿಕೊಂಡಿದ್ದಲ್ಲ. ಆಯಾ ...ಗಳು ಮಾಡಿದ್ದು. ಅಂದು ಕೇವಲ ನಟಿಯಾಗಿ ...ಗಿ ಪಾತ್ರ ಮಾಡುತ್ತಿದ್ದೆ. ಯಾವುದೇ ಜವಾಬ್ದಾರಿ ...ಲ್ಲ. ಈಗ ಜವಾಬ್ದಾರಿ ಹೊರಲೇಬೇಕು.

** ಸಿನಿಮಾರಂಗವನ್ನು ಬಿಟ್ಟುಹೋದವರು ಮತ್ತೆ ...ದ್ದೀರಿ. ಬರದೇ ಇದ್ದಿದ್ದರೆ?*

...ಈವರೆಗೂ ನಾನು ಯಾವುದನ್ನೂ ಪ್ಲಾನ್ ಮಾಡಿ ಮಾಡಿಲ್ಲ. ಸಿನಿಮಾ ರಂಗವನ್ನು ಬಿಟ್ಟುಹೋಗಿದ್ದಕ್ಕೂ ಒಂದು ಕಾರಣವಿದೆ. ಚಿತ್ರರಂಗದಿಂದ ದೂರ ಇದ್ದವಳನ್ನು ಮತ್ತೆ ಸೆಳೆದದ್ದು ಸಿನಿಮಾ ರಂಗದವರು. ಓದಿಕೊಂಡು ಇದ್ದವಳನ್ನು ಕರೆತಂದಿದ್ದಾರೆ. ಬಂದನಂತರ ಅಭಿಮಾನಿಗಳು ಮತ್ತೆ ಕೈ ಹಿಡಿದಿದ್ದಾರೆ. ಸಿನಿಮಾ ರಂಗಕ್ಕೆ ಬರದೇ ಹೋಗಿದ್ದರೆ ಓದಿನಲ್ಲೇ ಮುಂದುವರೆದಿರುತ್ತಿದ್ದೆ.

** ಟ್ರೆಡಿಷನಲ್ ಲುಕ್‌ನಲ್ಲಿ ಕಾಣಿಸಿಕೊಳ್ಳುತ್ತಿದ್ದ ಅಮೂಲ್ಯ ಇಂದು ಮಾಡರ್ನ್ ಲುಕ್‌ಗೆ ಬದಲಾಗಿದ್ದಾರೆ. ಈ ಬದಲಾವಣೆ ಹಿಂದಿನ ರಹಸ್ಯವೇನು?*

ನಾನು ಆಗಲೇ ಹೇಳಿದೆನಲ್ಲ, ನಾನಾಗಿಯೇ ಯಾವತ್ತೂ ಬದಲಾಗಿಲ್ಲ ಅಂತ. ನನಗೆ ಸಿಕ್ಕ ಪಾತ್ರಗಳಂತೆ ನಿರ್ದೇಶಕರೇ ನನ್ನನ್ನು ಬದಲಾಯಿಸುತ್ತಿದ್ದಾರೆ. ಅವರ ಪಾತ್ರವನ್ನು ನನ್ನ ಮೂಲಕ ನೋಡುತ್ತಿದ್ದಾರೆ. ಹೀಗಾಗಿ ಅದು ಹೊಸ ಲುಕ್ ಎನಿಸುತ್ತಿದೆ. 'ಚೆಲುವಿನ ಚಿತ್ತಾರ' ಮತ್ತು ಇತರ ಚಿತ್ರಗಳಲ್ಲಿ ನನ್ನದು ಹೋಮ್ಲಿ ಪಾತ್ರ. ಅದರಂತೆ ಇದ್ದೆ. 'ಗಜಕೇಸರಿ' ಚಿತ್ರದಲ್ಲಿ ಮಾಡ್ ಹುಡುಗಿ. ಅದರಂತೆ ಚೇಂಜ್ ಆದೆ. ಪಾತ್ರಗಳ ಅಗತ್ಯಕ್ಕೆ ಎಲ್ಲಾ ಕಲಾವಿದರು ಬದಲಾಗಲೇಬೇಕು.

** ಗಣೇಶ್ ಮತ್ತು ನಿಮ್ಮ ನಡುವೆ ಮನಸ್ತಾಪ ಆಗಿದೆ ಅಂತೆಲ್ಲ ಸುದ್ದಿ ಇದೆಯಲ್ಲಾ?*

ಸುಖಾಸುಮ್ಮನೆ ರೂಮರ್ ಹುಟ್ಟಿಸುತ್ತಲೇ ಇರುತ್ತಾರೆ. ಅದೆಲ್ಲ ಸುಳ್ಳು. ಅಷ್ಟಕ್ಕೂ ಅವರಿಗೂ ನನಗೂ ಯಾಕೆ ಮನಸ್ತಾಪ ಆಗಬೇಕು. ಒಟ್ಟಿಗೆ ಎರಡ್ಮೂರು ಸಿನಿಮಾಗಳಲ್ಲಿ ನಟಿಸಿದ್ದೇವೆ. ಅವಕಾಶ ಸಿಕ್ಕರೆ ಇನ್ನೂ ನಟಿಸುತ್ತೇವೆ. ಅವರು ಒಳ್ಳೆಯ ನಟ.

** ಸದ್ಯ ಯಾವ ಚಿತ್ರಗಳಲ್ಲಿ ನಟಿಸುತ್ತಿದ್ದೀರಿ? ಪಾತ್ರಗಳೇನು?*

ಕವಿರಾಜ್ ನಿರ್ದೇಶನದಲ್ಲಿ 'ಮದುವೆಯ ಮಮತೆಯ ಕರೆಯೋಲೆ', ಚಿರಂಜೀವಿ ಸರ್ಜಾ ಜತೆಗೆ 'ರಾಮಲೀಲಾ'ದಲ್ಲಿ ಪಾತ್ರ ಮಾಡುತ್ತಿರುವೆ. ಎರಡೂ ಭಿನ್ನ ಪಾತ್ರಗಳು. ಕವಿರಾಜ್ ಅವರ ಚಿತ್ರದಲ್ಲಿ ಸ್ಕೂಲ್ ಬೋಲ್ಡ್ ಪಾತ್ರ. ಸಾಕಷ್ಟು ಮಾತಾಡುತ್ತೇನೆ. ನಿರ್ದೇಶಕರು ಈ ಪಾತ್ರವನ್ನು ಕಲರ್‌ಫುಲ್ಲಾಗಿ ಕಟ್ಟಿಕೊಟ್ಟಿದ್ದಾರೆ. 'ರಾಮಲೀಲಾ'ದಲ್ಲಿ ಮತ್ತೊಂದು ರೀತಿಯ ಪಾತ್ರ. ಕಾಲೇಜ್ ಹುಡುಗಿಯಂತೆ ಕಂಡರೂ, ಪಾತ್ರಕ್ಕೆ ಹಲವು ಆಯಾಮಗಳಿವೆ.


** ಪಾತ್ರಗಳಿಗಾಗಿ ಏನೆಲ್ಲ ತಯಾರಿ ಮಾಡಿಕೊಳ್ಳುತ್ತೀರಿ?*

ತಯಾರಿ ಅಂತ ಏನೂ ಇರುವುದಿಲ್ಲ. ಕತೆ ಕೇಳುವಾಗಲೇ ನಾನು 'ನನ್ನಿಂದ ಈ ಪಾತ್ರವನ್ನು ನಿರ್ವಹಿಸಲು ಸಾಧ್ಯನಾ?' ಎಂದು ಕೇಳಿಕೊಳ್ಳುತ್ತಾನೆ. ಪಾತ್ರ ಮಾಡುತ್ತೇನೆ ಅನಿಸಿದರೆ ಒಪ್ಪಂದ ಪತ್ರಕ್ಕೆ ಸಹಿ ಮಾಡುತ್ತೇನೆ. ಅದಕ್ಕೆ ತಕ್ಕದಾದ ತಯಾರಿ ಅಂತ ಏನೂ ಇರುವುದಿಲ್ಲ. ಯಾಕೆಂದರೆ, ನಿರ್ದೇಶಕರ ಕನಸಿನ ಪಾತ್ರದ ಕುರಿತು ಅವರೇ ಹೇಳಿರುತ್ತಾರೆ. ಅವರು ಹೇಳಿದಂತೆ ನಾವು ಕೇಳುತ್ತೇವೆ. ಕಲಾವಿದೆಯಾಗಿ ನಾನು ನನ್ನ ಪಾತ್ರಕ್ಕೆ ನ್ಯಾಯ ಸಲ್ಲಿಸಬೇಕು. ಆ ಕೆಲಸ ಮಾಡುತ್ತೇನೆ.

** ಸಂಭಾವನೆ ಹೆಚ್ಚಿಸಿಕೊಂಡಿದ್ದೀರಿ ಎಂಬ ಮಾತಿದೆ. ಈಗ ಎಷ್ಟು ತೆಗೆದುಕೊಳ್ಳುತ್ತೀರಿ?*

ಯಾವತ್ತೂ ನಾನು ದುಡ್ಡಿಗೆ ಪಾತ್ರ ಮಾಡಿದವಳು ಅಲ್ಲ, ಈಗಲೂ ಅದನ್ನು ಮಾಡುವುದಿಲ್ಲ. ನನ್ನಿಂದ ಚಿತ್ರಕ್ಕೆ ಸಹಾಯ ಆಗುತ್ತದೆ ಎನ್ನುವವರು ಸಂಭಾವನೆ ಹೆಚ್ಚು ಕೊಡುತ್ತಾರೆ. ನನಗೆ ಸಂಭಾವನೆಗಿಂತ ಪಾತ್ರ ಮುಖ್ಯ. ಹೀಗಾಗಿ ಹೊಸ ನಟರ ಜತೆಯೂ ನಾನು ಕಾಣಿಸಿಕೊಳ್ಳುತ್ತಿದ್ದೇನೆ. ■

...ಬಾಡು ಅಂದ್ರೆ ಬಾಯಿಬಾಯಿ ಬಿಡೋರು



ಗೋಮಾತೆ ಅಂದರೆ ಮೂವತ್ತ ಮೂರು ಕೋಟಿ ...ವತೆಗಳನ್ನು ತನ್ನ ಒಡಲಲ್ಲಿ ಇಟ್ಟುಕೊಂಡಿರುವ ...ಮಾತೆ ಅಲ್ವ. ಗೋಮಾಂಸ ಭಕ್ಷಣೆ ಅಂದ್ರೆ ಈ ...ಲ್ಲಿ ದೇವತೆಗಳನ್ನೂ ಗುಳುಂ ಅನ್ನಿಸಿದಂಗೆ ತಾನೆ. ಗೋ ...ಮರ ಭಾವನೆಗಳು ಇಂತಹವುಗಳಿಂದ ಯದ್ವಾತದ್ವಾ ...ವು ತಿನ್ನೋದು ಸಹಜವೇ ಸರಿ. ಇತ್ತೀಚೆಗೆ ...ಗಳೂರಿನಲ್ಲಿ ಇಂತಹ ನೋವಾಗಿದ್ದತ್ತಂತೆ. ಅದನ್ನು ...ಡಿದೋರು ಪಟ್ಟಾಭಿರಾಮ ಸೋಮಯಾಜಿ ...ನೋರಂತೆ. ಅವರು ಮಂಗಳೂರು ವಿಶ್ವವಿದ್ಯಾಲಯದ ...ಷ್ ಪ್ರಾಧ್ಯಾಪಕರಂತೆ. ಅವರೇನು ಮಾಡವ್ರಂತೆ ಅಂದ್ರೆ, ...ು ವಿವೇಕಾನಂದರು ಅಂದರೆ ವೀರ ಸನ್ಯಾಸಿ ಅಲ್ವಾ. ...ಸಿ ಆದೋರು ಮಾಂಸ ಮಡ್ಡಿ ಮುಟ್ಟೋದೇ ಇಲ್ಲ ...ನ್ನೋದು ಪ್ರಪಂಚಕ್ಕೆ ತಿಳಿದಿರೋ ವಿಷಯ. ಅಂತಹದ್ದರಲ್ಲಿ ...ವುದೋ ಸಭೆಯಲ್ಲಿ ಈ ಪ್ರೊಫೆಸರ್ ಸಾಹೇಬರು ...ೀಕಾನಂದರು 'ಬೀಫ್‌ಸ್ಟೇಕ್' ತಿನ್ನುತ್ತಿದ್ದರು ...ಮಬಿಡೋದಾ.

...ಇಷ್ಟೇ ಆಗಿದ್ರೆ ಹಾಳಾಗಿ ಹೋಗ್ಲಿ ಇವನು ತಲೆ ...ಕ್ರೇಜಿ ತರಹ ಬಡಬಡಿಸ್ತಿದಾನೆ ಅಂತ ...ಬಿಡಬಹುದಿತ್ತೇನೊ. ಆ ಮನುಷ್ಯ ಇದನ್ನ ಇನ್ನೂ ...ಮುಂದುವರೆಸಿ ಅಟಲ್ ಬಿಹಾರಿ ವಾಜಪೇಯಿಯನ್ನೂ ...ಬಂದವನೆ. ಅವರೋ ಹುಟ್ಟಾ ಬ್ರಾಹ್ಮಣರು. ...ರೋರು ಬಾಡ ಬಾಯಿ ಹತ್ರಕೆ ಸೇರಿಸಾದ್ರೂ ಸೇರಿಸ್ತಾರ. ...ದ ಗ್ಯಾಸ ಇಲ್ದೆ ಆ ಪ್ರೊಫೆಸರ್ರು ಅನ್ನಿಸಿಕೊಂಡಿರೋನು ...ಜೋನು ದನಿನ ಬಾಡು ಅಂದ್ರೆ ಬಾಯಿಬಾಯಿ ಬಿಡ್ತಿದ್ರ ...ಲ್ಲಿ ಏನೇನೋ ಮಾತಾಡವ್ನೆ, ಸಭೆ ಕಲಾಪದ ...ಗಳನ್ನು ಸೆರೆ ಹಿಡಿಯಲು ಬಂದಿದ್ದ ಒಂದು ...ಟಿವಿ ಚಾನೆಲ್‌ಗೆ ಈ ಮಾತುಗಳನ್ನು ಕೇಳಿ ಬಹಳ ...ಯಿತಂತೆ. ದನದ ಮಾಂಸ ತಿಂತಿದ್ದರು ಅಂತ ...ಧೀಮಂತರಿಗೆ ಅವಮಾನ ಮಾಡಿರುವುದು ಅಕ್ಷಮ್ಯ ...ಜನತೆಯ ಕ್ಷಮೆ ಕೋರಬೇಕು ಎಂದೆಲ್ಲ ...ಕೊಂಡು ಕೊನೆಯಲ್ಲಿ ವೀಕ್ಷಕರಿಗೆ ಒಂದು ...ಒಬ್ಬ ಯೂನಿವರ್ಸಿಟಿ ಪ್ರೊಫೆಸರ್ ಆಗಿ ಇಂತಹ ...ಗಳನ್ನು ಹೇಳಬಹುದೆ?

...ವೇಕಾನಂದರು 'ಬೀಫ್‌ಸ್ಟೇಕ್' ಅಂಬೋ ...ನ್ನು, ಆಗಿಂದ ಕರೀತಿದ್ದದ್ದು, ವಾಜಪೇಯಿ ಬಾಯಿ ಚಪ್ಪರಿಸಿಕೊಂಡು ದನಿನ ಬಾಡು ತಿನ್ನುತ್ತಿದ್ದುದು ನಿಜ. ಅದು ಗೊತ್ತಿದ್ದವರು ಹಾಗಂತ ಹೇಳದೆ ಇನ್ನೇನು ಅವರು ಅಪ್ಪಟ ಸಸ್ಯಾಹಾರಿಗಳಾಗಿದ್ದರು ಅಂತ ಸುಳ್ಳು ಹೇಳಬೇಕಾಗಿತ್ತ ಎಂದೆಲ್ಲ ಕೆಲವು ಪ್ರಗತಿಪರರು ಇದಕ್ಕೆ ತಕರಾರು ಎತ್ತುತ್ತಿದ್ದಾರೆ. ರೀ ಪ್ರಗತಿಪರರೆ ಅದು ಹಂಗಲ ಕಣ್ರಿ. ಈಗ ಆರೆಸ್ಸೆಸ್‌ನವರು ಸಾಂಸ್ಕೃತಿಕ ಸಂಘಟನೆ ಅಂತ ರಾಜಕೀಯದಲ್ಲಿ ಮೂಗು ತೂರಿಸುತ್ತಿಲ್ಲವೆ ಹಂಗೆ ಮೂಗಂಡುಗ ಮಾಂಸ ತಿನ್ನುತ್ತಿದ್ದರೂ ಮಾಂಸದ ಹೆಸರು ಕೇಳಿದ್ರೆ ಅವರೆಲ್ಲ ಮಾರು ದೂರ ಹಾರುತ್ತಿದ್ರು ಅನ್ಬೇಕು ಕಣ್ರಿ. ಅದೇ ಬದುಕೋರ ಲಕ್ಷಣ. ನಿಜ ತಾನೆ?

ಪ್ರಜ್ಞಾವಂತಿಕೆ ಸುತ್ತಾಮುತ್ತಾ

ಬೆಂಗಳೂರಿನ ಮತದಾರರು ಪ್ರಜ್ಞಾವಂತರಂತೆ!

ಯಾರಿಗೆ ಆದ ಜ್ಞಾನೋದಯ ಇದು?

ಜಗ್ಗೇಶ್‌ಗೆ, ಅಶೋಕ್‌ಗೆ, ಇನ್ನು ಯಾರ್‍ಯಾರಿಗೋ ಹಂಗಾಗಿದೆಯಂತೆ.

ಅರೆರೆ ಇವರಿಂಗೆ ಇದ್ದಕ್ಕಿದ್ದಂತೆ ಪ್ರಜ್ಞಾವಂತ ಮತದಾರರು ಆದ್ರು ಅಂದ್ರೆ, ಬಿಬಿಎಂಪಿ ಚುನಾವಣೇಲಿ ಭಾಜಪ ಗೆಲ್ಸಿದಾರಂತೆ!

ಅಂದರೆ ಏನಾಯಿತು ಪ್ರಜ್ಞಾವಂತ ಮತದಾರನ ಅಳತೆಗೋಲು ಚುನಾವಣೆಯಲ್ಲಿ ಗೆಲ್ಲಿಸುವುದು. ಭಾಜಪ ಗೆಲ್ಸಿದರೆ ಅವನು ಭಾಜಪ ಪ್ರಜ್ಞಾವಂತ. ಕಾಂಗ್ರೆಸ್ ಗೆಲ್ಲಿಸಿದರೆ ಕಾಂಗ್ರೆಸ್ ಪ್ರಜ್ಞಾವಂತ. ಜೆಡಿಎಸ್ ಗೆಲ್ಲಿಸಿದರೆ ಜೆಡಿಎಸ್ ಪ್ರಜ್ಞಾವಂತ ಅಂದಂಗಾಯ್ತು.

ಭಾಜಪ ನಾಯಕಮಣಿಗಳು ಮತದಾರರನ್ನ ಪ್ರಜ್ಞಾವಂತರು ಅಂತ ತಾರೀಫು ಮಾಡಿದ್ದರಲ್ಲ ಆ ಪ್ರಜ್ಞಾವಂತಿಕೆಯಲ್ಲಿ ವಸಿ ಯಡವಟ್ಟಾಗಿರೋ ಹಂಗದೆ. ಭಾಜಪ ಅಧಿಕಾರ ಹಿಡಿಯೋಕೆ ಏಣಿಯೇನೋ ಹಾಕವ್ರೆ. ಆದರೆ ಆ ಏಣಿ ವಸಿ ತುಂಡಾಗಿದ್ದತಂತೆ. ಹ್ಯಂಗಾರ ಅಧಿಕಾರದ ಚುಕ್ಕಾಣಿ ಹಿಡಿಯೋದ್ಕೆ ಏದುಸಿರು ಬಿಡ್ತಾ ಅವ್ರಂತೆ ಬಿಜೆಪಿಯೋರು. ಅದೇನ್ ಮಾಡವ್ರಂತೆ ಅಂದ್ರೆ ಜೇನು ಸುರಿಸಿದಂಗೆ ಮಾತಾಡ್ತರೆ ಅಂತಾರಲ್ಲ ಹಂಗೆ ಕಾಂಗ್ರೆಸ್ ಪ್ರಜ್ಞಾವಂತರೊಡನೆ ಕಷ್ಟಸುಖ ವಿಚಾರಿಸಿಕೊಂಡರಂತೆ. 'ಚುನಾವಣೆ ಅಂದ್ರೆ ಸುಮ್ನೆ ಆಯ್ತದಾ. ಕೋಟಿಗಟ್ಲೆ ಹಣ ಚರಂಡೀಲಿ ಕೊಚ್ಚೆ ನೀರು ಹರಿದಂಗೆ ಹರೀತದೆ' ಅಂತ ಅವರು ಮಾತಿಗಿಳೀತಾರಂತೆ. 'ಸಾಲಸೋಲ ಆಗಿರ್ಬೇಕು. ತೀರ್ಸಕೇನು ಮಾಡೀಯೆ' ಅಂತ ಸುಪ್ಪಿ ಆಡ್ತಾರಂತೆ.

'ಯಂಗೋ ಆಯ್ತದೆ ಬುಡಣ್ಣಾ' ಅಂತಾರಂತೆ ಅವ್ರು.

'ಯಂಗೋ ಆಯ್ತದೆ ಅಂದ್ರೆ, ಯಂಗಪ್ಪಾ, ಮೀಟ್ರು ಬಡ್ಡೀಗೆ ತಂದಿದ್ದೀಯಂತೆ ನಿಜವಾ.'

'ಹೂಂ. ವಸಿ ಹಂಗೂ ತಂದಿದೀನಿ.'

'ನೋಡ್ದ ಮೀಟ್ರು ಬಡ್ಡಿ ಅಂದ್ರೆ ಸುಮ್ನೆ ಆಯ್ತಾ, ತಿಂಗಳು ತಿಂಗಳು ಅದೇ ಸಾವಿರಾರು ರೂಪಾಯಿ ಆಯ್ತದೆ ಅಲ್ವಾ.'

'ಹೂಂ ಆಯ್ತದೆ!'

'ಕೈಸಾಲನೂ ಇರ್ಬೇಕು?'

'ಹೂಂ ವಸಿ ಅದೆ.'

'ಕೈ ಸಾಲ ಅಂತೀಯೆ. ಮೀಟ್ರು ಬಡ್ಡಿ ಸಾಲ ಅಂತೀಯೆ. ವಸಿ ಆಯ್ತದೇನಯ್ಯ.'

'ಎಂಗಾರ ತೀರುಸ್ಲೇಬೇಕಲ್ವ.'

'ಅದು ಸರಿ. ನೀನು ನಾಲಗೆ ಇರೋ ಮನ್ಸ. ನಿನ್ನ ಕಷ್ಟ ನೋಡಲಾರೆ ಕನಯ್ಯ. ಒಂದು ಕೆಲ್ಸ ಮಾಡು.'

'ಅದೇನು ಹೇಳಣ್ಣ.'

'ಈ ಸಾಲದ ಮಾತ ಮರ್ತುಬುಡು. ಅದ ನಾವು ತೀರುಸ್ಕತ್ತೀವಿ. ಅದರ ಮೇಲೂ ಏನಾರ ಮಾಡಾನ. ಸುಮ್ನೆ ನಮ್ ಪಾರ್ಟಿಗ್ಬಂದ್ಬುಡು.'

ಇಂತಹ ಸಂಭಾಷಣೆಯನ್ನು ಕೇಳಿದರೆ ಎಂತಹವರಿಗಾದರೂ ಪ್ರಜ್ಞಾವಂತಿಕೆ ಮೆರೆಯುವಲ್ಲಿ ಹಣದ್ದು ಪ್ರಮುಖ ಪಾತ್ರ ಎಂದು ಅರಿವಾಗುತ್ತದೆ. ಅಂದರೆ ಏನಾಯಿತು ಮತದಾರನ ಪ್ರಜ್ಞಾವಂತಿಕೆಯಲ್ಲಿ ಹಣದ ಪ್ರಜ್ಞಾವಂತಿಕೆಯೂ ಸೇರಿದೆ ಎಂದಾಯಿತು.

ಹಣ ಅಂದರೆ ಹೆಣಾನೂ ಬಾಯಿ ಬಿಡುತ್ತೆ ನಿಜ. ಆದರೂ ಕುಲಸ್ತ ಅನ್ನೋದು ಒಂದು ಇರುತ್ತಲ್ಲ, ಅದನ್ನ ಅಲ್ಲಗಳೆಯುವಂತಿಲ್ಲ. ಪ್ರಜ್ಞಾವಂತಿಕೆಯಲ್ಲಿ ಕುಲದ್ದೇ ಮೇಜರ್ ರೋಲು. ಅದು ಹಣವನ್ನು ತುಳಿದುಹಾಕುತ್ತೆ. ಮತದಾರನ ಪ್ರಜ್ಞಾವಂತಿಕೆಯಲ್ಲಿ ಅದರ ಪಾಲೂ ಇರುತ್ತದೆ. ಒಟ್ಟಿನಲ್ಲಿ ಬೆಂಗಳೂರಿನ ಪ್ರಜ್ಞಾವಂತ ಮತದಾರಿಕೆ= ಪ್ರಜ್ಞಾಪ್ರಭುತ್ವ ಪ್ರಜ್ಞಾವಂತಿಕೆ+ ಹಣದ ಪ್ರಜ್ಞಾವಂತಿಕೆ+ಜಾತಿಯ ಪ್ರಜ್ಞಾವಂತಿಕೆ+ ಇತರ ಪ್ರಜ್ಞಾವಂತಿಕೆಗಳು ಅಂತ ಹೇಳಬಹುದು.

ಇಷ್ಟೆಲ್ಲ ಪ್ರಜ್ಞಾವಂತಿಕೆ ಮೆರೆದ ಮತದಾರನಿಂದ ಆಯ್ಕೆಯಾದ ಕಾರ್ಪೊರೇಟರ್ರು ಇದಾರಲ್ಲ ಅವರು ಮಹಾಪ್ರಜ್ಞಾವಂತರೇ ಆಗಿರಬೇಕು ಅಲ್ವಾ. ಈ ಮಹಾನುಭಾವ, ಭಾವೆಯರು ಸೇರಿ ಮೇಯರ್ ಆಯ್ಕೆ ಮಾಡಬೇಕು. ಈಗ ಎಲ್ಲಿದ್ದಾರೆ ಅವರು ಅಂದರೆ ರೆಸಾರ್ಟ್‌ಗಳಲ್ಲಿ! ಮಹಾಪ್ರಜ್ಞಾವಂತ ಮತದಾರರು ಮಾರಾಟ ಆಗಿಬಿಟ್ಟಾರು ಎಂಬ ಭಿಗಿಲಿಗೆ ಅವರನ್ನೆಲ್ಲ ಅಲ್ಲಿ ಕೂಡಿಹಾಕಿದ್ದಾರಂತೆ!

ಏನು ಪ್ರಜ್ಞಾವಂತಿಕೆ! ಎಂತಹ ಪ್ರಜಾಪ್ರಭುತ್ವ!!

■ ಎಚ್ಚೆಲ್ಕೆ

Registered No.RNP/KA/BGS/2036/2014-16 Posted at :BGPSO, Mysore Road, Bangalore-26 Thursday R B P LANKESH, Kannada Weekly Price Rs. 15/- 23-09-2015 RNI No. KARKA



ಮೋಸದ ನೀರ್‌ದೋಸೆ

ಗಾಂಧಿನಗರದಲ್ಲಿ ಮೋಸ ಮಾಡುವವರು ಮತ್ತು ಮೋಸ ಹೋಗುವವರು ಇನ್ನೂ ಕಡಿಮೆ ಆಗಿಲ್ಲ ಎನ್ನುವುದು ಮತ್ತೊಮ್ಮೆ ಸಾಬೀತಾಗಿದೆ. ಕೋಟಿ ಕಳೆದುಕೊಂಡ ನಿರ್ಮಾಪಕನೊಬ್ಬ 'ನೀರ್‌ದೋಸೆ' ಟೀಮ್ ವಿರುದ್ಧ ಗರಂ ಆಗಿದ್ದಾರೆ.

ಜಗ್ಗೇಶ್ ಮತ್ತು ರಮ್ಯಾ ನಟನೆಯ 'ನೀರ್‌ದೋಸೆ'ಯ ವಿವಾದ ತೀರಾ ಹಳೆಯದ್ದು. ಈ ಚಿತ್ರದ ಟೀಮ್ ಸರಿ ಇಲ್ಲ ಅನ್ನುವ ಕಾರಣಕ್ಕೆ ರಮ್ಯಾ ಈ ಚಿತ್ರದಿಂದಲೇ ಹೊರನಡೆದರು. ನಿರ್ಮಾಪಕರು ಚಾನೆಲ್ ನೀಡಿದ್ದ ಟೀವಿ ರೈಟ್ಸ್‌ನ್ನೇ ಹಿಂದಿರುಗಿಸದೇ ಸತಾಯಿಸಿದರು. ಆನಂತರ ಚಿತ್ರವೇ ನಿಂತುಹೋಗಿತ್ತು.

ಆರೇಳು ತಿಂಗಳ ನಂತರ ಮತ್ತೆ 'ದೋಸೆ'ಗೆ ಜೀವಬಂತು. ಅಶು ಬೆದ್ರ ಎಂಬ ನಿರ್ಮಾಪಕ ಒಂದಿಷ್ಟು ದುಡ್ಡು ಕೊಟ್ಟು ಸಿನಿಮಾದ ರೈಟ್ಸ್ ಪಡೆದರು. ಅಲ್ಲಿದ್ದ ಎಲ್ಲಾ ಸಮಸ್ಯೆಗಳಿಗೂ ಪರಿಹಾರ ಕಂಡುಕೊಂಡರು. ಇನ್ನೇನು ಅವರು ಸಿನಿಮಾ ಶೂಟಿಂಗ್ ಶುರು ಮಾಡಬೇಕು ಅನ್ನುವಷ್ಟರಲ್ಲಿ ಬೆದ್ರನಿಗೂ ನಾಮ ಹಾಕಿದ್ದಾರೆ ಹಳೆಯ ನಿರ್ಮಾಪಕರು. ಬೆದ್ರರಿಗೆ ಗೊತ್ತಾಗದಂತೆ ಮತ್ತೊಬ್ಬ ನಿರ್ಮಾಪಕನನ್ನು ಸೃಷ್ಟಿ ಮಾಡಿ ಸಿನಿಮಾ ಮುಹೂರ್ತ ಮಾಡಿದ್ದಾರೆ. ಇದಕ್ಕೆ ಸಾಕ್ಷಿ ಆಗಿದ್ದ ನಿರ್ದೇಶಕ ವಿಜಯಪ್ರಸಾದ್ ಮತ್ತು ಜಗ್ಗೇಶ್ ಮಾತ್ರ ಮೌನ ವಹಿಸಿದ್ದಾರೆ. ತಮಗೆ ಬರಬೇಕಾದ ಸಂಭಾವನೆ ಪಡೆದಿರುವ ನಿರ್ದೇಶಕರಿಗೆ ಮತ್ತು ಜಗ್ಗೇಶ್ ವಿರುದ್ಧ ಬೆದ್ರ ಗರಂ ಆಗಿದ್ದಾರೆ. ಮತ್ತೆ ಸಿನಿಮಾ ನಿಲ್ಲುವ ಭೀತಿ ಎದುರಾಗಿದೆ.

ಹೋರಾಟಕ್ಕೆ ಪ್ರೇಮ್

ಸಾಮಾಜಿಕ ಬದ್ಧತೆ ಇರುವ ಕೆಲವೇ ಕೆಲವು ನಟರಲ್ಲಿ ಪ್ರೇಮ್ ಕೂಡ ಒಬ್ಬರು. ಪ್ರೇಮ್‌ಗೆ ಹೋರಾಟದ ಹಿನ್ನೆಲೆ ಇದೆ. ಪ್ರಗತಿಪರ ಚಿಂತಕರ ಒಡನಾಟವಿದೆ. ಹೀಗಾಗಿಯೇ ಕಾರ್ಮಿಕರ ಸಂಘಟನೆ ಜತೆ ಗುರುತಿಸಿಕೊಳ್ಳುತ್ತಾರೆ. ರೈತಪರ ಚಳವಳಿಗಳಿಗೂ ಹೋಗುತ್ತಾರೆ. ರೈತರ ಸರಣಿ ಆತ್ಮಹತ್ಯೆ ನಡೆದಾಗ ಅವರ ಮನೆಗಳಿಗೆ ಹೋಗಿ ರೈತ ಕುಟುಂಬಗಳ ಕಣ್ಣೊರೆಸುವ ಕಾಯಕ ಮಾಡಿದ್ದರು. ಈಗ ಅವರ ಹೋರಾಟದ ಮನಸು ನರಗುಂದಕ್ಕೆ ಪಯಣ ಬೆಳೆಸಿದೆ. ಮಹದಾಯಿ ಯೋಜನೆಗಾಗಿ ನಡೆಯುತ್ತಿರುವ ಉಪವಾಸ ಸತ್ಯಾಗ್ರಹದಲ್ಲಿ ಪಾಲ್ಗೊಳ್ಳಲು ಪ್ರೇಮ್ ನರಗುಂದಕ್ಕೆ ಹೋಗಿದ್ದರು. ಅಲ್ಲಿ ಪ್ರೇಮ್‌ಗೆ ಸಿಕ್ಕ ಪ್ರತಿಕ್ರಿಯೆ ಕಂಡ ಸಿನಿಮಾ ರಂಗ ಎಚ್ಚೆತ್ತು ಕೂತಿದೆ. ಇಡೀ ಸಿನಿರಂಗ ಒಟ್ಟಾಗಿ ಹೋರಾಟಕ್ಕೆ ಮುಂದಾಗಿದೆ. ನಟನೊಬ್ಬನ ಈ ಪ್ರೇಮ ಇತರರಿಗೆ ಮಾದರಿ ಆಗಿದ್ದು ವಿಶೇಷ.

ಗಿಮಿಕ್ ವಿಜಯ್

ದುನಿಯಾ ವಿಜಯ್ ಅಚ್ಚರಿ ಮೂಡಿಸುವಂತೆ ಬದಲಾಗುತ್ತಿದ್ದಾರೆ. ಸದಾ ಪ್ರಚಾರದಿಂದ ದೂರ ಇರುತ್ತಿದ್ದ ವಿಜಯ್ ಈಗ ಪ್ರಚಾರಕ್ಕಾಗಿ ಹಪಹಪಿಸುತ್ತಿದ್ದಾರೆ. ಎಷ್ಟರಮಟ್ಟಿಗೆಂದರೆ ಕ್ಯಾನ್ಸರ್ ಪೀಡಿತ ಅಭಿಮಾನಿಯನ್ನು ತಮ್ಮ ಚಿತ್ರದ ಪ್ರಚಾರಕ್ಕಾಗಿ ಬಳಸಿಕೊಳ್ಳುವ ಮೂಲಕ ಎಲ್ಲರ ಕೆಂಗಣ್ಣಿಗೆ ಗುರಿಯಾಗಿದ್ದಾರೆ.

ಮೊನ್ನೆಯಷ್ಟೇ ಬಿಡುಗಡೆಯಾದ 'ಆರ್‌ಎಕ್ಸ್ ಸೂರಿ' ಸಿನಿಮಾಗಾಗಿ ಅವರು ಏನೆಲ್ಲ ಗಿಮಿಕ್ ಮಾಡಿದರು ನೋಡಿ. ಮೊದಲು ಅದು ರೌಡಿಯೊಬ್ಬನ ಕತೆ ಅಂದರು. ಆಮೇಲೆ ನಾಯಕಿಯ ಜತೆ ಲಿಪ್‌ಲಾಕ್ ಮಾಡಿಕೊಂಡಿದ್ದಾರೆ ಎಂಬ ಸುದ್ದಿ ಹರಿಬಿಟ್ಟರು. ಕೊನೆಗೆ ಕ್ಯಾನ್ಸರ್‌ಪೀಡಿತ ರೋಗಿಯೊಬ್ಬ ಸಾಯುವ ಮೊದಲೇ 'ಆರ್‌ಎಕ್ಸ್ ಸೂರಿ' ಸಿನಿಮಾ ನೋಡಬೇಕೆಂಬ ಆಸೆಪಟ್ಟಿದ್ದಾನೆಂದು ಪ್ರಚಾರ ಪಡೆದರು. ಗಲ್ಲಾಪೆಟ್ಟಿಗೆಯಲ್ಲಿ ಸಿನಿಮಾ ಏನಾಯಿತು ಅಂತ ಎಲ್ಲರಿಗೂ ಗೊತ್ತಿದೆ. ಕ್ಯಾನ್ಸರ್ ಅಭಿಮಾನಿ ಸದ್ಯ ಚೆನ್ನಾಗಿಯೇ ಇದ್ದಾನೆ. ಆದರೆ, ಆತನನ್ನು ಬಳಸಿಕೊಂಡು ವಿಜಯ್ ಪ್ರಚಾರ ತೆಗೆದುಕೊಂಡಿದ್ದು ಅಕ್ಷಮ್ಯ ಅಪರಾಧ.

ಇನ್ನಾದರೂ, ಇಂಥ ಗಿಮಿಕ್‌ಗಳನ್ನು ಬಿಟ್ಟು, ಒಳ್ಳೆಯ ಸಿನಿಮಾ ಕೊಡಲಿ ಎಂಬುದು ಚಿತ್ರರಂಗದ ಆಶಯ.

ಗುರುಶಿಷ್ಯರ ಗಲಾಟೆ

ಸ್ಯಾಂಡಲ್‌ವುಡ್‌ನ ತಾಜಾ ಗುರುಶಿಷ್ಯರೆಂದೇ ಖ್ಯಾತರಾಗಿರುವ ದುನಿಯಾ ಸೂರಿ ಮತ್ತು ಯೋಗರಾಜ್ ಭಟ್ ಮತ್ತೆ ಗಲಾಟೆ ಮಾಡಿಕೊಂಡಿದ್ದಾರೆ. ಅದು ಸಿನಿಮಾ ಬಿಡುಗಡೆಗೆ ಸಂಬಂಧಿಸಿದ ಗಲಾಟೆ ಎನ್ನುವುದು ವಿಶೇಷ. ಈ ವಾರ ಸೂರಿಯ 'ಕೆಂಡಸಂಪಿಗೆ' ಬಿಡುಗಡೆ ಆಗುತ್ತಿದೆ. ಅಲ್ಲದೇ ಯೋಗರಾಜ್ ಭಟ್ ವಿತರಿಸುತ್ತಿರುವ 'ಗೀತಾ ಬ್ಯಾಂಗಲ್ ಸ್ಟೋರ್' ಕೂಡ ರಿಲೀಸ್ ಆಗುತ್ತಿದೆ. ಈ ಎರಡು ಸಿನಿಮಾಗಳ ಜತೆ ಇನ್ನೂ ಮೂರು ಚಿತ್ರಗಳಿಗೆ ಬಿಡುಗಡೆಯ ಭಾಗ್ಯ ದೊರೆತಿದೆ. ಇವೆಲ್ಲವಕ್ಕೂ ಥಿಯೇಟರ್ ಸಮಸ್ಯೆ ಎದುರಾಗಿದೆ. ಅದರಲ್ಲೂ 'ಕೆಂಡಸಂಪಿಗೆ' ಮತ್ತು 'ಗೀತಾ ಬ್ಯಾಂಗಲ್ ಸ್ಟೋರ್' ಚಿತ್ರಗಳ ಕುರಿತು ಸಾಕಷ್ಟು ನಿರೀಕ್ಷೆ ಇದೆ. ಈ ಮಧ್ಯೆ ಪೈಪೋಟಿ ಜೋರಾಗಿದ್ದರಿಂದ, ಒಂದು ಸಿನಿಮಾವನ್ನು ವಾಪಸ್ಸು ಪಡೆಯಬೇಕು ಎಂಬ ಮಾತುಕತೆ ನಡೆದಿದೆ. ಆದರೆ ಇಬ್ಬರೂ ಒಪ್ಪದೇ ಹೋದಾಗ, ಗಲಾಟೆಯೂ ನಡೆದುಹೋಗಿದೆ. ಒಮ್ಮತಕ್ಕೆ ಬಾರದೇ ಇರುವುದರಿಂದ ಈ ವಾರ ಎರಡೂ ಚಿತ್ರಗಳು ಬಿಡುಗಡೆ ಆಗುತ್ತಿವೆ. ಬಾಕ್ಸ್ ಆಫೀಸ್‌ನಲ್ಲಿ ಯಾರು ಗೆಲ್ಲುತ್ತಾರೋ ನೋಡಬೇಕು.

ಸ್ಸಾರಿ.. ನಾನು ನಟಿಸ

ಹೊಸಬರ ಸಿನಿಮಾಗಳ ಮೂಲಕವೇ ಸ್ಟಾರ್ ಆದ ನಟಿ ರಾಧಿಕಾ ... ಆದರೆ ಈಗ ರಾಧಿಕಾ ಅವರ ಕಾಲ್‌ಶೀಟ್ ಹೊಸಬರಿಗೆ ಸಿಗುತ್ತಿಲ್ಲ. ಅ... ಸ್ಟಾರ್ ನಟರಿಗೂ ಕಾಲ್‌ಶೀಟ್ ಸಿಗಲು ಸಾಕಷ್ಟು ಪರದಾಡಬೇಕು ... ನಿರ್ಮಾಣ ಆಗಿದೆ.

'ಮಿಸ್ಟರ್ ಅಂಡ್ ಮಿಸೆಸ್ ರಾಮಾಚಾರಿ' ಹಿಟ್ ಆಗುತ್ತಿದ್ದಂತೆಯೇ ... ಹುಡುಕಿಕೊಂಡು ಸಾಕಷ್ಟು ಚಿತ್ರಗಳು ಹೋದವು. ಅಲ್ಲದೇ ಅನೇಕ ... ಹಣದ ಮೂಟೆಯನ್ನೇ ಅವರ ಮನೆ ಮುಂದೆ ಇಟ್ಟರು. ಆದರೂ ರಾಧಿ... ಸಿನಿಮಾವನ್ನೂ ಒಪ್ಪಿಕೊಳ್ಳುತ್ತಿಲ್ಲ. ಕಾರಣ, ಅವರು ಮದ್ವೆ ತಯಾರಿ ಮಾಡಿಕೊ... ಇಂಥದ್ದೊಂದು ಸುದ್ದಿ ಗಾಂಧಿನಗರದಲ್ಲಿ ಹರಡಿ, ಅವರ ಕಿವಿಗೂ ... ಅವರಿಂದ ಯಾವುದೇ ಪ್ರತಿಕ್ರಿಯೆ ಇಲ್ಲ. ಸುದ್ದಿಗೆ ಪುಷ್ಟಿ ಎನ್ನುವಂತೆ ರಾ... ಯಾವುದೇ ಸಿನಿಮಾ ಒಪ್ಪಿಕೊಂಡಿಲ್ಲ.

ಯಶ್ ಮತ್ತು ರಾಧಿಕಾ ಮಧ್ಯೆ ಪ್ರೇಮಾಂಕುರ ಆಗಿದೆ ಅನ್ನುವ ಮಾತೂ ... ಪರೋಕ್ಷವಾಗಿ ಈ ಜೋಡಿ ಒಪ್ಪಿಕೊಂಡಿದ್ದೂ ಆಗಿದೆ. ಮುಂದಿನ ವರ... ಅನ್ನುವ ಮಾತಿದೆ.



PRINTER, PUBLISHER, PROPRIETOR AND EDITOR : GAURI LANKESH, No. 9, E.A.T.Street, Basavanagudi, Bangalore -4, Phone : 26676
Fax : 26604536, E-mail :lankesh70@rediffmail.com